


ಸಂಪುಟ 12 ಸಂಚಿಕೆ 34


## ಒಳಪುಟಗಳಲ್ಲಿ




# ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ವಾರಪತ್ರಿಕೆ

ರೂ 1.50

ಆಗಸ್ಟ್ 26, 1990


# ಮೀಸಲಾತಿ-ವಿರೋಧಿ ಚಳುವಳಿಯನ್ನು ಒಪ್ಪಲಾರೆವು

ಆಗಸ್ಟ್ 7, 1990 ರಂದು ಪ್ರಧಾನ ಮಂತ್ರಿ ವಿ.ಪಿ.ಸಿಂಗ್ ಸಂಸತ್ತಿನಲ್ಲಿ ಮಂಡಲ್ ಆಯೋಗದ ಶಿಫಾರಸುಗಳನ್ನು ಭಾಗಶ: ಜ್ಯಾರಿಗೆ ತರುವ ಸರಕಾರದ ಉದ್ದೇಶವನ್ನು ತಿಳಿಯಪಡಿಸಿದರು. 27 ಶೇಕಡಾ ಹಿಂದುಳಿದ ವರ್ಗಗಳಿಗೆ ಕೇಂದ್ರ ಸರಕಾರದ ಕಛೇರಿಗಳಲ್ಲಿ, ಕೇಂದ್ರ ಸಾರ್ವಜನಿಕ ವಲಯದಲ್ಲಿ ಉದ್ಯೋಗಾವಕಾಶಗಳ ಮೀಸಲಾತಿ ಸಂಬಂಧಪಟ್ಟ ಜಾತಿಗಳ ಆರ್ಥಿಕ, ಶೈಕ್ಷಣಿಕ ಹಿಂದುಳಿಕೆಯ ಮಟ್ಟಿಗೆ ನ್ಯಾಯಯುತ. ಆದರೆ ಪ್ರಶ್ನೆ ಎದ್ದೇ ಏಳುತ್ತದೆ. ಇಂತಹ ಕ್ರಮ ಅವರ ಆರ್ಥಿಕ, ಶೈಕ್ಷಣಿಕ ಹಿಂದುಳಿಕೆಯನ್ನು ನಿವಾರಿಸುವುದೇ? ಈ ಪ್ರಶ್ನೆ ಇನ್ನೂ ಪರಿಹಾರವಾಗಿಲ್ಲ. ಅತ್ತ ಮೇಲ್ಜಾತಿಗಳವರ ವ್ಯಾಪಕ ಚಳವಳಿ ಪರಿಸ್ಥಿತಿಯನ್ನು ಮತ್ತಷ್ಟು ಕ್ಲಿಷ್ಟಗೊಳಿಸಿದೆ.

ನಾಲ್ಕು ದಶಕಗಳ ಹಿಂದೆ ನಮ್ಮ ಸಂವಿಧಾನ ಶಿಲ್ಪಿಗಳು ಮೀಸಲಾತಿಯಿಂದ ಹರಿಜನ ಗಿರಿಜನರ ಸಮಸ್ಯೆಗಳು ಪರಿಹಾರಗೊಳ್ಳುವವು ಎಂದು ಆಶಿಸಿದ್ದರು. ಆರಂಭದಲ್ಲಿ ಹತ್ತು ವರ್ಷಕ್ಕಿದ್ದ ಮೀಸಲಾತಿಯನ್ನು ಪ್ರತಿ ಹತ್ತು ವರ್ಷಕ್ಕೊಮ್ಮೆ ವಿಸ್ತರಿಸಲಾಯಿತು. ಈ ವರ್ಷ ಅದನ್ನು ನಾಲ್ಕನೆ ಬಾರಿಗೆ ವಿಸ್ತರಿಸಲಾಗಿದೆ. ಈ ಸುಮಾರು ಐದು ದಶಕದಲ್ಲಿ ಹರಿಜನ-ಗಿರಿಜನರ ಸಮಸ್ಯೆಗಳು ಪರಿಹಾರವಾಗಿವೆಯೇ? ನಿಜ, ಉದ್ಯೋಗಾವಕಾಶಗಳ, ಶೈಕ್ಷಣಿಕ ಸೌಲಭ್ಯಗಳ ಮೀಸಲಾತಿಯ ಪ್ರಯೋಜನ ಪಡೆದು ಹರಿಜನ-ಗಿರಿಜನರೊಳಗೆ ಒಂದು ಶ್ರೀಮಂತ ವಿಭಾಗ ಮೂಡಿಬಂದಿದೆ. ಬಹುಪಾಲು ಹರಿಜನ-ಗಿರಿಜನರ ಕಷ್ಟ-ಕಾರ್ಪಣ್ಯಗಳನ್ನು ಈಗ ಅಭಿವ್ಯಕ್ತಪಡಿಸುತ್ತಿರುವವರು ಇವರೇ. ಆದರೆ ಯಾವ ಉದ್ದೇಶಕ್ಕಾಗಿ, ಯಾರ ಪ್ರಯೋಜನಕ್ಕಾಗಿ?

ಹರಿಜನ-ಗಿರಿಜನರಲ್ಲಿ ದೊಡ್ಡ ಭಾಗ ಗ್ರಾಮೀಣ ಬಡ ವಿಭಾಗಕ್ಕೆ ಸೇರಿದವರು. ಕೃಷಿ ಕೂಲಿಗಾರರು ಅಥವಾ ಬಡರೈತರು. ಮೀಸಲಾತಿ ಈ ಹರಿಜನ-ಗಿರಿಜನ ವಿಭಾಗದ ಅಂಚನ್ನಷ್ಟೆ ತಲುಪಿದೆ, ತಿರುಳನ್ನಲ್ಲ. ಬಹುಪಾಲು ಹರಿಜನ- ಗಿರಿಜನರು ಶತಮಾನಗಳಿಂದ ಇದ್ದಂತೆ ಈಗಲೂ ಭೂಮಾಲಿಕರಿಗೆ, ಲೇವಾದೇವಿಗಾರರಿಗೆ ಆಹುತಿಯಾಗುವವರು. ಈಗಿನ ಸತತ ಬೆಲೆಯೇರಿಕೆ,ಆರ್ಥಿಕ ಅರಾಜಕತೆ ಅವರ ಸ್ಥಿತಿಯನ್ನು ಮತ್ತಷ್ಟು ಶೋಚನೀಯಗೊಳಿಸಿದೆ. ಸಾಮಾಜಿಕ ಶೋಷಣೆಯೂ ಸಾಗಿಯೇ ಸಾಗಿದೆ. ಹರಿಜನ ಮಹಿಳೆಯರ ಮೇಲೆ ಅತ್ಯಾಚಾರಗಳು ನಡೆಯುತ್ತಲೇ ಇವೆ, ಮನೆಗಳನ್ನು ಸುಡುತ್ತಲೇ ಇದ್ದಾರೆ, ದೂರು ತೆಗೆದುಕೊಳ್ಳಲು ಪೋಲೀಸರ ನಕಾರವೂ ಮುಂದುವರೆಯುತ್ತಲೇ ಇದೆ. ಮೀಸಲಾತಿ ಬಹುಶ: ಒಂದು ಅತಿ ಸಣ್ಣ ವಿಭಾಗದ ಸಮಸ್ಯೆಯನ್ನಷ್ಟೆ ಪರಿಹರಿಸಿದೆ.

> **ಆರ್ಥಿಕ, ಶೈಕ್ಷಣಿಕ ಹಿಂದುಳಿಕೆ ನಿವಾರಣೆ ದೃಷ್ಟಿಯಿಂದ ಮೀಸಲಾತಿ ನ್ಯಾಯಯುತ- ಖಂಡಿತವಾಗಿಯೂ. ಆದರೆ ಹಿಂದುಳಿಕೆಯ ಮೂಲಕಾರಣಕ್ಕೆ ಅದು ಪರಿಹಾರ ನೀಡಬಲ್ಲದೇ ಎಂಬುದು ಪ್ರಶ್ನೆಯಾಗಿಯೇ ಉಳಿದಿದೆ.**

ಇತರ ಹಿಂದುಳಿದ ಜಾತಿಗಳಿಗೆ 27 ಶೇಕಡಾ ರಿಯಾಯಿತಿ ಕೂಡಾ ರಾಮಬಾಣವಲ್ಲ. ಅವರ ಆರ್ಥಿಕ, ಶೈಕ್ಷಣಿಕ ಹಿಂದುಳಿಕೆಯ ಸಮಸ್ಯೆಗಳನ್ನು ಅದು ಪರಿಹರಿಸಲಾರದು. ಅದೃಷ್ಟವಶಾತ್ ಈ ಹಿಂದುಳಿದ ಜಾತಿಗಳು ಹರಿಜನರು ಎದುರಿಸುವಂತಹ ಸಾಮಾಜಿಕ ಶೋಷಣೆ ಎದುರಿಸಬೇಕಿಲ್ಲ.

ಹಿಂದುಳಿದ ಜಾತಿಗಳಲ್ಲಿ ಪ್ರಭುತ್ವದಿಂದ ರಕ್ಷಣೆಯ ಅಗತ್ಯವಿಲ್ಲದವರು ಬಹಳ ಜನರಿದ್ದಾರೆ. ಆದ್ದರಿಂದ ಮೀಸಲಾತಿಯ ವಲಯದಲ್ಲಿ ಆರ್ಥಿಕ ಅಳತೆಗೋಲನ್ನು ಕೂಡಾ ಏಕೆ ಬಳಸಬಾರದು? ಸಾಮಾಜಿಕ ಭದ್ರತೆಯ ದೃಷ್ಟಿಯಿಂದ ನೋಡಿ ಹಿಂದುಳಿದ ಜಾತಿಗಳಲ್ಲಿ ಅತ್ಯಂತ ಅಗತ್ಯವಿರುವವರನ್ನು ಕಂಡುಹುಡುಕುವ ಪ್ರಯತ್ನವನ್ನು ಸರಕಾರ ಏಕೆ ಮಾಡಬಾರದು?

ಆರ್ಥಿಕ, ಶೈಕ್ಷಣಿಕ ಹಿಂದುಳಿಕೆಯ ಮೂಲಕಾರಣವಾದರೂ ಏನು? ಪ್ರತಿಯೊಬ್ಬರಿಗೂ ಉತ್ತರ ಗೊತ್ತಿದೆ- ಬಡತನ, ಒಂದು ವರ್ಗಸಮಾಜ ಉಂಟುಮಾಡುವ ದಟ್ಟ ದಾರಿದ್ರ್ಯ. ಈ ಮೂಲಭೂತ ಸಮಸ್ಯೆಯನ್ನು ನಿವಾರಿಸದೆ ಹಿಂದುಳಿಕೆಗೆ ಸಮಗ್ರ ಪರಿಹಾರ ಸಾಧ್ಯವಿಲ್ಲ. ಎಲ್ಲಾ ಸರಕಾರಗಳು ಸತತವಾಗಿ ವಿಫಲಗೊಂಡಿರುವುದು ಕೂಡಾ ಇಲ್ಲೇ. ಪಶ್ಚಿಮ ಬಂಗಾಳ, ಕೇರಳ, ತ್ರಿಪುರಾದ ಎಡ ನೇತೃತ್ವದ ಸರಕಾರಗಳಷ್ಟೆ ಇದಕ್ಕೆ ಅಪವಾದ.

ಬೂರ್ಜ್ವಾ ರಾಜಕಾರಣಿಗಳು ರಾಜಕೀಯ ಮಾತನಾಡುವುದು ಜಾತಿಗಳ ದೃಷ್ಟಿಯಿಂದ, ಮೇಲ್ಜಾತಿ ವಿರುದ್ಧ ಕೀಳು ಜಾತಿ, ಹರಿಜನ-ಗಿರಿಜನರ ವಿರುದ್ಧ ಇತರರು ಇತ್ಯಾದಿ.ಇತ್ತೀಚೆಗೆ ಹಳ್ಳಿ ವಿರುದ್ಧ ಪಟ್ಟಣದ ಮಾತೂ ಈ ಪಟ್ಟಿಗೆ ಸೇರಿದೆ. ಈ ರಾಜಕಾರಣಿಗಳು ಉದ್ದೇಶಪೂರ್ವಕವಾಗಿಯೇ ಬಡ ವಿಭಾಗಗಳ ನಡುವೆ ಈ ಒಡಕು ತರುತ್ತಿದ್ದಾರೆ-ಮತ ಗಿಟ್ಟಿಸಲು. ಆದರೆ ಇವರು ಯಾರೂ ಶ್ರೀಮಂತರ ವಿರುದ್ಧ ಬಡವರು ಎಂಬ ದೃಷ್ಟಿಯಿಂದ ಮಾತಾಡುವುದೇ ಇಲ್ಲ.

1950 ರ ದಶಕದಲ್ಲೇ ಶಾಸನಗಳ ಮೂಲಕ ಭೂಮಾಲಕತನ ರದ್ದಾಯಿತು. ಆದರೆ ಈಗಲೂ ದೊಡ್ಡ ಪ್ರಮಾಣದಲ್ಲಿ ಜಮೀನು ಕೆಲವೇ ಕೈಗಳಲ್ಲಿ ಕೇಂದ್ರೀಕೃತವಾಗಿಯೇ ಇದೆ. ಶಾಸನಗಳ ಪ್ರಕಾರ ಮಿಗುತಾಯಗೊಂಡ ಜಮೀನಿನಲ್ಲಿ ಬಹುಭಾಗದ ಮರುವಿತರಣೆಯಾಗಿಯೇ ಇಲ್ಲ. ಆದರೆ ಮಾಜೀ ಭೂ ಮಾಲಕರಿಗೆ ಪರಿಹಾರ ಮಾತ್ರ ಈಗಲೂ ಕೊಡಲಾಗುತ್ತಿದೆ. ಇಲ್ಲಿಯೂ ಸಾಧಾರಣ ಯಶಸ್ವಿ ಕೆಲಸವಾಗಿರುವುದು ಎಡ ನೇತೃತ್ವದ ರಾಜ್ಯಗಳಾದ ಕೇರಳ, ಪಶ್ಚಿಮ ಬಂಗಾಳ, ತ್ರಿಪುರಾಗಳಲ್ಲಿ ಅಷ್ಟೆ. ಭೂಮಿಯಿಲ್ಲದ ಕೃಷಿಕೂಲಿಗಾರರು, ಬಡರೈತರು, ಮಧ್ಯಮ ರೈತ ವಿಭಾಗದ ಕೆಳ ಅಂಚಿನಲ್ಲಿರುವವರು ಕೂಡಾ ಜಮೀನಿಲ್ಲದೆ ಕೊಳ್ಳುವಶಕ್ತಿಯೇ ಇಲ್ಲದವರಾಗಿದ್ದಾರೆ. ಇದರಿಂದ ಬಡವರು ಬಡವರಾಗಿಯೇ ಮುಂದುವರಿಯುತ್ತಿದ್ದಾರೆ. ಆದ್ದರಿಂದ ಅವರ ಹಿಂದುಳಿಕೆಯೂ ಹಾಗೇ ಇದೆ.

ನಮ್ಮ ಬಹುಪಾಲು ಜನರ ಬಡತನ, ಹಿಂದುಳಿಕೆ ಬೇರೆ ರಂಗಗಳಲ್ಲೂ ಪ್ರಭಾವ ಬೀರಿದೆ-ಕೈಗಾರಿಕಾ,-ಕೃಷಿ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಬಿಕ್ಕಟ್ಟು ಸೃಷ್ಟಿಸಿದೆ.

ಹಿಂದುಳಿಕೆಯ ಮೂಲ ಕಾರಣ ಬಡತನವಾಗಿದ್ದರೆ, ಹಿಂದುಳಿದವರು ಮುಂದೆ ಹೆಜ್ಜೆಯಿಡುವಂತೆ ಮಾಡುವ ಏಕಮಾತ್ರ ಔಷಧಿಯೆಂದರೆ ಈ ಕಡು ಬಡತನದ ನಿವಾರಣೆ.ಇದು ಸಾಧ್ಯವಾಗಬೇಕಾದರೆ ದೇಶದ ಕೃಷಿಕೂಲಿಗಾರರಿಗೆ, ಬಡರೈತರಿಗೆ ಜಮೀನು ವಿತರಣೆಯಾಗಬೇಕು. ಎಷ್ಟೇ ಮೀಸಲಾತಿಯಿದ್ದರೂ ಅದು ಈ ಸಮಸ್ಯೆಯನ್ನು ಬಗೆಹರಿಸದು. ಕೇಂದ್ರ ಸರ್ಕಾರಿ ಸೇವೆಗಳಲ್ಲಿ, ಕೇಂದ್ರ ಸಾರ್ವಜನಿಕ ವಲಯದಲ್ಲಿ ಇರುವ ಉದ್ಯೋಗಾವಕಾಶಗಳಾದರೂ ಎಷ್ಟು? ಒಟ್ಟು ಜನಸಂಖ್ಯೆಯ ಒಂದು ಶೇಕಡಾದಷ್ಟು ಇಲ್ಲ. ಅದು ಕೂಡಾ ಸರಕಾರದ ಆರ್ಥಿಕ ವಿಷ ಚಕ್ರದಲ್ಲಿ ಸಿಲುಕಿರುವಾಗ, ತನ್ನ ಖರ್ಚನ್ನು ಕಡಿಮೆ ಮಾಡಲು ಪ್ರಯತ್ನ ಮಾಡುತ್ತಿರುವಾಗ ಎಷ್ಟು ಉದ್ಯೋಗಾವಕಾಶ ನಿರ್ಮಾಣಗೊಳ್ಳಬಲ್ಲದು? ಇದರಲ್ಲೇ 27 ಶೇಕಡಾ ತಾನೇ ಹಿಂದುಳಿದ ಜಾತಿಗಳಿಗೆ ಮೀಸಲಾಗಬೇಕು?

27 ಒಳ್ಳೆಯದೇ , ಆದರೆ ಅದು ಬೇರೂರಿರುವ ಬಡತನದ ಕಾಯಿಲೆಗೆ ಮದ್ದಲ್ಲ.

ಈ ಕೆಸರಿನಿಂದ ದೇಶವನ್ನು ಹೊರಗೆಳೆಯುವುದು ಬಡವರ, ವಂಚಿತರ, ಕೋಟಿ ಕೋಟಿ ಶ್ರಮಜೀವಿಗಳ ಐಕ್ಯ ಆಂದೋಲನದಿಂದ ಮಾತ್ರ ಸಾಧ್ಯ. ಆದ್ದರಿಂದ ಈಗ ಬೇಕಾಗಿರುವುದು ಐಕ್ಯತೆ, ಇನ್ನಷ್ಟು ಐಕ್ಯತೆಯೇ ಹೊರತು, ಜನರಲ್ಲಿ ಐಕ್ಯತೆ ಮುರಿಯುವ ಯಾವುದೇ ಕ್ರಮ ಅಲ್ಲ.

ಪಿ.ಡಿ. ಸಂಪಾದಕೀಯ




# ಕೊಲ್ಲಿ ರಾಷ್ಟ್ರಗಳಲ್ಲಿ ಅನ್ಯರ ಹಸ್ತಕ್ಷೇಪ ಸಲ್ಲದು

-ಸಿ.ಪಿ.ಐ.(ಎಂ) ಪಾಲಿಟ್ ಬ್ಯುರೋ

ಕೊಲ್ಲಿ ರಾಷ್ಟ್ರಗಳಲ್ಲಿ ಹದಗೆಡುತ್ತಿರುವ ಆತಂಕಕಾರಿ ಪರಿಸ್ಥಿತಿಯ ಬಗ್ಗೆ ಪಾಲಿಟ್‌ಬ್ಯೂರೊ ತನ್ನ ಖೇದ ವ್ಯಕ್ತಪಡಿಸಿದೆ. ಅಮೆರಿಕಾವು ಸೌದಿ ಅರೇಬಿಯಾದಲ್ಲಿ ಎರಡೂವರೆ ಲಕ್ಷ ಸೈನಿಕ ಪಡೆಗಳನ್ನು ಕಳುಹಿಸಲು ನಿರ್ಧರಿಸಿರುವಂತಹದ್ದು ಕೊಲ್ಲಿರಾಷ್ಟ್ರಗಳ ರಕ್ಷಣೆಗೆ ಬಹಳ ಆತಂಕಕಾರಿ ವಿಚಾರವಾಗಿದೆ. ಕೊಲ್ಲಿ ರಾಷ್ಟ್ರಗಳಲ್ಲಿ ಅಮೆರಿಕಾದ ಮಿಲಿಟರಿ ಪಡೆಗಳು ಹಸ್ತಕ್ಷೇಪ ನಡೆಸುವುದನ್ನು ಸಿ.ಪಿ.ಐ.(ಎಂ) ತೀವ್ರವಾಗಿ ವಿರೋಧಿಸುತ್ತದೆ. ಮಿಲಿಟರಿ ಹಸ್ತಕ್ಷೇಪವು ಸಮಸ್ಯೆಗೆ ಪರಿಹಾರ ಕೊಡುವುದಕ್ಕಿಂತ ಪರಿಸ್ಥಿತಿಯು ಬಿಗಡಾಯಿಸಲು ಕಾರಣವಾಗು‍ತ್ತದೆ. ಪಶ್ಚಿಮ ಏಷ್ಯಾದಲ್ಲಿ ಅಮೆರಿಕಾದ ಸಾಮ್ರಾಜ್ಯಶಾಹಿಯು ಮುಂದುವರಿಸುತ್ತಿದ್ದಂತಹ ಒಡಕನ್ನು ತರುವಂತಹ ನೀತಿಯು ಈಗ ಬಹಿರಂಗಗೊಂಡಿದೆ. ಝಿಯೋನಿಸ್ಟ್ ಇಸ್ರೇಲಿನ ಆಕ್ರಮಣಕಾರಿ ನೀತಿ ಮತ್ತು ವೆಸ್ಟ್‌ಬ್ಯಾಂಕ್ ಹಾಗೂ ಗಾಜಾಗಳನ್ನು ವಶಪಡಿಸಿಕೊಂಡ ಆ ದೇಶದ ಮೇಲೆ ಒತ್ತಡವನ್ನು ಹೇರಲು ನಿರಾಕರಿಸಿದ ಅಮೆರಿಕಾವು, ಈಗ ತನ್ನ ಸ್ವಾರ್ಥಕ್ಕಾಗಿ ಅರಬ್ ದೇಶಗಳ ಒಕ್ಕಟ್ಟನ್ನು ಹಾಳುಗೆಡವಲು ಪ್ರಯತ್ನಿಸುತ್ತಿದೆ. ಅರಬ್ ದೇಶಗಳ ಸಾವಿರಾರು ಜನರು ಅಮೆರಿಕಾದ ಹಸ್ತಕ್ಷೇಪದ ವಿರುದ್ಧ ಧ್ವನಿ ಎತ್ತಿರುವುದು ಸ್ವಾಭಾವಿಕವಾಗಿದೆ.

ಯಾವುದೇ ದೇಶವು ಇನ್ನೊಂದು ದೇಶದ ಸಾರ್ವಭೌಮತೆಯನ್ನು ನಿರ್ಲಕ್ಷಿಸಿ ಸೈನಿಕ ಹಸ್ತಕ್ಷೇಪ ನಡೆಸುವುದನ್ನು ಸಿ.ಪಿ.ಐ.(ಎಂ) ವಿರೋಧಿಸುತ್ತದೆ. ಈ ಸಮಸ್ಯೆಗೆ ಒಂದು ಪರಿಹಾರವನ್ನು ಒದಗಿಸಲು ಅರಬ್‌ಲೀಗ್ ಮೊದಲು ಹೆಜ್ಜೆ ಇಡಬೇಕು. ಕೊಲ್ಲಿ ರಾಷ್ಟ್ರಗಳ ಈ ಸಮಸ್ಯೆಗಳಿಗೆ ಅರಬ್ ರಾಷ್ಟ್ರಗಳೇ ಪರಿಹಾರವನ್ನು ಕಂಡುಕೊಳ್ಳಬೇಕು ವಿನಃ ಬೇರೆಯವರ ಹಸ್ತಕ್ಷೇಪ ಸಲ್ಲದು ಎಂದು ಸಿ.ಪಿ.ಐ. (ಎಂ) ಪಾಲಿಟ್‌ಬ್ಯುರೋ ಅಭಿಪ್ರಾಯ ಪಟ್ಟಿದೆ.

## ಬಿಜಾಪುರ ನಗರ
# ಸಿ.ಪಿ.ಐ. (ಎಂ) ಪಕ್ಷದ ನಿಧಿ ಸ್ಫೂರ್ತಿದಾಯಕ ಬೆಂಬಲ

ಎಲ್ಲಾ ವರ್ಗದ ಜನತೆ ಎದುರಿಸುತ್ತಿರುವ ಹಲವಾರು ತರದ ಸಮಸ್ಯೆಗಳ ಪರಿಹಾರಕ್ಕಾಗಿ ನಿಸ್ವಾರ್ಥ ದೃಷ್ಟಿಯಿಂದ ನಿರಂತರ ದುಡಿಯುತ್ತ ಬಂದಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಬೆಂಗಳೂರು ನಗರದಲ್ಲಿ ತನ್ನದೇ ಆದ ಸ್ವತಂತ್ರ ಕಟ್ಟಡ ಕಟ್ಟುವ ಸಲುವಾಗಿ ರೂ 10 ಲಕ್ಷ ಕಟ್ಟಡ ನಿಧಿಗೆ ಕರೆ ಕೊಟ್ಟಿತು. ಆ ಕರೆಯನ್ನು ಕಾರ್ಯರೂಪದಲ್ಲಿಳಿಸಲು ಬಿಜಾಪುರ ನಗರದ ಬೀದಿಯಲ್ಲಿಳಿದಾಗ ಜನರಿಂದ ಬಂದ ಉತ್ಸಾಹ ಅಪಾರವಾಗಿತ್ತು. ನಾಲ್ಕು ದಿವಸಗಳಲ್ಲಿ ಒಂದುನೂರಮೂರು ಅಂಗಡಿಯವರನ್ನು ಭೆಟ್ಟಿಯಾಗಿ ರೂ 2 ರಿಂದ ಹಿಡಿದು 500 ರೂ ವರೆಗೆ ಒಟ್ಟು ಐದು ಸಾವಿರ ರೂಪಾಯಿ ಸಂಗ್ರಹಿಸಲು ಸಾಧ್ಯವಾಯಿತು. ಶರಾಫ, ಅರಿವೆ ಅಂಗಡಿ, ರೆಡಿಮೇಡ್ ಅರಿವೆ ಅಂಗಡಿ, ಪಾತ್ರೆ ಮಾರಾಟಗಾರರ ಸಂಘಟನೆಯವರು ತಾವೇ ಹಣ ಸಂಗ್ರಹಿಸಿ, ಸಹಾಯ ಮಾಡುವ ಆಶ್ವಾಸನೆ ನೀಡಿದ್ದಾರೆ. "ಪಕ್ಷಕ್ಕೆ ಸ್ವಂತ ಕಟ್ಟಡ ಬೇಕ್ರಿ. ಕೆಲಸ ಮಾಡಲಿಕ್ಕೆ ಅನುಕೂಲವಾಗುತ್ತದೆ. "ಪಕ್ಷಾಂತರಗೊಳ್ಳದೆ ಒಂದೇ ಪಕ್ಷದಲ್ಲಿ ನಿಷ್ಠೆಯಿಂದ ಕೆಲಸ ಮಾಡುವವರು ಕಮ್ಯುನಿಸ್ಟರು ಮಾತ್ರ" "ಕಮ್ಯುನಿಸ್ಟ್ ಪಕ್ಷ ಬೆಳೆಯ ಬೇಕ್ರಿ. ಶಿಸ್ತು ಬದ್ಧವಾದ ಪಕ್ಷ ಅದೊಂದೇ" "ಈಗ ಇಷ್ಟು ತಗೊಳ್ಳಿ, ಕಟ್ಟಡ ಪ್ರಾರಂಭವಾದಾಗ ಮತ್ತೆ ಕೊಡುತ್ತೇವೆ" "ನೀವೂ ಭೀಮಸಿಯವರು ಬಂದಾಗ ಇನ್ನೂ ಹೆಚ್ಚು ಕೊಡಬೇಕಾಗುತ್ತದೆ. ಆದರೇನ್ಮಾಡುವುದು. ಸರಕಾರದ ಟ್ಯಾಕ್ಸ್ - ಅತಿಯಿಂದಾಗಿ ವ್ಯಾಪಾರಕ್ಕೆ ಪೆಟ್ಟು ಬಿದ್ದಿದೆ. ಎಲ್ಲಾ ವ್ಯಾಪಾರ ಮಹಾರಾಷ್ಟ್ರ ಸೇರುತ್ತದೆ". ಎ.ಪಿ.ಎಂ.ಸಿ. ಯಾರ್ಡಿನಲ್ಲಿ ವ್ಯಾಪಾರಸ್ಥರು ತಮ್ಮ ಸಂಕಷ್ಟವನ್ನೂ, ಇಂಡಸ್ಟ್ರಿಯಲ್ ಎಸ್ಟೇಟಿನ ಸಣ್ಣ ಕೈಗಾರಿಕೆ ನಡೆಸುವವರು ಸರಕಾರದ ಕೈಗಾರಿಕಾ ನೀತಿಯನ್ನು, ರೆಡಿಮೇಡ್ ಅರಿವೆ ಮಾರಾಟ ಮಾಡುವವರು ಮೇಲಧಿಕಾರಿಗಳ ನೀತಿಯನ್ನು ವಿವರಿಸುತ್ತಾ ತಾವೆಲ್ಲರೂ ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ಪಕ್ಷ ದುಡಿಯಬೇಕೆಂದು ಹಾರೈಸಿದರು. ಅವರು ಚಳುವಳಿ ಮಾಡಿದಾಗ ಪಕ್ಷ ಮತ್ತು ಪ್ರಾಂತ ರೈತ ಸಂಘ ಹೇಗೆ ಸಹಾಯ ಮಾಡಿದೆ ಎಂಬುದನ್ನೂ ನೆನಪಿಸುತ್ತಿದ್ದರು.

ಪ್ರತಿ ವರ್ಷ ಯುಗಾದಿ ಹಬ್ಬ ಮುಗಿದ ನಂತರ ಮಾರ್ಚ್ ಏಪ್ರಿಲ್ ತಿಂಗಳಲ್ಲಿ ಪಕ್ಷದ ನಿಧಿ ಸಂಗ್ರಹಿಸುವ ಪರಿಪಾಠವನ್ನು ಬಿಜಾಪುರ ನಗರದಲ್ಲಿ ಹಲವಾರು ವರ್ಷಗಳಿಂದಲೂ ಅನುಸರಿಸುತ್ತ ಬಂದಿದ್ದೆವು. ಇತ್ತೀಚೆಗೆ ಕೆಲವು ವರ್ಷಗಳಿಂದ ಆ ಪರಿಪಾಠಕ್ಕೆ ರಜೆ ದೊರಕಿದಂತಾಗಿದೆ. ಮಾರ್ಚ್ ಏಪ್ರಿಲ್ ಹಾಗೆಯೇ ದೀಪಾವಳಿ ನಂತರ ನವಂಬರ್ ತಿಂಗಳುಗಳಲ್ಲಿ ವ್ಯಾಪಾರಸ್ಥರು ಮತ್ತು ರೈತರಲ್ಲಿ ಹೆಚ್ಚು ಹಣ ಚಲಾವಣೆಯಲ್ಲಿರುತ್ತದೆ. ಅಂಥ ಸಮಯದಲ್ಲಿ ನಿರಾಯಾಸವಾಗಿ ಹೆಚ್ಚು ಹಣ ಸಂಗ್ರಹಿಸಲು ಸಾಧ್ಯವಾಗುತ್ತದೆಂಬ ಸಂಗತಿ ನನ್ನ ಅನುಭವದಿಂದ ಕಂಡುಕೊಂಡಿದ್ದೇನೆ. ಬಿಜಾಪುರ ನಗರ ಮತ್ತು ಜಿಲ್ಲೆಯಲ್ಲಿ ಜನರು ಕಮ್ಯುನಿಸ್ಟ್ ಪಕ್ಷವನ್ನು ಅರ್ಥೈಸಿಕೊಂಡಿದ್ದಾರೆ. ಎಂಥ ಪರಿಸ್ಥಿತಿಯಲ್ಲಿ ಕೂಡ ಇವರು ಜನರ ಪರವಾಗಿ ಅಹೋರಾತ್ರಿ ಹೋರಾಡುತ್ತಾರೆ. ಆದ್ದರಿಂದ ಇವರಿಗೆ ಸಹಾಯ ಮಾಡಬೇಕು ಎಂಬ ತಿಳುವಳಿಕೆ ಜನರಲ್ಲಿ ಬಂದಿದೆ.

ಪಕ್ಷದ ನಿಧಿ ಸಂಗ್ರಹಿಸುವಾಗ ಪ್ರತಿಯೊಬ್ಬರ ಜೊತೆಯಲ್ಲಿ 10 ನಿಮಿಷದಿಂದ 30 ನಿಮಿಷದವರೆಗೆ ರಾಜಕೀಯ ಆರ್ಥಿಕ ಚರ್ಚೆ ನಡೆಯುವುದರಿಂದ ಅವರವರ ಸಮಸ್ಯೆಗಳನ್ನು ತಿಳಿಯಲು ಸಾಧ್ಯವಾಗುತ್ತಿತ್ತು. "ಜನರು ನಮ್ಮನ್ನು ಪ್ರೀತಿಸುತ್ತಾರೆ, ನಮ್ಮಿಂದ ಇನ್ನೂ ಹೆಚ್ಚಿನ ಕೆಲಸ ಅಪೇಕ್ಷಿಸುತ್ತಾರೆ. ಆದರೆ ನಾವು ಜನರ ಮಧ್ಯೆ ಹೋಗಲು ನಾಚುತ್ತೇವೆ. ನಮ್ಮ ಸಮಸ್ಯೆ ಅವರ ಮುಂದಿಡಲು ಹಿಂದೇಟು ಹಾಕುತ್ತೇವೆ" ಎಂದು ನನಗೆ ಕಾಣುತ್ತದೆ. ನಮಗೆ ಜನರ ವೈಯಕ್ತಿಕ ಪರಿಚಯವಿಲ್ಲದಿದ್ದರೂ , ಜನರು ನಮ್ಮನ್ನು ವೈಯಕ್ತಿಕವಾಗಿ ಗುರ್ತಿಸುತ್ತಾರೆ" ಎಂಬ ಸಂಗತಿ ಪಕ್ಷದ ನಿಧಿಗಾಗಿ ಬಿಜಾಪುರದ ಅಂಗಡಿ ಅಂಗಡಿ ತಿರುಗಾಡಿದಾಗ ಗೊತ್ತಾಯಿತು. ಎರಡನೇ ಸುತ್ತಿನಲ್ಲಿ ಇನ್ನೂ ಹೆಚ್ಚು ಹಣ ಸಂಗ್ರಹವಾಗುತ್ತದೆಯೆಂಬ ಆಶೆ ಇಟ್ಟುಕೊಂಡಿದ್ದೇನೆ.

ಎನ್. ಕೆ. ಉಪಾಧ್ಯಾಯ

# ಗ್ರಾಸಲೀನ್ ಕಾರ್ಮಿಕ ಸಂಘದ ಅಧ್ಯಕ್ಷರಾಗಿ ವಿ.ಜೆ.ಕೆ. ನಾಯರ್ ಪುನರಾಯ್ಕೆ

ಹರಿಹರದ ಗ್ವಾಲಿಯರ್ ರೆಯಾನ್ಸ್ ಗ್ರಾಸಲೀನ್ ಡಿವಿಷನ್ ಎಂಪ್ಲಾಯೀಸ್ ಯೂನಿ-
ಯನ್‌ನಲ್ಲಿ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಸಂಘದ ಅಧ್ಯಕ್ಷರಾಗಿ ಕಾಮ್ರೇಡ್ ವಿ.ಜೆ.ಕೆ.-
ನಾಯರ್ ಶೇಕಡಾ 53 ರಷ್ಟು ಮತಗಳಿಸಿ ನಾಲ್ಕನೆಯ ಸಲಕ್ಕೆ ಪುನರಾಯ್ಕೆ ಆಗಿದ್ದಾರೆ.
ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಎಐಟಿಯುಸಿ ಯ ಆನಂದ ತೀರ್ಥ ಸೋತಿದ್ದಾರೆ. ಉಪಾ-
ಧ್ಯಕ್ಷರಾಗಿ ಬಿ.ಹಣ್ಮಂತಪ್ಪ ಸಹಕಾರ್ಯದರ್ಶಿಗಳಾಗಿ ರಾಮಪ್ಪ ಮತ್ತು ಆರಾಧ್ಯ ಮಠ
ಹಾಗೂ ಖಜಾಂಚಿಯಾಗಿ ಕೆ.ಡಿ. ಸಾಹುಕಾರ್ ಆಯ್ಕೆಯಾಗಿದ್ದಾರೆ. ಇವರೆಲ್ಲರು ಸಿಐ-
ಟಿಯು ಅಭ್ಯರ್ಥಿಗಳು. ಪ್ರಧಾನ ಕಾರ್ಯದರ್ಶಿಯಾಗಿ ಎಐಟಿಯುಸಿ ಯ ಹನುಮೇಗೌಡ
ಚುನಾಯಿತರಾಗಿದ್ದಾರೆ. ಕಾರ್ಯಕಾರಿ ಸಮಿತಿ ಸದಸ್ಯರ ಒಟ್ಟು 20 ಸ್ಥಾನಗಳನ್ನು ಸಿಐಟಿಯು
ಗೆದ್ದುಕೊಂಡಿದೆ. ಇನ್ನು ಳಿದ ಸ್ಥಾನಗಳನ್ನು ಎಐಟಿಯುಸಿ ಪಡೆದಿದೆ.

# ದುಡಿಯುವ ಜನಗಳ ಐಕ್ಯತೆ ಮುರಿಯಬಾರದು

ಭಾರತ ಸರಕಾರವು ಹಿಂದುಳಿದ ವರ್ಗಗಳಿಗೆ ಉದ್ಯೋಗಕ್ಕಾಗಿ ಮೀಸಲಾತಿ ನೀಡುವ ಘೋಷಣೆಯ ವಿರುದ್ಧ ನಡೆಯುತ್ತಿರುವ ಚಳವಳಿಯು ತುಂಬಾ ಕಳವಳಕಾರಿಯಾದದು ಎಂದು ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೊ ತಿಳಿಸಿದೆ. ಬಿಹಾರದಲ್ಲಿ ಆರಂಭವಾದ ಈ ಚಳವಳಿಯ ದಾವಾನಾಲ ಭಾರತದ ಇತರ ರಾಜ್ಯಗಳಲ್ಲೂ ಹರಡುವ ಭಯವಿದೆ. ಮೀಸಲಾತಿಯನ್ನು ವಿರೋಧಿಸುವ ಯಾವುದೇ ಕಾರ್ಯಾ ಚರಣೆಯನ್ನು ಸಿ.ಪಿ.ಐ.(ಎಂ) ವಿರೋಧಿಸುತ್ತದೆ ಎನ್ನುವುದಾಗಿ ಪಾಲಿಟ್‌ಬ್ಯೂರೋ ಹೇಳಿಕೆ ನೀಡಿದೆ.

ಕಳೆದ ದಶಕದಿಂದಲೂ ಮೀಸಲಾತಿ ಪ್ರಶ್ನೆಯು ಒಂದು ಗೊಂದಲಕ್ಕೊಳಗಾದ ವಿಷಯವಾಗಿ ಮಾರ್ಪಟ್ಟಿದೆ. ಕೇಂದ್ರದಲ್ಲಿ ಅಧಿಕಾರ ನಡೆಸಿದ ಈ ಹಿಂದಿನ ಎಲ್ಲ ಸರಕಾರಗಳು ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುವಲ್ಲಿ ಮತ್ತು ತೀವ್ರ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವಲ್ಲಿ ಅಸಮರ್ಥತೆಯನ್ನು ತೋರಿಸಿದ್ದಾರೆ. ಭೀಕರವಾಗಿ ಬೆಳೆಯುತ್ತಿರುವ ನಿರುದ್ಯೋಗ ಸಮಸ್ಯೆಯ ಹಿನ್ನೆಲೆಯಲ್ಲಿ ಖಾಸಗಿ ಮತ್ತು ಮುಖ್ಯವಾಗಿ ಸರಕಾರಿ ಕ್ಷೇತ್ರಗಳಲ್ಲಿ ಮಿತವಾದ ಉದ್ಯೋಗಗಳ ಅವಕಾಶಗಳು ಕಠಿಣ ಸ್ಪರ್ಧೆಗೆ ಯುವಜನರನ್ನು ಈಡು ಮಾಡಿದೆ.

ರಾಷ್ಟ್ರೀಯ ರಂಗ ಸರಕಾರವು ಮಂಡಲ ಆಯೋಗದ ಆಧಾರದಲ್ಲಿ ಹಿಂದುಳಿದ ಜಾತಿಗಳ ಜನರಿಗೆ ಉದ್ಯೋಗಗಳಲ್ಲಿ ಮೀಸಲಾತಿ ನೀಡುವ ಘೋಷಣೆ ಮಾಡಿದೆ. ಹಿಂದುಳಿದ ಜಾತಿಗಳನ್ನು "ಇತರ ಹಿಂದುಳಿದ ವರ್ಗಗಳು" ಎನ್ನುವುದಾಗಿ ಗುರುತಿಸಲಾಗಿದೆ. ಸಿ.ಪಿ.ಐ. (ಎಂ) ಹಿಂದುಳಿದ ಜನವಿಭಾಗಗಳಿಗೆ ಮೀಸಲಾತಿಯ ಕೊಡುಗೆ ನೀಡುವುದನ್ನು ಸ್ವಾಗತಿಸುತ್ತದೆ. ಈ ವಿಭಾಗಕ್ಕೆ ಸೇರಿದ ಬಹಳಷ್ಟು ಜನರು ಆರ್ಥಿಕ ಮತ್ತು ವಿದ್ಯಾಕ್ಷೇತ್ರ ಎರಡರಲ್ಲೂ ಹಿಂದುಳಿದಿರುವುದು ವಾಸ್ತವಿಕ ಸತ್ಯವಾಗಿದೆ. ಆದರೆ ಸಿ.ಪಿ.ಐ.(ಎಂ) ಪಕ್ಷ "ಇತರ ಹಿಂದುಳಿದ ವರ್ಗಗಳ" ವಿಚಾರದಲ್ಲಿ ಮಂಡಲ ಆಯೊಗದ ತೀರ್ಮಾನಕ್ಕಿಂತ ಭಿನ್ನವಾಗಿ ತನ್ನ ಅಭಿಪ್ರಾಯವನ್ನು ಮುಂದಿಟ್ಟಿರುವುದು. ಈ ಸಮುದಾಯದಲ್ಲಿ ಕೆಲವರು ಭೂಮಿ ಮತ್ತು ಇತರ ಸೌಕರ್ಯಗಳನ್ನು ಹೊಂದಿದ್ದು ಅನುಕೂಲವಂತರಾಗಿದ್ದಾರೆ. ಈ ಜನ ವಿಭಾಗದಲ್ಲಿ ಮೀಸಲಾತಿಯ ಪ್ರಯೋಜನವು ಅತ್ಯಂತ ಬೇಕಾದವರಿಗೆ ಸಿಗಬೇಕಾದಲ್ಲಿ ಆರ್ಥಿಕ ಅಳತೆಗೋಲನ್ನು ನಿರ್ಧರಿಸಬೇಕಾಗಿದೆ. ಈ ವಿಭಾಗದ ಜನರಲ್ಲಿ ಅನುಕೂಲವಂತರು ಮತ್ತು ಮೀಸಲಾತಿ ಅಗತ್ಯವಾಗಿರುವ ಜನ ಸಮುದಾಯವನ್ನು ಭಿನ್ನವಾಗಿ ಗುರುತಿಸಲು ಈ ಆರ್ಥಿಕ ಅಳತೆ ಗೋಲು ಅವಶ್ಯಕವೆಂದು ಸಿ.ಪಿ.ಐ. (ಎಂ) ಅಭಿಪ್ರಾಯ ಪಡುತ್ತದೆ. ಆದರೆ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವಿಷಯದಲ್ಲಿ ಯಾವುದೇ ಆರ್ಥಿಕ ಅಳತೆಗೋಲಿಲ್ಲದ ಮೀಸಲಾತಿಯ ಕೊಡುಗೆ ನೀಡುವ ನಿರ್ಧಾರವನ್ನು ಸಿ.ಪಿ.ಐ.(ಎಂ) ಬೆಂಬಲಿಸುತ್ತದೆ. ಈ ಜನವಿಭಾಗವು ಶತಮಾನಗಳಿಂದ ಶೋಷಣೆ, ದಬ್ಬಾಳಿಕೆಗೊಳಪಡುತ್ತ ಈಗಲೂ ಅದೇ ಪರಿಸ್ಥಿತಿಯಲ್ಲಿ ಮುಂದವರಿಯುತ್ತಿರುವುದರಿಂದ ಮೀಸಲಾತಿಯ ಈ ಕಮವು ಅನಿವಾರ್ಯವಾಗಿದೆ.

ಮೀಸಲಾತಿಯನ್ನು ವಿರೋಧಿಸುವವರಲ್ಲಿ ಹಲವರು ಆರ್ಥಿಕವಾಗಿ ಹಿಂದುಳಿದವರೆ ಎನ್ನುವುದು ಗಮನಾರ್ಹವಾದುದು. ಜಾತಿಯ ಆಧಾರದಲ್ಲಿ ದುಡಿಯುವ ಜನಸಮುದಾಯವು ಎರಡು ವಿರೋಧಿ ಬಣಗಳಾಗಿ ಒಡೆದು ಹೋಗಿರುವುದು ದರಾದೃಷ್ಟಕರವೂ ಮತ್ತು ಕಳವಳಕಾರಿಯಾದುದೂ ಆಗಿರುತ್ತದೆ. ಇವರಲ್ಲಿ ಐಕ್ಯತೆಯನ್ನು ತರುವಂತಹ ಎಲ್ಲ ಪ್ರಯತ್ನಗಳೂ ಆಗಬೇಕಾಗಿದೆ. ತೊಡಕಿನ ವಿಷಯವೇನೆಂದರೆ 'ಹಿಂದುಳಿದವರಿಗೆ ಮೀಸಲಾತಿ' ಪರವಾದವರು ಮತ್ತು ವಿರೋಧಿ ಯಾದವರು ಇಬ್ಬರೂ ಕೂಡ ಇದೀಗ ಮಿತವಾಗಿ ಲಭ್ಯವಾಗಿರುವ ಉದ್ಯೋಗಾವಕಾಶಗಳಿಂದಲೆ ತಮ್ಮ ಆರ್ಥಿಕ ಅಭಿವೃದ್ಧಿಯಾಗುತ್ತದೆ ಎಂದು ತಿಳಿದಿರುವಂತಹದು. ಈ ತಿಳುವಳಿಕೆ ಬಹಳ ಸಂಕುಚಿತ ಮನೋಭಾವದ್ದಾಗಿದೆ. ಆದ್ದರಿಂದಲೆ ದುಡಿಯುವ ಜನ ಸಮುದಾಯದ ಐಕ್ಯತೆ ಬಹಳ ಮುಖ್ಯವಾದುದು ಏಕೆಂದರೆ, ಮೀಸಲಾತಿಯೊಂದೆ ಜನರನ್ನು ಗಂಭೀರವಾಗಿ ಕಾಡುವ ಸಮಸ್ಯೆಗಳಿಗೆ ಪರಿಹಾರ ಕೊಡಲಾರದು ಎನ್ನುವ ವಿಚಾರ. ಗ್ರಾಮೀಣ ಪ್ರದೇಶಗಳಲ್ಲಿ ತೀವ್ರವಾದ ಭೂಸುಧಾರಣೆ ತಾರದೆ ಹಳ್ಳಿಗಾಡಿನ ಬಡವರ ಉದ್ಧಾರವಾಗದು; ನಗರ ಪ್ರದೇಶಗಳಲ್ಲಿ ವಾಸಮಾಡಿರತಕ್ಕಂತಹ ಬಡಜನ ಸಮುದಾಯಕ್ಕೆ 'ಸಂಪತ್ತಿನ ಕೇಂದ್ರೀಕರಣ' ವನ್ನು ನಿಲ್ಲಿಸದೆ ಪರಿಹಾರ ದೊರೆಯುದು. ಎಂದು ಸಿ.ಪಿ.ಐ. (ಎಂ) ಅಭಿಪ್ರಾಯ ಪಟ್ಟಿದೆ.

ಸಂಪತ್ತು ಕೆಲವೇ ಕೈಗಳಲ್ಲಿ ಕ್ರೋಢೀಕರಣಗೊಂಡ ಪರಿಣಾಮವಾಗಿ ನಿರುದ್ಯೋಗ ಸಮಸ್ಯೆಗೆ ಎಡೆಮಾಡಿ ಕೊಟ್ಟಂತಹ ಪ್ರಸ್ತುತ ಅಸಮಾನತೆಯ ವ್ಯವಸ್ಥೆಯನ್ನು ವಿರೋಧಿಸುವ ಹೋರಾಟಕ್ಕೆ ಎಲ್ಲ ಜನಸಮುದಾಯದ ಐಕ್ಯತೆ ಬೇಕಾಗಿದೆ. ಮೀಸಲಾತಿಯ ಸೌಲಭ್ಯ ದಿಂದ ಹೊರಗುಳಿದ ಜನಸಮುದಾಯದ ಪ್ರಜ್ಞಾವಂತರು ಮೀಸಲಾತಿ ಸೌಲಭ್ಯವು ಒಂದು ಅಲ್ಪ ಪರಿಹಾರ ಮಾತ್ರ ನೀಡುತ್ತದೆ ಎಂದು ಒಪ್ಪಿಕೊಳ್ಳುವುದು ಎಂದು ಸಿ.ಪಿ.ಐ.(ಎಂ) ಅಪೇಕ್ಷಿಸುತ್ತದೆ. ಈ ವಿಚಾರವು ಮೂಲಭೂತವಾದ ಬದಲಾವಣೆ ತರುವಂತಹ ಒಂದು ಶಕ್ತಿಯುತವಾದ ಹೋರಾಟದಲ್ಲಿ ಹಿಂದುಳಿದ ಜನ ಸಮುದಾಯದೊಂದಿಗೆ ಒಟ್ಟಾಗಿ ಬೆರೆಯುವುದಕ್ಕೆ ಅಡಿ ಯಾಗಬಾರದು



## ಸಂಸತ್ತಿನಲ್ಲಿ ನಮ್ಮವರು
# ಕೊಲ್ಲಿಯಲ್ಲಿ ಭಾರತೀಯ ಸುರಕ್ಷಿತತೆ: ಸದಸ್ಯರ ಕಳವಳ

ಕೊಲ್ಲಿ ವಲಯದಲ್ಲಿ ಉದ್ಭವಿಸಿರುವ ಬಿಗುವಿನ ವಾತಾವರಣ ಭಾರತೀಯರಿಗೂ ಪ್ರತ್ಯಕ್ಷ ಕಳವಳಕ್ಕೆ ಕಾರಣವಾಗಿದೆ. ಇಲ್ಲಿನ ಬಹಳಷ್ಟು ಜನರು ಬೇರೆ ಬೇರೆ ದೇಶಗಳಲ್ಲಿ ನೆಲೆಸಿದ್ದು, ಕುವೈತ್‌ನ್ನು ಇರಾಕ್ ವಶಪಡಿಸಿಕೊಂಡಿದ್ದು ಹಾಗೂ ಅನಂತರದ ಬೆಳವಣಿಗೆಗಳಿಂದಾಗಿ ಕುವೈತ್‌ನಲ್ಲಿರುವ ಭಾರತೀಯರ ಸುರಕ್ಷತೆ ಬಗ್ಗೆ ಕಾತರ-ಕುತೂಹಲ ಸಹಜವೇ ಆಗಿದೆ. ಕೇಂದ್ರ ಸರಕಾರ ಆರಂಭದಲ್ಲಿ ತಕ್ಷಣವೇ ಎಷ್ಟರ ಮಟ್ಟಿಗಿನ ಕ್ರಮಕೈಗೊಳ್ಳಬೇಕಾಗಿತ್ತೋ ಅದನ್ನು ಮಾಡದೆ ಕಳವಳ ಇನ್ನಷ್ಟು ಹೆಚ್ಚಲು ಕಾರಣವಾಯಿತು. ಅಲ್ಲದೆ, ಮೀಸಲಾತಿ ಪ್ರಶ್ನೆ ಕೂಡ ದೊಡ್ಡ ವಿಷಯವಾಗಿ ಬಂದಿತು.

ಕೆಲವು ದಿನಗಳ ಬಿಡುವಿನ ನಂತರ ಆಗಸ್ಟ್ ೧೬ ಮತ್ತು ೧೭ ರಂದು ನಡೆದ ಕಲಾಪಗಳಲ್ಲಿ ಸಿ.ಪಿ.ಐ(ಎಂ) ಸದಸ್ಯರ ಭಾಗವಹಿಸುವಿಕೆಯ ಹಿನ್ನೋಟ.......

ಆಗಸ್ಟ್ 12 :

ಕುವೈತ್‌ನಲ್ಲಿ ಇರುವ ಭಾರತೀಯರ ಸುರಕ್ಷತೆ ಮತ್ತು ಅವರನ್ನು ತೆರವು ಮಾಡುವ ಬಗ್ಗೆ ಸರಕಾರದ ನಿಷ್ಕ್ರಿಯತೆ ಮತ್ತು ಅಲಕ್ಷ್ಯದ ಬಗ್ಗೆ ಸೈಫುದ್ದೀನ್ ಚೌದುರಿ ಲೋಕಸಭೆಯಲ್ಲಿ ಕಳವಳ ಸೂಚಿಸಿದರು. ಸರಕಾರ ಕೈಗೊಂಡಿರುವ ಕ್ರಮದ ಬಗ್ಗೆ ಪ್ರತಿದಿನ ವರದಿ ನೀಡುತ್ತಿರಬೇಕು ಎಂದರು.

ಭಾರತವು ಅಲಿಪ್ತ ಚಳವಳಿಯ ಒಂದು ಮುಖಂಡ ರಾಷ್ಟ್ರವಾಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಕುವೈತ್‌ನ್ನು ಇರಾಕ್ ವಶಪಡಿಸಿಕೊಂಡದ್ದು ಮತ್ತು ಸೌದಿ ಅರೇಬಿಯಾಕ್ಕೆ ಅಮೆರಿಕ ಸೇನೆಯನ್ನು ಕಳಿಸಿರುವ ಬಗ್ಗೆ ಭಾರತ ಸರಕಾರ ದೃಢ ನಿಲುವನ್ನು ತೆಗೆದುಕೊಳ್ಳಬೇಕೆಂದು ಸೈಫುದ್ದೀನ್ ಒತ್ತಾಯಿಸಿದರು.

ಕೊಲ್ಲಿಯಲ್ಲಿ ಉದ್ಭವಿಸಿರುವ ಪರಿಸ್ಥಿತಿಯನ್ನು ತಿಳಿಗೊಳಿಸಲು ಭಾರತ ನೈತಿಕ ಒತ್ತಡ ಹೇರಬೇಕೆಂದು ಈ ಸಂಗಾತಿ ಪ್ರತಿಪಾದಿಸಿದರು.

(ಅಧಿಕಾರದ ಕುರ್ಚಿ ತಪ್ಪಿಹೋಗಿರುವ ಕಾಂಗ್ರೆಸ್‌ನವರಿಗೆ ರಾಷ್ಟ್ರೀಯರಂಗ ಸರಕಾರದ ವಿರುದ್ಧ 'ಚಳವಳಿ' ನಡೆಸಲು ಯಾವಾಗಲೂ ಮೈಮನ 'ತುಡಿಯುತ್ತಿರುತ್ತದೆ'. ಕೊಲ್ಲಿ ಬಿಕ್ಕಟ್ಟು ಅದಕ್ಕೆ ಒಂದು 'ಅಸ್ತ್ರ'ವಾಯಿತು. ಆಗಸ್ಟ್ 12 ರಂದು ಸಂಸತ್ತಿನ ಪ್ರವೇಶ ದ್ವಾರದ ಬಳಿ ಕೇರಳದ ಕಾಂಗ್ರೆ ಎಂ.ಪಿ.ಗಳು 'ಕೊಲ್ಲಿಯಲ್ಲಿ ಸಿಕ್ಕಿಹಾಕಿಕೊಂಡಿರುವ ಭಾರತೀಯರ ಪರಿಸ್ಥಿತಿ ಬಗ್ಗೆ ಗಮನಸೆಳೆಯಲು' ಧರಣಿ ನಡೆಸಿದರು.)

ಖ್ಯಾತ ಬ್ಯಾಡ್ಮಿಂಟನ್ ಆಟಗಾರ ಸೈಯದ್ ಮೋದಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದ ತನಿಖೆಯ ಸಿ.ಬಿ.ಐ. ಅಧಿಕಾರಿಯ ಬದಲಾವಣೆ ಹಾಗೂ ಮರುನೇಮಕ ರಾಜ್ಯಸಭೆಯಲ್ಲಿ ಪ್ರಸ್ತಾಪಕ್ಕೆ ಬಂದು ಕಾಂಗ್ರೆ ಸದಸ್ಯರು ಪ್ರಧಾನಿಯವರೇ ಹೇಳಿಕೆ ನೀಡಬೇಕೆಂದು ಒತ್ತಾಯಿಸಿ ಕಲಾಪಕ್ಕೆ ಅಡ್ಡಿ ತರಲು ಪದೇ ಪದೇ ಯತ್ನಿಸಿದರು. ಬೇರಿಬ್ಬರು ಸಚಿವರು ಉತ್ತರ ನೀಡಲೂ ಬಿಡಲಿಲ್ಲ. ಆಗ ಮಧ್ಯ ಪ್ರವೇಶಿಸಿದ ಸಿ.ಪಿ.ಐ(ಎಂ)ನ ದೀಪೆನ್ ಘೋಷ್ ಅವರು, ಪ್ರಧಾನಿಯವರ ವಿರುದ್ಧ ಪ್ರತಿಪಕ್ಷ ಆರೋಪ ಹೊರಿಸಿರುವುದರಿಂದ ತಾವು ಸರಕಾರದ ಉತ್ತರ ಕೇಳಲು ಬಯಸುವುದಾಗಿ ಹೇಳಿದರು. ಸರಕಾರ ತನ್ನ ನಿಲುವು ತಿಳಿಸಲು ಅವಕಾಶ ನೀಡಬೇಕೆಂದು ಅವರು ಕೋರಿದರು.

ಆಗಸ್ಟ್ 17: ಮಂಡಲ್ ಆಯೋಗದ ವರದಿಯನ್ವಯ ಹಿಂದುಳಿದ ವರ್ಗಗಳಿಗೆ ಉದ್ಯೋಗಗಳಲ್ಲಿ ಶೇ. ೨೭ ಮೀಸಲಾತಿ ಒದಗಿಸುವುದಾಗಿ ಪ್ರಧಾನಿ ವಿ.ಪಿ.ಸಿಂಗ್ ಸಂಸತ್ತಿನ ಮುಂಗಾರು ಅಧಿವೇಶನದ ಮೊದಲ ದಿನ ಪ್ರಕಟಿಸಿದ್ದರು. ಅದು ಈಗ ಕಳವಳಕಾರಿಯಾದ ಮೀಸಲಾತಿ ವಿರೋಧಿ ಚಳವಳಿಗೆ ಬೆಂಕಿ ಸುರಿದಿದೆ. (ಮೀಸಲಾತಿ ಬಗ್ಗೆ ಪಕ್ಷದ ನಿಲುವನ್ನು ಕುರಿತು ಪಾಲಿಟ್‌ಬ್ಯೂರೊ ಹೇಳಿಕೆಯನ್ನು ಇದೇ ಸಂಚಿಕೆಯಲ್ಲಿ ಓದಿ).

ಒಂದು ಮಹತ್ವದ್ದಾದ ವಿಚಾರದ ಬಗ್ಗೆ ಸಮರ್ಪಕ ಸಮಾಲೋಚನೆಯಿಲ್ಲದೆ ನಿರ್ಧಾರಕ್ಕೆಗೊಳ್ಳಲಾಯಿತು ಎಂದು ಲೋಕಸಬೆಯಲ್ಲಿ ಸೋಮನಾಥ ಚಟರ್ಜಿ ಹೇಳಿದರು. ಪಕ್ಷ ರಾಜಕೀಯದ ಸಂಕುಚಿತ ಪರಿಗಣನೆ ಇಲ್ಲದೆ ಎಲ್ಲಾ ಪಕ್ಷಗಳು ಇದನ್ನೊಂದು ರಾಷ್ಟ್ರೀಯ ಪ್ರಶ್ನೆಯಾಗಿ ತೆಗೆದುಕೊಳ್ಳುವ ದಿಸೆಯಲ್ಲಿ ಕ್ರಮ ವಹಿಸಬೇಕೆಂದು ಅವರು ಕರೆ ನೀಡಿದರು.

ಬಿ.ಜೆ.ಪಿ. ತನ್ನ 'ಧರ್ಮ-ರಾಜಕೀಯ ಮಿಶ್ರಣ'ದ ದುರ್ಬುದ್ಧಿಯನ್ನು ಲೋಕಸಭೆಯಲ್ಲಿ ಈ ದಿನ ಪ್ರದರ್ಶಿಸಿತು. ಗೋಹತ್ಯೆ ನಿಷೇದಿಸಬೇಕೆಂಬ ನಿರ್ಣಯವನ್ನು ಮತಕ್ಕೆ ಹಾಕಬೇಕೆಂಬ ಅದರ ಒತ್ತಾಯದಿಂದ ಅಲ್ಪಮತದ ಸರಕಾರ ಸಂಕಷ್ಟಕ್ಕೀಡಾಯಿತು. ಎಡಪಕ್ಷಗಳ ಸದಸ್ಯರು ಖಂಡತುಂಡವಾಗಿ ನಿರ್ಣಯವನ್ನು ವಿರೋಧಿಸಿದರು ಬಗ್ಗೆ ಒತ್ತಡ ತರದಂತೆ ಸಿ.ಪಿ.ಐ (ಎಂ) ನ ಸೋಮನಾಥ ಚಟರ್ಜಿ ಬಿ.ಜ.ಪಿ. ಮುಖಂಡರನ್ನು ವಿನಂತಿಸಿದರು.

# ಸಿ.ಐ.ಟಿ.ಯು. ರಾಜ್ಯ ಮಂಡಳಿ ಸಭೆ ಕುಂದಾಪುರದಲ್ಲಿ

ಸಿ.ಐ.ಟಿ.ಯು ರಾಜ್ಯ ಪದಾಧಿಕಾರಿಗಳ ಸಭೆ 17-8-90 ರಂದು ಎಸ್.ಸೂರ್ಯ ನಾರಾಯಣರಾವ್ ಅವರ ಅಧ್ಯಕ್ಷತೆಯಲ್ಲಿ ಸೇರಿತ್ತು. ವಿಜೆಕೆ ನಾಯರ್ ಎನ್.ಕೆ. ಉಪಾಧ್ಯಾಯ, ಸಿ.ನಂಜುಂಡಪ್ಪ, ವಿ.ಸುಕುಮಾರ್ ಮತ್ತು ಕೆ.ವಿ. ಶ್ರೀನಿವಾಸ ಹಾಜರಿದ್ದರು.

ಕೇಂದ್ರ ಸರಕಾರದ ಬೆಲೆಯೇರಿಕೆ ನೀತಿಯ ವಿರುದ್ಧ 23-8-90 ರಂದು ರಾಜ್ಯಾದ್ಯಂತ ಪತಿಭಟನೆ. ಮತಪ್ರದರ್ಶನ ನಡೆಸಬೇಕೆಂದೂ 10-9-90 ರಂದು ತ್ರಿಪುರಾ ದಿನಾಚರಣೆಯನ್ನು ರಾಜ್ಯಾದ್ಯಂತ ಆಚರಿಸಿ ಅಲ್ಲಿ ಸಿ.ಐ.ಟಿ.ಯುಗೆ ಸೇರಿದ ಅತ್ಯಾಚಾರವನ್ನು ಖಂಡಿಸಿ. ಪ್ರಜಾಪ್ರಭುತ್ವದ ಕಗ್ಗೊಲೆ ಗೈಯುತ್ತಿರುವ ಕಾಂಗ್ರೆ-ಜಿಟಿ.ಯು.ಜೆ.ಎಸ್ ಸರಕಾರದ ರಾಜೀನಾಮೆಯನ್ನು ಒತ್ತಾಯಿಸಬೇಕೆಂದೂ ತ್ರಿಪುರಾದಲ್ಲಿ ಅತ್ಯಾಚಾರಕ್ಕೊಳಗಾದ ಕಾರ್ಮಿಕರ ಸಹಾಯಾರ್ಥವಾಗಿ ಎಲ್ಲ ಕಾರ್ಮಿಕರಿಂದಲೂ ಸಾರ್ವಜನಿಕರಿಂದಲೂ "ತ್ರಿಪುರಾ ನಿಧಿ " ಸಂಗ್ರಹಿಸಿ 11.9.90 ರೊಳಗೆ ರಾಜ್ಯ ಕೇಂದ್ರಕ್ಕೆ ಕಳುಹಿಸ ಬೇಕೆಂದು ನಿರ್ಣಯಿಸಲಾಯಿತು 19.9.90 ರಂದು ದಿಲ್ಲಿಯಲ್ಲಿ ಸಮಾವೇಶ ಗೊಳ್ಳುವ ಕೋಮುವಾದಿ ವಿರೋಧಿ ಸಮಾವೇಶಕ್ಕೆ ರಾಜ್ಯದಿಂದ ಕನಿಷ್ಠ 23 ಜನರನ್ನು ಕಳುಹಿಸಲು ನಿರ್ಣಯಿಸಿತು.

ಹತ್ತಿಗಿರಣಿ ಕಾರ್ಮಿಕರ ಬೇಡಿಕೆಗಳ ಬಗ್ಗೆ ಆಗಸ್ಟ್ 25 ರಿಂದ 31 ರವರೆಗೆ ವಾರಾಚರಣೆ ಆಚರಿಸಬೇಕೆಂದು ನಿರ್ಣಯಿಸಿತು. 2-9-90 ರಂದು ದಿಲ್ಲಿಯಲ್ಲಿ ನಡೆಯುವ ಕೆಲಸದ ಹಕ್ಕು ಮೂಲಭೂತ ಹಕ್ಕು ವಿಚಾರ ಸಂಕಿರಣದಲ್ಲಿ ಎಸ್.ಸೂರ್ಯನಾರಾಯಣರಾವ್ ಮತ್ತು ಎನ್. ಕೆ.ಉಪಾಧ್ಯಾಯರು ಭಾಗವಹಿಸ ಬೇಕೆಂದು ನಿರ್ಧರಿಸಿತು. ಪಿ.ಎಫ್ ಸಮಿತಿಗೆ ಕಾ.ಮೂಸಬ್ಬನವರ ಹೆಸರನ್ನು ಸೂಚಿಸಲಾಯಿತು.

## ಸೀಮೆ ಎಣ್ಣೆ ಅಭಾವದ ವಿರುದ್ಧ ಪ್ರತಿಭಟನೆ

ಸೀಮೆ ಎಣ್ಣೆಯ ವಿತರಣೆಯ ದೋಷವನ್ನು ಸರಿಪಡಿಸಿ, ನಿಗದಿತ ವೇಳೆಯಲ್ಲಿ ವಿತರಿಸಿ, ಕಾಳಸಂತೆ ಕೋರತನವನ್ನು ತಡೆಗಟ್ಟಿ ಜನರಿಗೆ ಆಗಿರುವ ತೊಂದರೆಯನ್ನು ಸರಿಪಡಿಸ ಬೇಂದು ಸಿ.ಪಿ.ಐ.(ಎಂ) ಶ್ರೀರಾಮಪುರ ಶಾಖೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯನ್ನು ಆಗ್ರಹಪಡಿಸಿತ್ತು. ಆದರೆ ಅಧಿಕಾರಿಗಳು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳದ್ದರಿಂದ ಆಗಸ್ಟ್ 20 ರಂದು ಇಲಾಖೆಯ ಕಛೇರಿಯೆದುರು ನೂರಾರು ಕಾರ್ಯಕರ್ತರು ಸೇರಿದು ಪ್ರತಿಭಟನಾ ಮತಪ್ರದರ್ಶನ ನಡೆಸಿದರು.

ವಕೀಲರ ಸಂಘದ ಮುಖಂಡ ಶಂಕರಪ್ಪ, ಡಿ.ವೈ.ಎಫ್.ಐ.ಜಿಲ್ಲಾ ಅಧ್ಯಕ್ಷ ಶ್ರೀನಿವಾಸ್ ಗೋಪಾಲಕೃಷ್ಣ ನಾಗರಿಕರನ್ನು ದ್ದೇಶಿಸಿ ಮಾತನಾಡಿದರು.

ಸೀಮೆ ಎಣ್ಣೆ ವಿತರಣೆ ಸರಿಪಡಿಸುವ, ಅದರಲ್ಲಿ ಜನಸಾಮಾನ್ಯರಿಗಾಗುತ್ತಿರುವ ಅನ್ಯಾಯಗಳನ್ನು ಸರಿಪಡಿಸಲು ಆರು ಸಲಹೆಗಳಿದ್ದ ಮನವಿ ಪತ್ರವನ್ನೂ ಸಲ್ಲಿಸಲಾಯಿತು. ನಾಗರಿಕರ ಪರವಾದ ಈ ಬೇಡಿಕೆಗಳನ್ನು ಈಡೇರಿಸುವುದಾಗಿ ಅಧಿಕಾರಿಗಳು ಭರವಸೆ ನೀಡಿದರು. ಈಡೇರದಿದ್ದರೆ ಪಕ್ಷವು ಉಗ್ರ ಚಳುವಳಿ ಕೈಗೊಳ್ಳಬೇಕಾದೀತೆಂದೂ ಅಧಿಕಾರಿಗಳನ್ನು ಎಚ್ಚರಿಸಲಾಯಿತು. ಕಾರ್ಯಕ್ರಮದಲ್ಲಿ ರಾಜೇಂದ್ರಕುಮಾರ್ ಪಾಲ್‌ಗೊಂಡವರಿಗೆ ವಂದನಾರ್ಪಣೆ ಮಾಡಿದರು.

## ಪಕ್ಷದ ಕಟ್ಟಡ ನಿಧಿಗಾಗಿ

ಸಿ.ಪಿ.ಐ.(ಎಂ) ರಾಜ್ಯಸಮಿತಿ ಕಟ್ಟಡಕ್ಕಾಗಿ ನಿಧಿ ಸಂಗ್ರಹಿಸಲು ಹಗರಿಬೊಮ್ಮನ ಹಳ್ಳಿಯ ಪಕ್ಷದ ಶಾಖೆ ವ್ಯಾಪಕ ಕಾರ್ಯಕ್ರಮ ಹಮ್ಮಿಕೊಂಡಿದೆ. ಹಳ್ಳಿ ಹಳ್ಳಿಯಲ್ಲೂ 1 ತಿಂಗಳ ಸತತ ಕಾರ್ಯಕ್ರಮ ನಡೆಸಿ 15 ಸಾವಿರ ರೂ. ಸಂಗ್ರಹಿಸಲು ಆಗಸ್ಟ್ 8 ರಂದು ನಡೆದ ಶಾಖೆಗಳ ಸಭೆ ನಿರ್ಧರಿಸಿತು. ತಾಲ್ಲೂಕಿನಲ್ಲಿ ದೊಡ್ಡ ಮಟ್ಟದಲ್ಲಿ ಎಲ್ಲಾ ವಿಭಾಗಗಳನ್ನು ಮುಟ್ಟಿ ಪಕ್ಷದ ನಿಧಿಯನ್ನು ಸಂಗ್ರಹಿಸಲಾಗುವುದು ಎಂದು ಕಾರ್‍ದರ್ಶಿ ಜೆ.ಎಂ. ವೀರಸಂಗಯ್ಯ ತಿಳಿಸಿದ್ದಾರೆ.

## 15 ಸಾವಿರ ಮಂಡಲ ಪಂಚಾಯಿತಿ ನೌಕರರರಿಗೆ ರಕ್ಷಣೆ ನೀಡಲು ಒತ್ತಾಯ

ಗ್ರಾಮಾಭಿವೃದ್ಧಿ ಮತ್ತು ಜಿಲ್ಲಾ ಪರಿಷತ್ ಮಂತ್ರಿಗಳಾದ ಎಂ.ವೈ. ಘೋರ್ಪಡೆಯವರನ್ನೊಳಗೊಂಡು ಹಲವಾರು ಪ್ರಮುಖರು ಜಿಲ್ಲಾ ಪರಿಷತ್ ಮಸೂದೆಗೆ ತಿದ್ದುಪಡಿ ತರಬೇಕೆಂದು ಗಂಭೀರವಾಗಿ ಬಹಿರಂಗವಾಗಿ ಚರ್ಚೆ ಮಾಡುತ್ತಿರುವಾಗ, 15,000 ಮಂಡಲ ಪಂಚಾಯಿತಿ ನೌಕರರ ಸೇವಾ ನಿಯಮ, ಸಂಬಳ ಅವರ ಭವಿಷ್ಯ ನೌಕರಿ ಭದ್ರತೆಗಳ ಕುರಿತು ಒಬ್ಬರೂ ಚಕಾರವೆತ್ತದಿರುವುದು ಖಂಡನೀಯ. ಸರಕಾರದ ಯಾವುದೇ ಅಭಿವೃದ್ಧಿ ಯೋಜನೆಗಳು ಸುಗಮವಾಗಿ ನಡೆಯಬೇಕಾದರೆ ನೌಕರರ ಸಹಕಾರ ಅಗತ್ಯವೆಂಬ ಅಂಶವನ್ನು ಎಲ್ಲರೂ ಮರೆತಂತೆ ಕಂಡುಬರುತ್ತದೆ. ಭದ್ರತೆಯೇ ಇಲ್ಲದಾಗಿದೆ. 15,000 ನೌಕರರ ಹಿತದೃಷ್ಟಿಯಿಂದ ಸರಕಾರ ಅವರ ಕುರಿತು ತುರ್ತು ನಿರ್ಣಯ ತೆಗೆದುಕೊಳ್ಳಬೇಕೆಂದೂ ಅವರಿಗೆ ರಕ್ಷಣೆ ನೀಡುವ ಕ್ರಮ ಕೈಗೊಳ್ಳಬೇಕೆಂದೂ, ಹಾಗೆಯೇ ಗುಲ್ಬರ್ಗಾ ಜಿಲ್ಲಾ ಪರಿಷತ್ತಿನವರು ಸುಪ್ರಿಂ ಕೋರ್ಟ್‌ನ ನಿರ್ಣಯದಂತೆ ಮಂಡಲ ಪಂಚಾಯಿತಿ ನೌಕರರಿಗೆ ಕನಿಷ್ಠ ರೂ 780 ಕೊಡಬೇಕೆಂದು ನಿರ್ಣಯಿಸಿದ್ದು ಇತರ ಜಿಲ್ಲಾ ಪರಿಷತ್ ಮಂಡಲ ಪಂಚಾಯಿತಿ ನೌಕರರರಿಗೆ ಅಂಥ ನಿರ್ಣಯ ಕೈಗೊಳ್ಳುವಂತೆ ಕ್ರಮವಹಿಸಬೇಕೆಂದೂ ಮಂತ್ರಿಗಳನ್ನು ಕರ್ನಾಟಕ ರಾಜ್ಯ ಮಂಡಲ ಪಂಚಾಯಿತಿ ನೌಕರ ಸಂಘದ ಪ್ರಧಾನ ಕಾರ್ಯದರ್ಶಿ ಎನ್.ಕೆ. ಉಪಾಧ್ಯಾಯ ಒತ್ತಾಯಿಸಿದ್ದಾರೆ.

## ಅರಣ್ಯ ಇಲಾಖೆ ದಿನಗೂಲಿ ನೌಕರರ ಸಂಘ

ಈ ಸಂಘದ ಬಳ್ಳಾರಿ ಜಿಲ್ಲಾ ಸಮಿತಿಯ ಸಭೆ ಆಗಸ್ಟ್ 8 ರಂದು ನಡೆದು ವಿವಿಧ ತಾಲೂಕುಗಳಿಂದ ಬಂದ ವರದಿಗಳ ಮೇಲೆ ಚರ್ಚೆ ನಡೆಸಿತು. ಬಳ್ಳಾರಿ ಜಿಲ್ಲಾ ನೌಕರರ ಹೋರಾಟದ ಫಲವಾಗಿ ರಾಜ್ಯದಲ್ಲೇ ಅನುಕೂಲವಾಗುವಂತೆ ಇತ್ತೀಚೆಗೆ ಸರ್ಕಾರ ಹೊರಡಿಸಿರುವ ಆಜ್ಞೆ ಅನುಸಾರ ಕೊಡಬೇಕಾದ ವೇತನವನ್ನು ಚಿಕ್ಕ ಮುಖಾಂತರ ಡಿ.ಎಫ್.ಓ.ರವರೇ ನೇರವಾಗಿ ಕೊಡಬೇಕೆಂದು ಬಂದಿರುವ ಆಜ್ಞೆಯ ಜಾರಿಗಾಗಿ ಹೋರಾಟ ರೂಪಿಸಲು ತೀರ್ಮಾನಿಸಲಾಯಿತು. ಇಲ್ಲವಾದರೆ ಅಧಿಕಾರಿಗಳು ಅದನ್ನು ಜಾರಿಗೊಳಿಸುವುದಿಲ್ಲ ಎಂದು ಸಿ.ಐ.ಟಿ.ಯು ಜಿಲ್ಲಾ ಸಹ ಸಂಚಾಲಕ ಸಿ.ರಫ್ ... ತಿಳಿಸಿದರು ಇದಲ್ಲದೆ ರಾಜ್ಯಸರ್ಕಾರ ಮಟ್ಟದಲ್ಲೇ ಕೆಲವು ಬೇಡಿಕೆಗಳು ಪರಿಹಾರವಾಗಬೇಕಿದ್ದು ಅದಕ್ಕಾಗಿ ಬೆಂಗಳೂರು ಚಲೋ ಕಾರ್ಯಕ್ರಮದ ಬಗ್ಗೆಯೂ ತೀರ್ಮಾನಿಸಲಾಯಿತು.

ಈ ಸಂಘವನ್ನು ಸಿ.ಐ.ಟಿ.ಯುಗೆ ಸಂಯೋಜಿಸಲು ವಿನಂತಿಸಿಕೊಳ್ಳಲು ಮತ್ತು ಬೇರೆ ಬೇರೆ ಜಿಲ್ಲೆಗಳಲ್ಲಿ ಸಂಘಟಿಸಲೂ ಮುತುವರ್ಜಿ ವಹಿಸಬೇಕೆಂದೂ ಸಭೆ ಕೇಳಿದೆ. ಅಂತಹ ಸಂಘಟನೆಯ ಮೊದಲ ಸಮಾವೇಶವನ್ನು ಬಳ್ಳಾರಿಯಲ್ಲಿಯೇ ನಡೆಸಲು ಕೂಡಾ ಸಭೆ ತೀರ್ಮಾನಿಸಿತು.

## -ಬ್ರಹ್ಮಾವರದಲ್ಲಿ ರಿಕ್ಷಾ ಚಾಲಕರ ಪ್ರತಿಭಟನೆ

ಆಗಸ್ಟ್ 5 ರಂದು ರಾತ್ರಿ 11 ಗಂಟೆಗೆ ... ಪ್ರಯಾಣಿಕರನ್ನು ಒಯ್ಯುತ್ತಿದ್ದ ರಿಕ್ಷಾವನ್ನು ನಿಲ್ಲಿಸಿ ಅರಣ್ಯಾಧಿಕಾರಿ ಮತ್ತು ಸಿಬ್ಬಂದಿಯವರಿಗೆ ಹೋಗಬೇಕಾಗಿದೆ ಎಂದು ... ಕೇಳದೆ ಚಾಲಕ ಕೇಬಲ್‌ರ ಮೇಲೆ ಕೈಮಾಡಿದರು. ಸುದ್ದಿ ತಿಳಿದ ರಿಕ್ಷಾ ಚಾಲಕರು ಆಗಲೇ ಪೋಲೀಸ್ ದೂರು ... ಆಗಸ್ಟ್ 8 ರವರೆಗೂ ಈ ಬಗ್ಗೆ ಪೋಲೀಸರು ಯಾವುದೇ ಕ್ರಮ ಕೈಗೊಳ್ಳದಾಗ ಯಾವುದೇ ರಿಕ್ಷಾ ಓಡದೆ ಪ್ರತಿಭಟನಾ ಬಂದ್ ನಡೆಸಿದರು. ... ಭಾರಿ ಮೆರವಣಿಗೆ ಹಾಗೂ ಪೋಲೀಸ್ ಠಾಣೆ ಎದುರು ಧರಣಿ ನಡೆಸಲಾಯಿತು. ಕೊನೆಗೂ ಗಣ್ಯವ್ಯಕ್ತಿಗಳ ಜೊತೆ ಬಂದ ಅರಣ್ಯಾಧಿಕಾರಿ ತನ್ನಿಂದಾದ ತಪ್ಪಿಗೆ ವಿಷಾದ ವ್ಯಕ್ತಪಡಿಸಿದಾಗಲೇ ರಿಕ್ಷಾ ಚಾಲಕರ ಪ್ರತಿಭಟನಾ ಚಳುವಳಿ ನಿಂತದ್ದು.

ಮೆರವಣಿಗೆಯಲ್ಲಿ ಉಡುಪಿತಾಲೂಕಿನ ಇತರೆಡೆಗಳ ಅಂದರೆ ಹತ್ತಿರದ ಮಾಬುಗಳ, ಸಾಸಾನ, ಬಾರ್ಕೂರುಗಳ ರಿಕ್ಷಾ ಚಾಲಕರೂ ಭಾಗವಹಿಸಿದ್ದರು. ಸಿ.ಐ.ಟಿ.ಯು. ಮುಖಂಡರುಗಳಾದ ಡೇವಿಡ್ ಕರ್ಕಡ, ಕೆ.ಶಂಕರ್, ಹೆಚ್. ವಿಠಲ, ಗೇಡ್ರಿನ್ ಫರ್ನಾಂಡಿಸ್, ಸ್ಥಳೀಯ ರಿಕ್ಷಾ ಚಾಲಕರ ಮುಖಂಡರಾದ ಸದಾಶಿವ ಪೂಜಾರಿ, ಕರುಣಾಕರ ಕುಲಾಲ್. ಸದಾಶಿವ ಮುಂತಾದವರು ಈ ಪ್ರತಿಭಟನೆಯಲ್ಲಿ ಭಾಗವಹಿಸಿದರು.

## ಎಸ್.ಎಫ್.ಐ. ರಾಜ್ಯ ಸಮಿತಿ ಹೇಳಿಕೆ

## " ಕಾಶ್ಮೀರ ಉಳಿಸಿ"ಬಂದ್ ಪರಿಸ್ಥಿತಿಯನ್ನು ಬಿಗಡಾಯಿಸುವ ಕರೆ

"ಕಾಶ್ಮೀರ ಉಳಿಸಿ" ಎಂಬ ಘೋಷಣೆ ಮುಂದಿಟ್ಟು ಅಖಿಲ ಭಾರತ ವಿದಾರ್ಥಿ ಪರಿಷತ್ (ಎ.ಬಿ.ವಿ.ಪಿ.) ಆಗಸ್ಟ್ 22ರಂದು ಕಾಲೇಜು ಬಂದ್ ನಡೆಸಬೇಕೆಂದು ನೀಡಿರುವ ಕರೆಯನ್ನು ವಿಫಲಗೊಳಿಸಬೇಕೆಂದು ದಿ.೨೦ ರಂದು ಪತ್ರಿಕಾ ಗೋಷ್ಠಿಯಲ್ಲಿ ನೀಡಿರುವ ಹೇಳಿಕೆಯಲ್ಲಿ ಎಸ್.ಎಫ್ ಐ. ರಾಜ್ಯಸಮಿತಿ ವಿದ್ಯಾರ್ಥಿ ಸಮುದಾಯ ವನ್ನು ವಿನಂತಿಸಿಕೊಂಡಿದೆ. ೩೭೦ ನೇ ವಿಧಿಯನ್ನು ರದ್ದು ಮಾಡಬೇಕೆಂಬ ಎ.ಬಿ.ವಿ.ಪಿ ಕರೆ ಶತ್ರುಗಳ ಕೈ ಬಲಪಡಿಸುವ ಘೋಷಣೆಯೆಂದು ಅದು ಹೇಳಿದೆ. ಏಕೆಂದರೆ ೩೭೦ ನೇ ವಿಧಿ ಕಾಶ್ಮೀರದ ಜನತೆ ನ್ಯಾಶನಲ್ ಕಾನ್ಪರೆನ್ಸ್ ನೇತೃತ್ವದಲ್ಲಿ ಕೈಯಲ್ಲಿ ಶಸ್ತ್ರ ಹಿಡಿದು ಪಾಕಿಸ್ತಾನಿ ಆಕ್ರಮಣಕಾರರ ವಿರುದ್ಧ ಹೋರಾಡಿ ಜಾತ್ಯಾತೀತ ಭಾರತದೊಡನೆ ತಮ್ಮನ್ನು ಗುರುತಿಸಿಕೊಂಡ ಐತಿಹಾಸಿಕ ಪ್ರಕ್ರಿಯೆಯ ಫಲಿತಾಂಶ ಎ.ಬಿ.ವಿ.ಪಿ. ನೀಡಿರುವ ಕರೆ ಕಾಶ್ಮೀರ ಸಮಸ್ಯೆಗೆ ಕಾರ್ಯಸಾಧ್ಯ ಕ್ರಮ ಸೂಚಿಸುವ ಬದಲು ಅದನ್ನು ಇನ್ನಷ್ಟು ಹದಗೆಡಿಸುವ ಪ್ರಯತ್ನ ಎಂದೂ ಹೇಳಿಕೆ ತಿಳಿಸಿದೆ.

ದೇಶದಲ್ಲಿ ಹೆಚ್ಚುತ್ತಿರುವ ಕೋಮುವಾದ ಉದ್ರಿಕ್ತತೆ ವಿರುದ್ಧ ಜನಜಾಗೃತಿ ಹುಟ್ಟಿಸಲು ಎಸ್.ಎಫ್.ಐ. ಮತ್ತು ಡಿ.ವೈ.ಎಫ್.ಐ.ಜತೆಗೂಡಿ ಆಗಸ್ಟ್ ೩೦ ರಂದು ರಾಷ್ಟ್ರಮಟ್ಟದ ಸಮಾವೇಶ ನಡೆಸಲಿವೆ. ಅನಂತರ ಕರ್ನಾಟಕದಲ್ಲಿಯೂ ಸೆಪ್ಟೆಂಬರ್ ೭ ರಿಂದ 15 ರವರೆಗೆ ಎಸ್.ಎಫ್.ಐ. ವಿವಿಧ ಕಾರ್ಯಕ್ರಮಗಳನ್ನು ರೂಪಿಸಿಕೊಂಡು, ಎಲ್ಲಾ ಜಾತ್ಯಾತೀತ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆಗಳನ್ನು ಜತೆಗೂಡಿಸಿ ಕೋಮುವಾದದ ವಿರುದ್ಧ ರಾಷ್ಟ್ರೀಯ ಸಮಗ್ರತೆಯ ರಕ್ಷಣೆಯ ಹೋರಾಟ ನಡೆಸಲಿದೆ ಎಂದು ಎಸ್.ಎಫ್.ಐ. ರಾಜ್ಯ ಅಧ್ಯಕ್ಷ ಜಿ.ಸಿ ಬಯ್ಯಾರೆಡ್ಡಿ ಮತ್ತು ರಾಜ್ಯ ಕಾರ್ಯದರ್ಶಿ ಎಸ್.ವೈ. ಗುರುಶಾಂತ್ ತಿಳಿಸಿದ್ದಾರೆ.

## ನಿಮ್ಮ ಪ್ರಶ್ನೆ- ನಮ್ಮ ಉತ್ತರ!

**ಪ್ರಪಂಚದಲ್ಲಿ ಸಮಾಜವಾದಿ ರಾಷ್ಟ್ರಗಳು ಎಷ್ಟಿವೆ? ಅವು ಯಾವುವು?**

-ಎಲ್.ಕೃಷ್ಣಮೂರ್ತಿ, ಲಕ್ಕೂರು.

ಇದನ್ನು ಉತ್ತರಿಸಬೇಕಾದರೆ ಸಮಾಜವಾದ ಎಂದರೇನು? ಎಂಬ ಪ್ರಶ್ನೆ ಬಗ್ಗೆ ಸ್ಪಷ್ಟ ಕಲ್ಪನೆ ಇರಬೇಕು. ಒಂದು ದೇಶವನ್ನು ಸಮಾಜವಾದಿ ದೇಶ ಎನ್ನಬೇಕಾದರೆ ಯಾವ ಅಂಶವು ಪ್ರಧಾನವಾಗಿರಬೇಕು ಎಂಬುದೂ ಸ್ಪಷ್ಟವಿರಬೇಕು. ಇದಕ್ಕೆ ವಿವಾದರಹಿತ ಉತ್ತರ ಈಗಿನ ಸಂದರ್ಭದಲ್ಲಿ ಕಷ್ಟ. ಆದರೆ ಇಷ್ಟು ಹೇಳಬಹುದು. ಸಮಾಜವಾದ ಒಂದು ಉತ್ಪಾದನಾ ವಿಧಾನ. ಹಿಂದಿನ ಉತ್ಪಾದನಾ ವಿಧಾನಗಳಾದ ಪಾಳೆಯಗಾರಿ, ಬಂಡವಾಳಶಾಹಿ ವಿಧಾನಗಳಿಗಿಂತ ಉತ್ತಮವಾದದ್ದು. ಆದರೆ ಉತ್ಪಾದನಾ ವಿಧಾನ ಏಕಾಏಕಿ ಬದಲಾಗುವುದಿಲ್ಲ.ಹಳೆಯ ವಿಧಾನದ ಪಳೆಯುಳಿಕೆಗಳು ಇರುತ್ತವೆ. ಆದ್ದರಿಂದ ಒಂದು ದೇಶ ಸಮಾಜವಾದಿ ಅಥವಾ ಬಂಡವಾಳಶಾಹಿ ಎನ್ನಬೇಕಾದರೆ, ಆ ದೇಶದಲ್ಲಿ ಆ ಉತ್ಪಾದನಾ ವಿಧಾನ ಪ್ರದಾನವಾದದ್ದು ಆಗಿರಬೇಕು.

ಈ ಆಧಾರದ ಮೇಲೆ ಸೋವಿಯೆತ್ ಒಕ್ಕೂಟ, ಚೀನಾ, ಮಂಗೋಲಿಯಾ, ವಿಯೆತ್ನಾಂ, ಕ್ಯೂಬಾ, ಉತ್ತರ ಕೊರಿಯಾ ಆಲ್ಬೇನಿಯಾ ಇವನ್ನು ಸಮಾಜವಾದಿ ದೇಶಗಳು ಎನ್ನಬಹುದು. ಪೂರ್ವಜರ್ಮನಿ, ಪೋಲೆಂಡ್ .ಯುಗೊಸ್ಲಾವಿಯಾ-ದೇಶಗಳಲ್ಲೂ ಪ್ರಧಾನ ಉತ್ಪಾದನಾ ವ್ಯವಸ್ಥೆ ಇತ್ತೀಚಿನ ವರೆಗೂ ಈಗಲೂ-ಸಮಾಜವಾದಿ ಎನ್ನಬಹುದು. ಕಳೆದ ವರ್ಷದ ರಾಜಕೀಯ ಅಲ್ಲೋಲಕಲ್ಲೋಲಗಳನಂತರ ಈ ದೇಶಗಳಲ್ಲಿ ಹಲವು ಕಡೆ ಕಮ್ಯುನಿಸ್ಟ್ ಪಕ್ಷಗಳು ಅಧಿಕಾರದಲ್ಲಿಲ್ಲದಿದ್ದರೂ, ಸಮಾಜವಾದಿ ಉತ್ಪಾದನಾ ವ್ಯವಸ್ಥೆ ಬಹಳ ಮಟ್ಟಿಗೆ ಗಮನಾರ್ಹವಾಗಿ ಬದಲಾಗಿಲ್ಲ- ಬಹುಶಃ ಪೋಲೆಂಡ್, ಪೂರ್ವ ಜರ್ಮನಿಯಲ್ಲಿ ಬಿಟ್ಟರೆ ಬಂಡವಾಳ ಶಾಹಿಯನ್ನು ಪುನಃ ಸ್ಥಾಪಿಸುವ ಪ್ರಯತ್ನಗಳು ನಡೆದಿದ್ದರೂ, ಹೆಚ್ಚಿನ ಈ ದೇಶಗಳಲ್ಲಿ ಗುರುತಿಸಬಹುದಾದ ನಿರ್ದಿಷ್ಟ ಬಂಡವಾಳಶಾಹಿ ವರ್ಗ ಇಲ್ಲವೆನ್ನಬಹುದು.

ಇವಲ್ಲದೆ ಇನ್ನೂ ಹಲವು ದೇಶಗಳಲ್ಲಿ ಪಾಳೆಯಗಾರಿ ವಸಾಹತುಶಾಹಿ-ಸಾಮ್ರಾಜ್ಯಶಾಹಿ ವಿರುದ್ಧ ನಡೆದ ಪ್ರಜಾಪ್ರಭುತ್ವ ಕ್ರಾಂತಿ ಬೂರ್ಜ್ವಾ ಪ್ರಜಾಪ್ರಭುತ್ವದ ಹಾದಿ ತುಳಿಯದೆ. 'ಜನತಾ ಪ್ರಜಾಪ್ರಭುತ್ವ'ದತ್ತ ಸಾಗಿದೆ. ಈ ದೇಶಗಳು ಬಂಡವಾಳಶಾಹಿ-ಅಲ್ಲದ ಬೆಳವಣಿಗೆ ಪಥ ಅಂಗೀಕರಿಸಿವೆ. ಇವನ್ನು 'ಜನತಾ ಪ್ರಜಾಪ್ರಭುತ್ವ'ಗಳು ಎನ್ನುತ್ತಾರೆ.

ಇಂತಹ ದೇಶಗಳು ಹಲವಾರು ಲಾವೋಸ್, ಕಂಬೋಡಿಯಾ, ಅಂಗೋಲಾ, ಜಿಂಬಾಬ್ವೆ, ಇಥಿಯೋಪಿಯಾ, ಇತ್ಯಾದಿ. ಇತ್ತೀಚೆಗೆ ಸಾಮ್ರಾಜ್ಯಶಾಹಿಯಿಂದ ವಿಮೋಚನೆಗೊಂಡ ನಮೀಬಿಯಾ 'ಜನತಾ ಪ್ರಜಾಪ್ರಭುತ್ವ' ಬೆಳೆಯುವ ಸಾಧ್ಯತೆಗಳಿವೆ.

ಹಾಗೇನೇ 'ಸಮಾಜವಾದಿ' ಎಂಬ ಹೆಸರಿಟ್ಟುಕೊಂಡಿರುವ ಪಕ್ಷಗಳು ಹೆಚ್ಚು ಕಡಿಮೆ ಸತವಾಗಿ ಆಳುತ್ತಿವೆ ಎಂದ ಮಾತ್ರಕ್ಕೆ ಸ್ಪೇನ್, ಸ್ವೀಡನ್, ಗ್ರೀಸ್ ಮುಂತಾದ ದೇಶಗಳು ಸಮಾಜವಾದಿ ಅಲ್ಲ ಎಂಬುದಕ್ಕೆ ಯಾವುದೇ ಸಂಶಯವಿಲ್ಲ. ಇಲ್ಲಿನ ಉತ್ಪಾದನಾ ವ್ಯವಸ್ಥೆ ಬಂಡವಾಳಶಾಹಿ ಹಾಗೇನೇ ಸಂವಿಧಾನನದಲ್ಲಿ ಸಮಾಜವಾದಿ ಗಣರಾಜ್ಯ ಎಂದು ಬರಕೊಂಡ ಮಾತ್ರಕ್ಕೆ ದೇಶ ಸಮಾಜವಾದಿ ಆಗುವುದಿಲ್ಲ. ಇದಕ್ಕೆ ಉದಾಹರಣೆ ಭಾರತದಂತಹ ಬಂಡವಾಳ ಶಾಹಿ-ಪಾಳೆಯಗಾರಿ ಆರ್ಥಿಕ ವ್ಯವಸ್ಥೆಯ ದೇಶಗಳು.

**ರಷ್ಯಾದಲ್ಲಿ ಕ್ರಾಂತಿ ಯಾವಾಗ ನಡೆಯಿತು? ತಿಳಿಸಿ.**

-ಕೆ.ಆರ್.ಗೋಪಾಲಕೃಷ್ಣ, ಕುಂದಲಗುರ್ಕಿ

'ಅಕ್ಟೋಬರ್ ಕ್ರಾಂತಿ' ಎಂದೇ ಪ್ರಸಿದ್ಧವಾದ ರಷ್ಯನ್ ಕ್ರಾಂತಿ ನಡೆದಿದ್ದು. 1917 ರ ಅಕ್ಟೋಬರ್‌ನಲ್ಲಿ

**ಜನರು ಕಮ್ಯುನಿಸ್ಟ್ ಆಡಳಿತವನ್ನು ಒಪ್ಪುತ್ತಾರೆ ಆದರೆ ಕಮ್ಯುನಿಸ್ಟ್ ಪಾರ್ಟಿ ಸದಸ್ಯರಾಗಲು ಒಪ್ಪುವುದಿಲ್ಲ. ಯಾಕೆಂದರೆ?**

-ಶಿವಿಶ್ವನಾಥ ಶಿಬಾಜಿ, ಬೆಳ್ಳಂಗಡಿ

ಕಮ್ಯುನಿಸ್ಟ್ ಪಕ್ಷ ಎಲ್ಲಾ ದುಡಿಯುವ ವರ್ಗಗಳ ಜನರ ಹಿತಾಸಕ್ತಿಗಳಿಗಾಗಿ ಹಕ್ಕುಗಳಿಗಾಗಿ ಹೋರಾಡುತ್ತದೆ. ಪ್ರತಿಗಾಮಿ ಆಳುವ ವರ್ಗಗಳನ್ನು ಬಿಟ್ಟು ಉಳಿದೆಲ್ಲಾ ವರ್ಗಗಳ ಹಿತರಕ್ಷಣೆಗಾಗಿ ಬದ್ಧವಾಗಿರುತ್ತದೆ. ಇದು ಈ ವರ್ಗದ ಜನರಿಗೆ ಮನದಟ್ಟಾಗುತ್ತಾ ಹೋದ ಹಾಗೆ (ಇದೂ ಅಷ್ಟೇನೂ ಸುಲಭದ ತ್ವರಿತಗತಿಯ ಪ್ರಕ್ರಿಯೆ ಅಲ್ಲ) ಅವರು ಕಮ್ಯುನಿಸ್ಟ್ ಆಡಳಿತ ವನ್ನು ಒಪ್ಪುತ್ತಾರೆ. ಆದರಲ್ಲೂ ಕಾರ್ಮಿಕರ ವರ್ಗಕ್ಕೆ ಇದು ಒಂದು ಇಡೀ ವರ್ಗವಾಗಿ ನಿಜ. ವ್ಯಕ್ತಿಗತವಾಗಿ ಕಾರ್ಮಿಕ ಕಮ್ಯುನಿಸ್ಟ್ ನಾಯಕತ್ವದ ಹೋರಾಟದಲ್ಲಿ ಭಾಗವಹಿಸುತ್ತಾನೆ. ಆದರೆ ಕಮ್ಯುನಿಸ್ಟ್ ಪಕ್ಷದ ಸದಸ್ಯನಾಗವುದು ಎಂದರೆ ತನ್ನ ವರ್ಗದ, ದೇಶದ ಎಲ್ಲಾ ದುಡಿಯುವ ಜನತೆಯ ಹಿತಾಸಕ್ತಿಗಳಿಗಾಗಿ ಹೋರಾಡಲು, ಯಾವುದೇ ತ್ಯಾಗಮಾಡಲು, ಮಡಿಯಲೂ ಸಿದ್ಧನಾಗಿರುವುದು. ಇದಕ್ಕೆ ತಯಾರಾಗಲು ಆತನ ರಾಜಕೀಯ ಪ್ರಜ್ಞೆ, ವರ್ಗಪ್ರಜ್ಞೆ ಅತ್ಯಂತ ಆಳವಾಗಿ ಕೆಲವು ವಿಶಿಷ್ಟ ಮಾನವಗುಣಗಳೂ ಇರಬೇಕಾಗುತ್ತದೆ. .ತನ್ನ ಸುಖ ಲೆಕ್ಕಿಸದೆ ಇರುವುದು, ಉಳಿದವರ ಜತೆಗೆ ಅನುಕಂಪ, ಸಹಾನುಭೂತಿ, ವೈಯಕ್ತಿಕ ಶಿಸ್ತು, ತ್ಯಾಗ ಮನೋಭಾವ, ನಾಯಕತ್ವ ಈ ಎಲ್ಲಾ ಗುಣಗಳ ಸಮಾಗಮ ಇರುವವರು ಅಪರೂಪವೇ.

ಲೆನಿನ್‌ವಾದಿ ಪಕ್ಷದ ಪರಿಕಲ್ಪನೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡೇ ಕಮ್ಯುನಿಸ್ಟ್ ಪಕ್ಷ, ಕಾರ್ಮಿಕವರ್ಗದ ಅತ್ಯಂತ ಮುಂಚೂಣಿಯಲ್ಲಿರುವ ಕಾರ್ಮಿಕರ ಪಕ್ಷ. ಕ್ರಾಂತಿಯಲ್ಲಿ,ಕ್ರಾಂತಿಗಾಗಿ ಇಡೀ ವರ್ಗ ಭಾಗವಹಿಸಿದರೂ, ನಾಯಕತ್ವವನ್ನು ಇಂತಹ ವಿಶಿಷ್ಟ ಸದಸ್ಯರನ್ನು ಹೊಂದಿರುವ ಕಮ್ಯೂನಿಸ್ಟ್ ಪಕ್ಷ ವಹಿಸುತ್ತದೆ ಎಂದು ಪರಿಗಣಿಸಿದೆ. ಅರಾಜಕತಾವಾದಿಗಳು ಟ್ರಾಟ್ಸ್ಕಿವಾದಿಗಳು ತೀವ್ರಗಾಮಿಗಳು ಈ ಪರಿಕಲ್ಪನೆಯನ್ನು ಒಪ್ಪುವುದಿಲ್ಲ. ಅವರು ಇಡೀ ವರ್ಗ ಯಾವುದೇ ನಾಯಕತ್ವದ ಅಗತ್ಯವಿಲ್ಲದೆ ತನ್ನ ವಿಮೋಚನೆಗೆ ಹೋರಾಡುತ್ತವೆ.ಎಂದು ಹೇಳುತ್ತಾರೆ. ಸಾಮೂಹಿಕ ಸಂಘಟನೆಯಲ್ಲಿ ಕೆಲಸ ಮಾಡಿದವರಿಗೆ ಇದು ಸುಳ್ಳು ಎಂದು ಗೊತ್ತು.

# ಕಟುಕ ಸರಕಾರದಿಂದ ಗೂಂಡಾಗಳಿಗೆ ಪೂರ್ಣ ಬೆಂಬಲ



## ಬುಡಕಟ್ಟು ಸ್ವಾಯತ್ತ ಜಿಲ್ಲಾ ಮಂಡಳಿ ಚುನಾವಣಾ ವೇಳೆಯಲ್ಲಿ ತ್ರಿಪುರಾದಲ್ಲಿ ಕಾಂಗ್ರೆ-ಟಿ.ಯು.ಜೆ.ಎಸ್. ಗೂಂಡಾಗಳು ಮಾಡಿದ ಮತಗಟ್ಟೆಗಳ ವಶ, ಹಿಂಸೆ, ದಬ್ಬಾಳಿಕೆಗಳ ಬಗ್ಗೆ ರಾಷ್ಟ್ರೀಯರಂಗ ಸಂಸತ್ ಪ್ರತಿನಿಧಿಗಳ ವರದಿ

1990 ರ ಜುಲೈ 8 ರಂದು ತ್ರಿಪುರಾದಲ್ಲಿ ಉಪಜಾತಿ ಸ್ವಾಯತ್ತ ಜಿಲ್ಲಾ ಮಂಡಳಿ ಚುನಾವಣೆ ನಡೆಯಿತು. ಚುನಾವಣೆಯ ದಿನ ಅದರ ಮೊದಲು ಮತ್ತು ನಂತರ ಕಾಂಗ್ರೆ-ಟಿಯುಜೆಎಸ್ ಗೂಂಡಾಗಳು ನಡೆಸಿದ ಹಿಂಸೆ, ದಬ್ಬಾಳಿಕೆ, ಅತ್ಯಾಚಾರಗಳಿಗೆ ಗುರಿಯಾದ ಅನೇಕರು ಕೇಂದ್ರ ಸರಕಾರಕ್ಕೆ ದೂರು ನೀಡಿದರು. ಆ ದೂರಿನ ಆಧಾರದಲ್ಲಿ ರಾಷ್ಟ್ರೀಯ ರಂಗವು ಸರ್ವಶ್ರೀ ಯಶವಂತಸಿನ್ಹ(ಸಂಸತ್ ಸದಸ್ಯರು) ಅವರ ನೇತೃತ್ವದಲ್ಲಿ ಆರು ಮಂದಿ ಸಂಸತ್ ಪ್ರತಿನಿಧಿಗಳನ್ನು ಕಳುಹಿಸಲು ನಿರ್ಧರಿಸಿತು. ಸರ್ವಶ್ರೀಗಳಾದ ಡಾ. ವಿಜಯ ಮೋಹನ ರೆಡ್ಡಿ, ಮೊಹಮ್ಮದ್ ಸಾಬಿ, ಮತ್ತು ಶ್ರೀಮತಿ ವಿಜಯಾ ಚಕ್ರವರ್ತಿ (ಎಲ್ಲರೂ ರಾಷ್ಟ್ರೀಯರಂಗದ ಸಂಸತ್ ಸದಸ್ಯರು). 1990 ರ ಜುಲೈ 31 ಮತ್ತು ಆಗಸ್ಟ್ 1 ಈ ಎರಡು ದಿನಗಳ ಭೇಟಿಗಾಗಿ ತ್ರಿಪುರಾಕ್ಕೆ ತೆರಳಿದರು. ಉಳಿದ ಇಬ್ಬರಾದ ಸರ್ವಶ್ರೀಗಳಾದ ಅಮೃತ್ ಲಾಲ್ ಬಸುಮತಾರಿ ಮತ್ತು ದಲವತ್‌ಸಿಂಗ್ ಪರಾಸ್ತೆ ಅನಿವಾರ್ಯ ಕಾರಣಗಳಿಂದ ಹೋಗಲಿಲ್ಲ. ತ್ರಿಪುರಾದ ಮುಖ್ಯಮಂತ್ರಿಯವರು ಕೊಡಮಾಡ ರಾಜಾತಿಥ್ಯವನ್ನು ಪ್ರತಿನಿಧಿಗಲು ನಯವಾಗಿ ತಿರಸ್ಕರಿಸಿದರು. ಬದಲಾಗಿ ದೆಹಲಿಯಲ್ಲಿ ಮಾಡಿದ ಪೂರ್ವ ಯೋಜನೆಯಂತೆ ಓ. ಎನ್.ಜಿ.ಸಿ. (ತೈಲ ಮತ್ತು ನೈಸರ್ಗಿಕ ಅನಿಲಗಳ ಮಂಡಳಿ) ಅತಿಥಿ ಗೃಹದಲ್ಲಿ ಇರಲು ನಿರ್ಧರಿಸಿದರು.

ನೊಂದ ಮತ್ತು ಪೀಡಿತ ಜನರಿರುವ ಪ್ರದೇಶಗಳನ್ನು ಭೇಟಿ ಮಾಡಿ, ಅವರ ಅಹವಾಲುಗಳನ್ನು ವೈಯಕ್ತಿಕವಾಗಿ ವ್ಯಕ್ತಪಡಿಸಲು ಅವಕಾಶವನ್ನು ನೀಡಿ, ನೈಜ ಪರಿಸ್ಥಿತಿಯನ್ನು ಕಣ್ಣಾರೆ ನೋಡಿ ತಿಳಿದುಕೊಳ್ಳಲು ಈ ಪ್ರತಿನಿಧಿಗಳು ಕಾರ್ಯಕ್ರಮವನ್ನು ನಿರೂಪಿಸಿದರು. ರಾಜ್ಯ ಜನತಾದಳದ ಅಧ್ಯಕ್ಷ ಶ್ರೀ ಅರುಣಕಾಂತಿ ಭೌಮಿಕ್ ಮತ್ತು ರಾಜ್ಯದ ಎಡರಂಗದ ಸಂಚಾಲಕ ಕಾಮ್ರೇಡ್ ದಶರಥದೇಬ್ ಈ ಕಾರ್ಯದಲ್ಲಿ ಪ್ರತಿನಿಧಿಗಳೊಡನೆ ಸಹಕರಿಸಿದರು. ಭೇಟಿಯ ಸಮಯದಲ್ಲಿ ಸಂಸತ್ ತಂಡ ಮತ್ತು ಭೇಟಿ ಮಾಡಲು ಇಚ್ಛಿಸಿದ ಎಲ್ಲಾ ಪ್ರದೇಶಗಳಿಗೂ ಸರಕಾರವು ಬಿಗಿ ರಕ್ಷಣೆಯನ್ನು ನೀಡಿತು. ಭೇಟಿಯ ವೇಳೆ ಸಾಧ್ಯವಿದ್ದಷ್ಟು ಜನರನ್ನು ವೈಯಕ್ತಿಕವಾಗಿ ಭೇಟಿಯಾಗಿ, ಅವರ ಅಹವಾಲನ್ನು ಕೇಳಿ, ಅವರಿಂದ ಅರ್ಜಿಗಳನ್ನು ಸ್ವೀಕರಿಸುವ ಎಲ್ಲ ಪ್ರಯತ್ನಗಳನ್ನು ಮಾಡಲಾಯಿತು.

ರಾಷ್ಟ್ರೀಯ ರಂಗ ಸಂಸತ್ ಪ್ರತಿನಿಧಿಗಳು ಭೇಟಿಯ ವೇಳೆ ಸುಮಾರು 5000 ಜನರನ್ನು ಭೇಟಿ ಮಾಡಿದರು; ವಿವಿಧ ಸಂಘಟನೆಗಳ 34 ಮನವಿಗಳ ಬಗ್ಗೆ ಚರ್ಚಿಸಿದರು; ಮತ್ತು ಒಟ್ಟು 701 ವೈಯಕ್ತಿಕವಾದ ಅರ್ಜಿಗಳನ್ನು ಸ್ವೀಕರಿಸಿದರು. ಇವುಗಳೆಲ್ಲವನ್ನು ಪರಾಮರ್ಶಿಸಿ ಮಾಡಿದ ವರದಿಯಲ್ಲಿ ಈ ಕೆಳಗಿನ ನೈಜ ಸಂಗತಿಗಳು ಕಂಡು ಬಂದಿವೆ.

### ಚುನಾವಣೆಯ ವೇಳೆ ಮತಗಟ್ಟೆಗಳ ವಶ:

ತ್ರಿಪುರಾ ಸ್ವಾಯತ್ತ ಜಿಲ್ಲಾ ಮಂಡಳಿ ಒಟ್ಟು 664 ಮತಗಟ್ಟೆಗಳಿರುವ 28 ಚುನಾವಣಾ ಕ್ಷೇತ್ರಗಳನ್ನು ಒಳಗೊಂಡಿದೆ. ಒಟ್ಟು ಮತದಾರರ ಸಂಖ್ಯೆ 4,70,000 ಕ್ಕೆ ಮೀರಿ ಇರಲಿಕ್ಕಿಲ್ಲ. ರಾಜ್ಯ ಚುನಾವಣಾ ಅಧಿಕಾರಿಯನ್ನು ಸಂಪರ್ಕಿಸಿ ವಿಚಾರಿಸಿದ ಚೀಫ್ ಸೆಕ್ರೆಟರಿಯವರು 180 ಚುನಾವಣಾ ಮತಗಟ್ಟೆಗಳನ್ನು 'ಪ್ರಕ್ಷುಬ್ಧ' ಮತ್ತು 'ಅತಿ ಪಕ್ಷುಬ್ಧ' ಎಂದು ಗುರುತಿಸಿದ್ದಾರೆ. ಇಷ್ಟು ಸಣ್ಣ ಪರಿಮಿತಿಯ ಚುನಾವಣಾ ಕ್ಷೇತ್ರಗಳು ಮತ್ತು ಮತದಾರರನ್ನು ಗಣನೆಗೆ ತೆಗೆದುಕೊಂಡರೆ ಕಾಂಗ್ರೆ-ಟಿಯುಜೆಎಸ್ ಮೈತ್ರಿಕೂಟ ಸರಕಾರಕ್ಕೆ ಚುನಾವಣೆಯನ್ನು ಶಾಂತಿಯುತವಾಗಿ ನಡೆಸಲು ಕಷ್ಟವೇನೂ ಆಗಲಿಲ್ಲ. ಮೇಲಾಗಿ ಕೇಂದ್ರ ಸರಕಾರವು ರಾಜ್ಯ ಸರಕಾರದ ಪೋಲೀಸರಿಗೆ ಸಹಕಾರಿಯಾಗಿ ಅರೆ ಮಿಲಿಟರಿ ಪಡೆಗಳನ್ನು ವ್ಯವಸ್ಥೆ ಮಾಡಿತ್ತು. ಆದರೂ ಮತಗಟ್ಟೆಗಳನ್ನು ವಶ ಮಾಡಿಕೊಳ್ಳುವುದನ್ನು ತಡೆಯಲು ಸಾಧ್ಯವಾಗಲಿಲ್ಲ ಎನ್ನುವುದಕ್ಕೆ ಬೇರೆ ಕಾರಣಗಳನ್ನು ಹುಡುಕಬೇಕಾಗಿಲ್ಲ.

> 'ಬಕುಲ್‌ದಾಸ್ ರಾಣಿ ಎನ್ನುವ ತಾಯಿ ತನ್ನ ಮಗ ಸಂಜೀವ್ ದಾಸ್‌ನನ್ನು ಮತಗಟ್ಟೆಯ ನೂರು ಮೀಟರ್ ದೂರದಲ್ಲಿಯೇ ಕೊಂದ ಕರುಣಾಜನಕ ಕಥೆಯನ್ನು ತಿಳಿಸಿದಳು.'

### ಹಿಂಸೆ ದಬ್ಬಾಳಿಕೆಗಳು ಪೂರ್ವಯೋಜಿತವಾಗಿತ್ತು.

ಸಶಸ್ತ್ರಧಾರಿ ಗೂಂಡಾಗಳು ಚುನಾವಣೆಯ ಮೊದಲ ದಿನವೇ ಮತಗಟ್ಟೆಗಳನ್ನು ವಶಪಡಿಕೊಂಡಿದ್ದರು. ರಾಜ್ಯದ ಮಂತ್ರಿಗಳು ಮತ್ತು ಶಾಸಕರು ಚುನಾವಣೆಯ ದಿನ ಬಹಿರಂಗವಾಗಿ ಯಾವ ಮುಲಾಜಿಲ್ಲದೆ ತಿರುಗುತ್ತ ಮತದಾರರನ್ನು ಬೆದರಿಸಿದರು. ವಿರೋಧ ಪಕ್ಷಗಳ ಚುನಾವಣಾ ಅಭ್ಯರ್ಥಿ ಮತ್ತು ಚುನಾವಣಾ ಏಜೆಂಟರು ಮತಗಟ್ಟೆಗಳಿಗೆ ಬಾರದಂತೆ ತಡೆದರು. ಮತ ಹಾಕಲು ಬಂದ ಜನರನ್ನು ರಸ್ತೆಗೆ ತಡೆಹಾಕುವುದರ ಮೂಲಕ ಓಡಿಸಿದರು.

### ಚುನಾವಣೆಯ ದಿನ ಹಿಂಸಾ ಪ್ರಕರಣಗಳು:

ಚುನಾವಣೆಯ ದಿನ ಹಲವಾರು ಹಿಂಸಾ ಪ್ರಕರಣಗಳು ನಡೆದಿವೆ. ಪ್ರತಿನಿಧಿಗಳು ಭೇಟಿ ಮಾಡಿದ ಟೆಲ್ಲಿಮುರದಲ್ಲಿ ಸಿ.ಪಿ.ಐ.(ಎಂ) ಕಾರ್ಯಕರ್ತ ದಿಲೀಪ್‌ಘೋಶ್ ಅವರನ್ನು ಬೆನ್ನಟ್ಟಿಹೋಗಿ ಸಿವಿಲ್ ಆಸ್ಪತ್ರೆಯ ಎದುರುಗಡೆ, ಮೆಡಿಕಲ್ ಆಫೀಸರ್ ಮತ್ತು ಸಿಬ್ಬಂದಿಗಳು ನೋಡುತ್ತಿದ್ದ ಹಾಗೆ ಕೊಂದು ಹಾಕಿದರು. ಬಕುಲ್ ರಾಣಿ ದಾಸ್ ಎನ್ನುವ ತಾಯಿ ತನ್ನ ಮಗ ಸಂಜೀಬ್ ದಾಸ್‌ನನ್ನು ಮತಗಟ್ಟೆಯ 100 ಯಾರ್ಡ್ ದೂರದಲ್ಲಿಯೇ ಕೊಂದ ಕರುಣಾಜನಕ ಕಥೆಯನ್ನು ತಿಳಿಸಿದಳು. ಅವನನ್ನು ಪಕ್ಷದ ಶಾಸಕ ದಿಲೀಪ್ ಸರ್ಕಾರನ ಶಸ್ತ್ರಧಾರಿ ಗೂಂಡಾಪಡೆಯು ಕೊಂದಿತು. ಅರುಣ್‌ದೇಬ್ ಎಂಬ ಪತ್ರಕರ್ತನನ್ನು ಚುನಾವಣಾ ಆಫೀಸರರ ಎದುರೇ ಕೊಂದು ಹಾಕಿದರು.

> 'ಪೋಲೀಸರು ಮತಗಟ್ಟೆಗಳನ್ನು ವಶಪಡಿಸಿಕೊಳ್ಳಲು ಆಡಳಿತ ಪಕ್ಷದ ನಾಯಕರ ಆದೇಶವನ್ನು ಹುದಿಗಾಲಲ್ಲಿ ನಿಂತು ಕಾಯುತ್ತಿದ್ದರು.'

ರಾಜ್ಯ ಸರಕಾರದ ಮಂತ್ರಿ ಮೋತಿಲಾಲ್ ಶಾ ತನ್ನ ಶಸ್ತ್ರಧಾರಿ ಗೂಂಡಾಗಲ ಸಹಾಯದಿಂದ ಜನತಾದಳದ ಅಭ್ಯರ್ಥಿ ಶ್ರೀ ಸೋಜಿತ್ ದೇಬ್ ಬರ್ಮನ್ ಕಣಕ್ಕಿಳಿದ ಕೊಮ್ರಾಂಗಾ ಹೋಳಿಯ ಇದೇ ಕ್ಷೇತ್ರದ(ಚುನಾವಣಾ ಕ್ಷೇತ್ರ ನಂ. 19) ಮತಗಟ್ಟೆಗಳನ್ನು ಮೊದಲ ದಿನ ರಾತ್ರಿಯೇ ವಶಪಡಿಸಿಕೊಂಡನು. ಸ್ವತ: ಅಭ್ಯರ್ಥಿ ಮತ್ತು ಆತನ ಚುನಾವಣಾ ಏಜೆಂಟರನ್ನು ಹಾಕಲು ಬಿಡಲಿಲ್ಲ. ಮಹಿಳಾ ಸಂಘಟನೆಯ ನಾಯಕಿ ಶ್ರೀಮತಿ ಗೀತಾ ದೇಬನಾಥ್ ಮತ್ತು 50 ಮಂದಿ ಮಹಿಳೆಯರನ್ನು ಮತ ಹಾಕಲು ಬಿಡದೆ ಅಟ್ಟಿಸಿಕೊಂಡು ಹೋದರು. ಪ್ರತಿನಿಧಿಗಳು ಭೇಟಿ ನೀಡಿದ ಎಲ್ಲ ಪ್ರದೇಶಗಳಲ್ಲೂ ಆದಿವಾಸಿ ಪ್ರದೇಶಗಳಿಂದ ಹೊರಗಿನ ಶಸ್ತ್ರಧಾರಿ ಗೂಂಡಾಗಳ ಸಹಾಯದಿಂದ ಮಂತ್ರಿಗಳು ಮತ್ತು ಶಾಸಕರೇ ನೇತೃತ್ವ ಕೊಟ್ಟು ಮತಗಟ್ಟೆಗಳನ್ನು ವಶಪಡಿಸಿಕೊಂಡಿರುವುದು ಕಂಡುಬಂದಿದೆ. ಮೇಲಾಗಿ ಪೋಲೀಸರು ಮತಗಟ್ಟೆಗಳನ್ನು ವಶಪಡಿಸಿಕೊಳ್ಳಲು ಆಡಳಿತ ಪಕ್ಷದ ನಾಯಕರ ಆದೇಶವನ್ನು ತುದಿಗಾಲಲ್ಲಿ ನಿಂತು ಕಾಯುತ್ತಿದ್ದರು. ಈ ಸಂದರ್ಭದಲ್ಲಿ ಜನತಾದಳದ ರಾಜ್ಯ ಅಧ್ಯಕ್ಷ ಶ್ರೀ ಅರುಣ್ ಕಾಂತಿ ಭೌಮಿಕ್ ಅವರ ಮಾತು ಬಹಳ ಮುಖ್ಯವಾದದ್ದು. ಅವರ ಅಭಿಪ್ರಾಯದಂತೆ, 'ಕಾಂಗ್ರೆಸ್(ಐ) ಪಕ್ಷದ ಮತಗಟ್ಟೆಗಳನ್ನು ವಶಪಡಿಸಿಕೊಂಡ ಶಸ್ತ್ರಧಾರಿ ತಂಡಕ್ಕೆ ನೇತೃತ್ವವನ್ನು ಮಂತ್ರಿಗಳು ಮತ್ತು ಶಾಸಕರು ಕೊಟ್ಟಿರುವಂತಹದು ಚುನಾವಣಾ ವ್ಯವಸ್ಥೆಯು ಬರಿ ಸೋಗಿನದು ಮತ್ತು ಕೀಳು ಮಟ್ಟಕ್ಕಿಳಿದಿರುವುದನ್ನು ಧೃಡಪಡಿಸುತ್ತದೆ'.

> 'ಮತಗಟ್ಟೆಗಳನ್ನು ವಶಮಾಡಿಕೊಳ್ಳುವುದನ್ನು ತಡೆಯಲು ಸಾಧ್ಯವಾಗಲಿಲ್ಲ ಎನ್ನುವುದಕ್ಕೆ ಬೇರೆ ಕಾರಣವನ್ನು ಹುಡುಕಬೇಕಾಗಿಲ್ಲ. ಹಿಂಸೆ, ದಬ್ಬಾಳಿಕೆಗಳು ಪೂರ್ವಯೋಜಿತವಾಗಿದ್ದವು.'

### ಮಹಿಳೆಯರ ಮಾನಭಂಗ:

ಪ್ರತಿನಿಧಿಗಳ ತಂಡವನ್ನು ಬೆರಗುಗೊಳಿಸುವಂತೆ ಮಾಡಿದ್ದು ಹಲವಾರು ಮಹಿಳೆಯರ ಮಾನಭಂಗ ಮತ್ತು ಅವರ ಮೇಲಿನ ಬಲಾತ್ಕಾರದ ಪ್ರಕರಣಗಳು. ಸಂಗ್ರಹಿಸಿದ ಎಲ್ಲಾ ಅರ್ಜಿಗಳಲ್ಲೂ ಒಂದೊಂದೂ ತನ್ನದೇ ಕತೆಗಳನ್ನು ಹೇಳುತ್ತವೆ. ಪ್ರತಿನಿಧಿ ತಂಡವನ್ನು ಭೇಟಿ ಮಾಡಿದ ಎಲ್ಲ ಮಹಿಳೆಯರು ತಮ್ಮ ಮೇಲೆ ನಡೆದ ಅತ್ಯಾಚಾರ ಪ್ರಕರಣಗಳ ಬಗ್ಗೆ ತಾವೇ ಸಾಕ್ಷ್ಯ ನುಡಿದರು. ಪ್ರಥಮ ವರದಿಯ ಆಧಾರದ ಮೇಲೆ ಅನೇಕ ದೂರುಗಳನ್ನು ನೀಡಿದರೂ ನ್ಯಾಯವಂತೂ ದೊರೆಯಲಿಲ್ಲ; ಅಪರಾಧಿಗಳ ಹೆಸರನ್ನು ನೀಡಿದರೂ ಯಾರೊಬ್ಬನನ್ನು ನಿರ್ಬಂಧಿಸಲಿಲ್ಲ; ಒಂದೇ ಒಂದು ಪ್ರಕರಣವೂ ಕೋರ್ಟು ಕಟ್ಟೆ ಏರಲಿಲ್ಲ. ಗೂಂಡಾಗಳು ರಾಜಾರೋಷಿಯಾಗಿದ್ದರೆ ಅತ್ಯಾಚಾರಕ್ಕೊಳಗಾದವರಿಗೆ ರಕ್ಷಣೆ ದೊರೆಯಲಿಲ್ಲ ಎನ್ನುವಂತಹದ್ದು ನಾಚಿಕೆಗೇಡಿನ ಸಂಗತಿಯಾಗಿದೆ

### ಲೂಟಿ, ದೊಂಬಿ, ಕೊಳ್ಳೆ:

ನೂರಾರು ಸಾವಿರಾರು ಜನರ ಮೇಲೆ ದೊಂಬಿ ನಡೆಯಿತು. ಹಲವಾರು ಮನೆಗಳನ್ನು ಸುಟ್ಟು ಹಾಕಲಾಯಿತು; ಬಹ... 'ರಕ್ಷಣೆಗಾಗಿ ಅರ್ಪಣೆ ಪತ್ರ' ತರುವಂತೆ ಬಲಾತ್ಕರಿಸಿದರು. ಸರಕಾರಿ ನೌಕರರು ಕೂಡ ಹಣಕೊಡದೆ ಕಛೇರಿಗೆ ತೆರಳುವ ಹಾಗಿರಲಿಲ್ಲ. ಅದೂ ಹೊರತೆ ಬೆಳೆಯುವುದರೊಂದಿಗೆ ಅವರ ಮನೆಗಳೂ ಗೂಂಡಾಗಳ ಕೈವಶ್ಯ ಗಾಬರಿಯಾಗುತ್ತಿದ್ದವು. ನೌಕರರ ಸಂಘಟನಾ ಸಮಿತಿ ಕಛೇರಿಯನ್ನು ವಶಪಡಿಸಿಕೊಂಡು ಬದಲಿಯಾಗಿ ಗಾಂಧಿ ಕ್ಲಬ್ ಆಗಿ ಪರಿವರ್ತಿಸಿರುವುದು ಕೂಡಾ ಗಮನಕ್ಕೆ ಬಂತು.

### ಆದಿವಾಸಿಗಳ ಆರ್ಥಿಕ ಜೀವನದ ಮೇಲೆ ಹೊಡೆತ:

ಹಲವಾರು ಆದಿವಾಸಿ ಗಂಡಸರು ಮತ್ತು ಹೆಂಗಸರು ಪಡಿತರ ಆಹಾರ ವಸ್ತುಗಳನ್ನು ಪಡಿತರ ಅಂಗಡಿಗಳಿಂದ ಪಡೆದುಕೊಳ್ಳಲು ತೊಂದರೆ ಪಡುವಂತಾಯಿತು. ಪಡಿತರ ಅಂಗಡಿಗಳನ್ನು ಆದಿವಾಸಿ ಪ್ರದೇಶಗಳಿಂದ ಆದಿವಾಸಿಗಳಲ್ಲದವರ ಪ್ರದೇಶಗಳಿಗೆ ಸ್ಥಳಾಂತರಿಸಲಾಯಿತು. ಆದಿವಾಸಿಗಳು ಅಲ್ಲಿಗೆ ಹೋದರೆ ಅವರನ್ನು ಹೊಡೆದೋಡಿಸುತ್ತಿದ್ದರು. ಅನರು ತಮ್ಮ ವಸ್ತುಗಳನ್ನು ಮಾರಾಟ ಮಾಡಲು ಮಾರುಕಟ್ಟೆಗೆ ಹೋಗಲು ಕೂಡಾ ತಡೆ ಹಾಕಿದ್ದರು.

### ರಾಜಕೀಯ ಪಕ್ಷಗಳ ಮತ್ತು ಸಾಮೂಹಿಕ ಸಂಘಟನೆಗಳ ಮೇಲೆ ಬಲ ಪ್ರಯೋಗ

ಪ್ರತಿನಿಧಿಗಳ ತಂಡವು ಬೇಟಿ ನೀಡಿದ ಹಲವಾರು ಪ್ರದೇಶಗಳಲ್ಲಿ ಹಲವಾರು ಸಿ.ಪಿ.ಐ.(ಎಂ) ಕಛೇರಿಗಳನ್ನು ಸುಟ್ಟು ಧ್ವಂಸಗೊಳಿಸಿದ್ದು ಕಂಡು ಬಂತು. ಅವುಗಳೆಲ್ಲವೂ ಜನನಿಬಿಡ ಮಾರುಕಟ್ಟೆಗಳಲ್ಲಿ ಇಲ್ಲದಿದ್ದರೆ ಪೋಲೀಸ್ ಠಾಣೆಗಳ ಸಮೀಪದಲ್ಲಿಯೇ ಇದ್ದವು. ಧ್ವಂಸಗೊಳಿಸಿದ ಜಾಗದಲ್ಲಿ ಅಧಿಕೃತವಾಗಿ ಕಾಂಗ್ರೆ ಬಾವುಟಗಳನ್ನು ಹಾಕಲಾಗಿತ್ತು.

> 'ಪಡಿತರ ಅಂಗಡಿಗಳನ್ನು ಆದಿವಾಸಿ ಪ್ರದೇಶಗಳಿಂದ ಬೇರೆಡೆಗೆ ಸ್ಥಳಾಂತರಿಸಲಾಯಿತು.'

ನೌಕರರ, ಅಧ್ಯಾಪಕರ, ವಿದ್ಯಾರ್ಥಿ-ಯುವಜನರ ಸಾಮೂಹಿಕ ಸಂಘಟನೆಗಳ ಮೇಲೂ ಬಲಪ್ರಯೋಗ ನಡೆಯಿತು. ಅವರ ಕಛೇರಿಗಳನ್ನು ಸುಟ್ಟು ಹಾಕಿ, ಕಛೇರಿಗಳ ನಾಮಫಲಕವನ್ನು ಕಿತ್ತು ಬಿಸುಟು ಗೂಂಡಾಗಳ ಕ್ಲಬ್‌ಗಳನ್ನಾಗಿ ಪರಿವರ್ತಿಸಲ್ಪಾಯಿತು.

### ನೊಂದ ಮತ್ತು ಪೀಡಿತ ಜನರಿಗೆ ಪರಿಹಾರ ದೊರೆಯಲಿಲ್ಲ:

ಅನ್ಯಾಯಕ್ಕೊಳಗಾದವರು ಯಾರೊಬ್ಬರೂ ಪೋಲೀಸ್ ಠಾಣೆಗೆ ಹೋಗುವ ಹಾಗಿರಲಿಲ್ಲ. ದೂರು ಕೊಡಲು ಹೋದವರನ್ನೆ ಬಂಧಿಸಿ ಹೊಡೆಯಲಾಗುತ್ತಿತ್ತು.

ತಮ್ಮ ಕಕ್ಷಿದಾರರ ಪರವಾಗಿ ಪೋಲೀಸ್‌ಠಾಣೆಗೆ ಹೋದ ಇಬ್ಬರು ವಕೀಲರುಗಳನ್ನೇ ಬಂಧಿಸಿ ಅವರ ಮೇಲೆ ಕಳವಿನ ಆಪಾದನೆಯನ್ನು ಹೊರಿಸಲಾಯಿತು.

ಇನ್ನೊಂದು ಪ್ರಕರಣದಲ್ಲಿ ಒಬ್ಬ ತಹಶೀಲ್ದಾರರು ಈ ಗೂಂಡಾಗಳ ಬೇಡಿಕೆಗಳಿಗೆ ಇಂಬು ಕೊಡದೆ ಇದ್ದ ಕಾರಣ, ಸರಕಾರಿ ಜೀಪಿನಲ್ಲಿ ಹೋಗುತ್ತಿದ್ದ ಅವರನ್ನು ನಿಲ್ಲಿಸಿ ಅವರ ಮೇಲೆ ಹಲ್ಲೆ ನಡೆಸಲಾಯಿತು.

ಕೋರ್ಟಿನ ಕೊಠಡಿಯಲ್ಲೆ ಒಬ್ಬ ಜುಡಿಷಿಯಲ್ ಮ್ಯಾಜಿಸ್ಟ್ರೇಟರನ್ನು, ಆತ ಒಬ್ಬ ಗೂಂಡಾ ಅಪಾರಿತನಿಗೆ ಜಾಮೀನು ಕೊಡಲು ನಿರಾಕರಣೆ ಮಾಡಿದರೆ, ಗಂಭೀರವಾದ ಪರಿಣಾಮವನ್ನು ಎದುರಿಸಬೇಕಾಗುತ್ತದೆ ಎಂದು ಬೆದರಿಕೆ ಹಾಕಿದರು. ಈ ಅಪರಾಧಿಗಳನ್ನು ಬಂಧಿಸಲು ಪೋಲೀಸರು ನಿರಾಕರಿಸುದರಿಂದ ಅಸಹಾಯಕರಾದ ಮ್ಯಾಜಿಸ್ಟ್ರೇಟರು ತಾನು ಇಂತಹ ಬಲಾತ್ಕಾರಕ್ಕೊಳಪಟ್ಟು ತೀರ್ಪನ್ನು ಕೊಟ್ಟಿರುವುದಾಗಿ ತನ್ನ ಬರವಣಿಗೆಯಲ್ಲಿ ತಿಳಿಸಿದ್ದಾರೆ. ರಾಜ್ಯ ಸರಕಾರವು ಈ ಪ್ರಕರಣದ ಬಗ್ಗೆ ಯಾವ ಗಮನವನ್ನು ತೆಗೆದುಕೊಳ್ಳಲಿಲ್ಲ.

ಪೋಲೀಸ್ ಠಾಣೆಯಲ್ಲಿ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್, ತಹಶೀಲ್ದಾರರಂತಹ ಉನ್ನತ ಅಧಿಕಾರಿಗಳಿಗೆ ಪೋಲೀಸರ ರಕ್ಷಣೆ ಸಿಗಲಿಲ್ಲವೆಂದ ಮೇಲೆ ಬಡ ಆದಿವಾಸಿಗಳು ಪೋಲೀಸರಿಂದ ರಕ್ಷಣೆ ಪಡೆಯುವ ಕರ್ತವ್ಯವನ್ನು ಹೇಗೆ ನಿರೀಕ್ಷಿಸಲು ಸಾಧ್ಯ?

ಕೊಲೆ, ಬಲಾತ್ಕಾರ, ಮಾನಭಂಗ, ದೈಹಿಕ ಹಲ್ಲೆ, ಲೂಟಿ ಮೊದಲಾದುವುಗಳಿಗೆ ತುತ್ತಾದ ಒಬ್ಬನಾದರೂ ಸರಕಾರದಿಂದ ಆರ್ಥಿಕ ಪರಿಹಾರ ಪಡೆಯಲು ಸಾಧ್ಯವಾಗಲಿಲ್ಲ. ಸರಕಾರವು ಅವರಿಗೆ ಪರಿಹಾರ ನೀಡಲು ಮುಂದೆ ಬಾರದೆ ಇರುವುದು ಅದರ ನೀಚತನವನ್ನು ತೋರಿಸುತ್ತಿದೆ. ಬದಲಾಗಿ ಕಾಂಗ್ರೆ-ಟಿ.ಯು. ಜೆ.ಎಸ್.ನ ಈ ಕಟುಕ ಸರಕಾರವು ತನ್ನ ಗೂಂಡಾಗಳಿಗೆ ಸರಕಾರಿ ಯಂತ್ರವನ್ನು ಲಂಗು ಲಗಾಮಿಲ್ಲದೆ ಉಪಯೋಗಿಸಲು ಬಿಟ್ಟಿರುವುದು ತನಿಖೆಯಿಂದ ತಿಳಿದು ಬಂದಿರುವ ಪ್ರಮುಖ ಸಂಗತಿ.

ಈ ಎಲ್ಲವನ್ನೂ ಸವಿಸ್ತಾರವಾಗಿ, ಕೂಲಂಕಷವಾಗಿ ಅಧ್ಯಯನ ಮಾಡಿದ ರಾಷ್ಟ್ರೀಯ ರಂಗ ಸಂಸತ್ ಸದಸ್ಯರ ಪ್ರತಿನಿಧಿ ತಂಡವು ಕೊನೆಯ ನಿರ್ಧಾರವನ್ನು ತೆಗೆದುಕೊಂಡಿದೆ. ಅವರೆಲ್ಲರ ಸರ್ವಾನುಮತದ ಅಭಿಪ್ರಾಯದಂತೆ ತ್ರಿಪುರಾದಲ್ಲಿ ಕಾನೂನು ವ್ಯವಸ್ಥೆಯೂ ಮುರಿದಿದೆ. ಆ ರಾಜ್ಯದಲ್ಲಿ ಜೀವ ಮತ್ತು ಸೊತ್ತುಗಳಿಗೆ, ಪ್ರಾಮುಖ್ಯವಾಗಿ ಆದಿವಾಸಿ ಜನರಿಗೆ, ರಕ್ಷಣೆ ಇಲ್ಲವಾಗಿದೆ. ಎಲ್ಲ ಪ್ರಜಾತಾಂತ್ರಿಕ ತತ್ವಗಳನ್ನು ಗಾಳಿಗೆ ತೂರಲಾಗಿದೆ. ಉದ್ವಿಗ್ನಗೊಂಡ ಈ ಪರಿಸ್ಥಿತಿಯಲ್ಲಿ ತ್ರಿಪುರಾ ಸರಕಾರವು ಸಾಂವಿಧಾನಿಕ ರೀತಿಯಲ್ಲಿ ಇನ್ನು ಮುಂದುವರಿಯಲು ಸಾಧ್ಯವಾಗದ ಮತ್ತು ಮುಂದುವರಿಯಲೂ ಬಾರದ ಘಟ್ಟವನ್ನು ತಲುಪಿದೆ ಎಂದು ರಾಷ್ಟ್ರೀಯ ರಂಗ ಸಂಸತ್ ಪ್ರತಿನಿಧಿಗಳ ತಂಡ ಅಭಿಪ್ರಾಯ ಪಟ್ಟಿದೆ.

> 'ಪ್ರತಿನಿಧಿಗಳ ತಂಡವನ್ನು ಬೆರಗುಗೊಳಿಸುವಂತೆ ಮಾಡಿದ್ದು ಹಲವಾರು ಮಹಿಳೆಯರ ಮಾನಭಂಗ, ಬಲಾತ್ಕಾರದ ಪ್ರಕರಣಗಳು, ಸಂಗ್ರಹಿಸಿದ ಎಲ್ಲಾ ಅರ್ಜಿಗಳಲ್ಲೂ ಒಂದೊಂದು ತನ್ನದೇ ಕಥೆಗಳನ್ನು ಹೇಳುತ್ತವೆ.'



# ಶ್ರಮ ಜೀವಿ ವರ್ಗದಿಂದ....
# ಶ್ರಮ ಜೀವಿ ವರ್ಗಕ್ಕಾಗಿ.....

-ವಿ.ಜಿ.ಕೆ.ನಾಯರ್

ನಾನು ಕಮ್ಯುನಿಸ್ಟನಾದದ್ದು ಹೇಗೆ? - ನನ್ನನ್ನು ಕೇಳಿರುವ ಈ ಪ್ರಶ್ನೆಗೆ "ಮಾರ್ಕ್ಸ್‌ವಾದ ಹೇಳಿರುವ ರೀತಿಯಲ್ಲೇ" ಎಂದು ಉತ್ತರಿಸಬೇಕಾಗುತ್ತದೆ. ಅಂದರೆ, ಒಬ್ಬ ಶ್ರಮಜೀವಿ ತನ್ನ ಮತ್ತು ತನ್ನ ವರ್ಗದ ಶೋಷಣೆಯ ಅರಿವು ಪಡೆಯುತ್ತಾ ತನ್ನ ವರ್ಗದ ಇತರರಂತೆ ಬೆಳೆದು ಶೋಷಣಾ ವ್ಯವಸ್ಥೆಯನ್ನು ಕಿತ್ತೊಗೆಯುವ ಮತ್ತು ಹೊಸ ಸಮಾಜವೊಂದನ್ನು ಕಟ್ಟುವ ಪ್ರಯತ್ನದಲ್ಲಿ..... ಸೇರಿಕೊಳ್ಳುವುದು. ನಾನು ಕಮ್ಯುನಿಸ್ಟನಾದದ್ದು ಹೀಗೆಯೇ.

"ಅಸ್ತಿತ್ವವೇ ಪ್ರಜ್ಞೆ" ಎಂದಿದ್ದರು ಮಾರ್ಕ್ಸ್ ಸುಮಾರು ಒಂದೂವರೆ ಶತಮಾನದ ಹಿಂದೆ. ನನ್ನ ವಿಷಯದಲ್ಲೂ ಅದು ಸಾಬೀತಾಗಿದೆ. 1958 ರಿಂದ 1964 ವರೆಗೆ ಫ್ಯಾಕ್ಟರಿಯಲ್ಲಿ ಆಫೀಸು ಕೆಲಸಗಾರನಾಗಿದ್ದರೂ ಅದೇ ಫ್ಯಾಕ್ಟರಿಯಲ್ಲಿ 1964 ರಲ್ಲಿ ವರ್ಕ್‌ಶಾಪ್‌ನಲ್ಲಿ ಒಬ್ಬ ಕಾರ್ಮಿಕನಾದಾಗಲೇ ನನಗೆ ಶೋಷಣಾಪೂರ್ಣ ವ್ಯವಸ್ಥೆಯ ಅರಿವಾದದ್ದು. 1964 ರಲ್ಲಿ ಭಾರತ ಇಲೆಕ್ಟ್ರಾನಿಕ್ಸ್‌ನ ಪವರ್ ಇಕ್ವಿಪ್‌ಮೆಂಟ್ ಸರ್ವಿಸ್ ವಿಭಾಗದ ಇತರ ಕಾರ್ಮಿಕರೊಡನೆ ನೀಲಿ ಸಮವಸ್ತ್ರ ಧರಿಸಿ ಕೆಲಸ ಮಾಡತೊಡಗಿದಾಗಲೇ ಕಾರ್ಮಿಕ ವರ್ಗದೊಡನೆ ಮತ್ತೆಂದೂ ಬದಲಾಗದ ಸಂಬಂಧ ಸ್ಥಾಪನೆಯಾದದ್ದು. ಆಧುನಿಕ ಶ್ರಮಜೀವಿ ವರ್ಗದ, ಸಮಾಜದ ಅತ್ಯಂತ ಮುಂದುವರಿದ ವಿಭಾಗದ ಭಾಗವಾಗಿದ್ದ ನನಗೆ ಆಗ ಯೂನಿಯನ್ ಮುಖಂಡರು ನಮ್ಮನ್ನೊಯುತ್ತಿದ್ದ ದಾರಿ, ಕಮ್ಯುನಿಸ್ಟ್ ಪಕ್ಷದಲ್ಲಿ ಆಗ ನಡೆಯುತ್ತಿದ್ದ ಒಡಕು ಇತ್ಯಾದಿಗಳ ಬಗ್ಗೆ ಕಾರ್ಖಾನೆಯ ವರ್ಕ್‌ಶಾಪ್‌ಗಳಲ್ಲಿ ನಡೆಯುತ್ತಿದ್ದ ಚರ್ಚೆಗಳಲ್ಲಿ ಭಾಗವಹಿಸುವ ಅವಕಾಶ ನನಗೆ ದೊರೆಯಿತು. ಬಿ.ಇ.ಎಲ್. ಕಾರ್ಮಿಕರು ಆಗ ಅತ್ಯಂತ ಸಮರಧೀರರಾಗಿದ್ದರು. ತಮ್ಮ ಶೋಚನೀಯ ಕೆಲಸದ ಪರಿಸ್ಥಿತಿಗಳ ವಿರುದ್ಧ ಹೋರಾಡುತ್ತಿದ್ದರು.

## ತೀವ್ರ ರಾಷ್ಟ್ರವಾದಿ ಘಟ್ಟ

ಆಗ ನಾನು ಇಲೆಕ್ಟ್ರಾನಿಕ್ ಮತ್ತು ಟೆಲಿಕಮ್ಯುನಿಕೇಶನ್ (ದೂರಸಂಪರ್ಕ) ಇಂಜಿನೀಯರುಗಳ ಸಂಸ್ಥೆಯ ಗ್ರಾಜುಯೇಟ್‌ಶಿಪ್ ಪರೀಕ್ಷೆಗೆ ತಯಾರಿ ನಡೆಸಿದ್ದೆ. ನಾನು ಕೆಲಸಕ್ಕೆ ಅತ್ಯಂತ ನಿಯಮಿತನಾಗಿ ಹಾಜರಾಗುತ್ತಿದ್ದೆ. ಹೆಚ್ಚೇ ಎನ್ನಬಹುದಾದ ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಿದ್ದೆ. ಬಹಳ ಚಿಕ್ಕ ವಯಸ್ಸಿನಲ್ಲಿ ತಂದೆ ತಾಯಿಯರನ್ನು ಕಳಕೊಂಡು (ಸೈನಿಕರಾಗಿದ್ದ ತಂದೆ ಎರಡನೇ ಮಹಾಯುದ್ಧದಲ್ಲಿ ಯುದ್ಧ ರಂಗದಲ್ಲಿ ಮಡಿದರು; ಆ ಸುದ್ದಿ ಕೇಳಿದ ತಾಯಿಯೂ ಅವರ ದಾರಿಯನ್ನೇ ಅನುಸರಿಸಿ ಹೋದರು) ಅತ್ಯಂತ ಬಡತನದ ಪರಿಸ್ಥಿತಿ ಕಂಡು ನಾನು ಬೆಳೆದ ಕುಟುಂಬದಲ್ಲಿ ಶೋಷಣೆ ಉಂಡು ಎಸ್.ಎಸ್.ಎಲ್.ಸಿ. ಮೊದಲ ತರಗತಿಯಲ್ಲಿ ಪಾಸಾದರೂ (ಗಣಿತದಲ್ಲಿ 96% ರಷ್ಟು ಅಂಕ ಪಡೆದರೂ) ಪದವಿ ಶಿಕ್ಷಣ ಪಡೆಯಲು ನನಗೆ ಸಾಧ್ಯವಾಗಲಿಲ್ಲ. ಟೈಪಿಂಗ್ ಕಲಿತು ಟೈಪಿಸ್ಟ್ ಕೆಲಸಕ್ಕೆ ಸೇರಿ, ಕ್ರಮೇಣ ಅಂಚೆ ಶಿಕ್ಷಣದ ಮೂಲಕ ಇಲೆಕ್ಟ್ರಾನಿಕ್ ಕಲಿತು, ಕೆಲಸ ಮುಗಿದ ಮೇಲೆ ಪ್ರಾಕ್ಟಿಕಲ್‌ಗಳನ್ನು ನಡೆಸಿಕೊಂಡು, ಫ್ಯಾಕ್ಟರಿ ವರ್ಕ್‌ಶಾಪ್‌ಗಿಳಿದು ನೀಲಿ ಸಮವಸ್ತ್ರ ಧರಿಸಲು ನಡೆಸಿದ ಹೋರಾಟಗಳಿಂದಾಗಿ ನಾನು ಕಠಿಣ ಅಧ್ಯಯನ ಹಾಗೂ ಶ್ರಮಕ್ಕೆ ಎಷ್ಟೊಂದು ಬದ್ಧನಾಗಿದ್ದೆನೆಂದರೆ ಸೋಮಾರಿಯಾಗಿ ಕಾಲಕಳೆಯುವವರನ್ನು, ಜವಾಬ್ದಾರಿ ತಪ್ಪಿಸಿಕೊಳ್ಳುವವರನ್ನು, ದ್ವೇಷಿಸುತ್ತಿದ್ದೆ. ಸಾರ್ವಜನಿಕ ವಲಯದ ಕಾರ್ಮಿಕನಾದ್ದರಿಂದ ಕೆಲಸಕ್ಕೆ ಅತ್ಯಂತ ವಿಧೇಯನಾಗಿದ್ದ, ಜವಾಬ್ದಾರಿ ತಪ್ಪಿಸಿಕೊಳ್ಳಲು ಪ್ರಯತ್ನಿಸುವವರ ಜೊತೆ ಜಗಳವಾಡುತ್ತಿದ್ದೆ. ನನಗೆ ಕೊಟ್ಟ ಕೆಲಸ ಮುಗಿಸಿದ ಮೇಲೆ ಉತ್ಪಾದನಾ ಕಾರ್ಯಕ್ರಮ ಮುಂದುವರಿಯುವಂತೆ ನೋಡಿಕೊಳ್ಳಲು ಬೇರೆ ಕೆಲಸ ಕೈಗೊಳ್ಳುತ್ತಿದ್ದೆ. ಈ ಘಟ್ಟದಲ್ಲಿ ನಾನು ತೀವ್ರ ರಾಷ್ಟ್ರವಾದಿಯಾಗಿದ್ದೆ. 1962 ರಲ್ಲಿ ನನ್ನ ಹೆಂಡತಿ ಯಾವ ಆಭರಣವನ್ನೂ, ಮಂಗಳಸೂತ್ರವನ್ನು ಕೂಡಾ ಧರಿಸದಂತೆ ಮಾಡಿದ್ದೆ. ಏಕೆಂದರೆ ಆಗಿದ್ದ ಬಂಗಾರ ನಿಯಂತ್ರಣ ಆಜ್ಞೆ ದೇಶದ ಒಳಿತಿಗಾಗಿ ಎಂಬುದು ನನ್ನ ನಂಬಿಕೆಯಾಗಿತ್ತು.

ರಾಷ್ಟ್ರವಾದಿಯಾಗಿದ್ದಷ್ಟೆ ತೀವ್ರವಾಗಿ ನಾನು ಅಧಿಕಾರಿಗಳ ಮನಸ್ವೇಚ್ಛೆ ವರ್ತನೆಯನ್ನು, ಕಾರ್ಮಿಕರ ವಿರುದ್ಧ, ಕಾರ್ಮಿಕರ ಸಂಘಟನೆ ಬಿ.ಇ.ಇ.ಯು. (ಭಾರತ್ ಇಲೆಕ್ಟ್ರಾನಿಕ್ಸ್ ನೌಕರರ ಸಂಘ) ದ ವಿರುದ್ಧ ಯಾವುದೇ ಅನ್ಯಾಯವನ್ನು ವಿರೋಧಿಸುತ್ತಿದ್ದೆ. ಫ್ಯಾಕ್ಟರಿಯ ಹೊರಗಿದ್ದ ಸಮಯವನ್ನು ಸಾಮಾನ್ಯವಾಗಿ ನಾನು ಅಧ್ಯಯನದಲ್ಲಿ ಕಳೆಯುತ್ತಿದ್ದುದರಿಂದ ಯೂನಿಯನ್‌ನಲ್ಲಿ ವಿಶೇಷವಾಗಿ ಸಕ್ರಿಯವಾಗಿರಲಿಲ್ಲ. ಯೂನಿಯನ್‌ನ ಸರ್ವ ಸದಸ್ಯರ ಸಭೆಗಳಲ್ಲಷ್ಟೆ, ಸಾರ್ವಜನಿಕ ಸಭೆಗಳಲ್ಲಿ, ಪಕ್ಷದ ಸಾರ್ವಜನಿಕ ಸಭೆಗಳಲ್ಲೂ ಭಾಗವಹಿಸುತ್ತಿದ್ದೆ. ನಾನು ಭಾಗವಹಿಸಿದ ಮೊದಲ ಸಭೆಗಳಲ್ಲಿ ಇ.ಎಂ.ಎಸ್. ಮಂತ್ರಿಮಂಡಲ ವಜಾದ ವಿರುದ್ಧ ಪ್ರತಿಭಟನಾ ಸಭೆಯ ನೆನಪು (ಶಿವಾಜಿನಗರದಲ್ಲಿ 1960 ರಲ್ಲಿ ನಡೆದಿತ್ತು) ನನಗಿದೆ. 1964 ರಲ್ಲಿ ಎ.ಐ.ಟಿ.ಯು.ಸಿ. ಅಖಿಲ ಭಾರತ ಸಾರ್ವಜನಿಕ ವಲಯದ ಕಾರ್ಮಿಕರ ಸಮ್ಮೇಳನ ನಡೆಸಿದಾಗ ನಾನು ಸಮ್ಮೇಳನ ಕಚೇರಿಯಲ್ಲಿ ಸ್ವಯಂಸೇವಕನಾಗಿ ಕೆಲಸ ಮಾಡಿದ್ದೆ. 1966 ಜೂನ್ 11 ರಂದು ಆಗಿನ ರಕ್ಷಣಾ ಉತ್ಪಾದನಾ ಮಂತ್ರಿ ಎ.ಎಮ್.ಥಾಮಸ್ ಫ್ಯಾಕ್ಟರಿಯ ಆಸ್ಪತ್ರೆ ಉದ್ಘಾಟನೆಗೆ ಬಂದಿದ್ದಾಗ ನಡೆದ ಸಾರ್ವಜನಿಕ ಸಮಾರಂಭದಲ್ಲಿ ಸಭಾತ್ಯಾಗದಲ್ಲಿ ಭಾಗವಹಿಸಿದ್ದೆ.

ಇವೆಲ್ಲ ನಡೆಯುತ್ತಿದ್ದಾಗ ಕೆಲಸ ಮತ್ತು ಅಧ್ಯಯನವನ್ನು ಪ್ರಾಮಾಣಿಕವಾಗಿ ನಿರ್ವಹಿಸುತ್ತಿದ್ದಾಗ ವರ್ಕ್‌ಶಾಪ್‌ನ ಸಹ ಕಾರ್ಮಿಕರ ಮೂಲಕ ನನಗೆ ಕಮ್ಯುನಿಸಂನ ವಿಚಾರಗಳು ಒಂದೊಂದಾಗಿ ತಿಳಿದು ಬರಲಾರಂಭಿಸಿದವು. 1965 ರಲ್ಲಿ ನಾರಾಯಣನ್ ಎಂಬವರು ನನ್ನನ್ನು 'ನವಕರ್ನಾಟಕ' (ಪುಸ್ತಕಾಲಯ) ಕ್ಕೆ ಕರೆದೊಯ್ದು ಯಾಖೂಟ್ ಬರೆದ ದ್ವಂದ್ವಮಾನ ಭೌತವಾದದ ಮೇಲಿನ ಕಿರು ಪುಸ್ತಕ, ಸಮಾಜದ ಬೆಳವಣಿಗೆ, ರಾಜಕೀಯ ಅರ್ಥ ಶಾಸ್ತ್ರ ಮುಂತಾದ ಮೂಲಭೂತ ವಿಷಯಗಳ ಕುರಿತಾದ ಕೆಲವು ಪುಸ್ತಕಗಳನ್ನು ಖರೀದಿಸಿ ಕೊಟ್ಟದ್ದು ನನಗೆ ನೆನಪಿದೆ. ರೇಡಿಯೋ ತರಂಗ ಕಂಡು ಹಿಡಿದು ಈಗ ಬಳಕೆಗೆ ಬಂದಿರುವಷ್ಟೇ ವೈಜ್ಞಾನಿಕವಾಗಿ ಕಮ್ಯುನಿಸಂ ಕೂಡಾ ಬರುವುದು ಖಂಡಿತ ಎಂದು ಒಬ್ಬ ಆರ್.ವಿ.ರಾಮನ್ ಎಂಬ ಕಾರ್ಮಿಕ ಹೇಳಿದ್ದು ನೆನಪಿದೆ. ಆದಾಗಲೇ ದ್ವಂದ್ವ ಮಾನ ಭೌತವಾದದ ನಿಯಮಗಳನ್ನು ಅನ್ವಯಿಸಲು, ಇಲೆಕ್ಟ್ರಾನಿಕ್ಸ್‌ನ ಉದಾಹರಣೆಗಳನ್ನು ನೀಡಿ ಸಹ ಕಾರ್ಮಿಕರ ನಡುವೆ ಜ್ಞಾನ ವೃದ್ಧಿಸಲು ಆರಂಭಿಸಿದ್ದೆ. ನಮ್ಮ ವಿಭಾಗದ ರೇಡಿಯೋ ಮೆಕ್ಯಾನಿಕ್‌ಗಳ ಸಂಘದ ಅಧ್ಯಕ್ಷನೂ ಆಗಿದ್ದೆ. ಈ ಘಟ್ಟದಲ್ಲಿ ಎಂದೂ ನಾನು ನನ್ನ ರಾಷ್ಟ್ರವಾದಿ ತಿಳುವಳಿಕೆಯನ್ನು ಬಿಟ್ಟು ಕೊಟ್ಟಿರಲಿಲ್ಲ. ಅಥವಾ ಕಾರ್ಮಿಕರ ಹಿತಾಸಕ್ತಿಗಳನ್ನು ಬಿಟ್ಟುಕೊಡಲಿಲ್ಲ. ಕಾರ್ಮಿಕ ವರ್ಗದ ಆಂದೋಲನಕ್ಕಾಗಿ

> **ಸ್ವಾತಂತ್ರ್ಯದ ಮೊದಲು ಹಾಗೂ ಸ್ವಾತಂತ್ರ್ಯ ಬಂದ ಹೊಸದರಲ್ಲೇ ಕಮ್ಯುನಿಸ್ಟ್ ಆಂದೋಲನದತ್ತ ಸೆಳೆಯಲ್ಪಟ್ಟ ಪ್ರಮುಖ ಮುಂದಾಳುಗಳ ಕಥನ ಓದಿರುವಿರಿ. ಈ ಬಾರಿ ಅರುವತ್ತರ ದಶಕದ ಅಂತ್ಯದಲ್ಲಿ ಕಮ್ಯುನಿಸ್ಟ್ ಆಂದೋಲನದತ್ತ ಆಕರ್ಷಿತರಾದ, ಈಗ ರಾಜ್ಯ ಸೆಕ್ರೆಟೇರಿಯೆಟ್ ಸದಸ್ಯರೂ, ಕರ್ನಾಟಕ ಸಿ.ಐ.ಟಿ.ಯು. ಪ್ರಧಾನ ಕಾರ್ಯದರ್ಶಿಗಳೂ ಆಗಿರುವ ವಿ.ಜಿ.ಕೆ. ತಮ್ಮ ಕಥೆ ಅರುಹುತ್ತಿದ್ದಾರೆ.**
>
> **ಅನುವಾದ: ಕೆ.ವಿ.**

## ಕಮ್ಯೂನಿಸ್ಟ್ ಆಂದೋಲನ ಸೆಳೆದ ಬಗೆ

ದುಡಿಯುವ ಬಗ್ಗೆ ನನಗೆ ಸಂಪೂರ್ಣ ಮನವರಿಕೆಯಾಗಿದ್ದರೂ ಅದನ್ನು ಮಾಡಲಾರೆ - ಏಕೆಂದರೆ ಆಗ ನಾನು ಇನ್ನೊಂದು ವರ್ಷದೊಳಗೆ, ನನಗೆ 27 ವರ್ಷ ತುಂಬುವುದರೊಳಗೆ ಗ್ರಾಜುವೇಟ್‌ಶಿಪ್ ಪರೀಕ್ಷೆ ಪಾಸಾಗಿ ವಾಯುಪಡೆಯಲ್ಲಿ ಕಮಿಶನ್ಡ್ ಹುದ್ದೆಗೆ ಅರ್ಜಿಸಲ್ಲಿಸುವ ಗುರಿಯನ್ನಿಟ್ಟುಕೊಂಡಿದ್ದೇನೆ ಎಂದು ಹೇಳುವ ಸ್ಥಿತಿಯಲ್ಲಿದೆನಷ್ಟೆ. ನಾನು ಕೆಲಸದಿಂದ ವಜಾ ಆಗುವವರೆಗೆ ಸೈನಿಕನಾಗುವ ಆಕಾಂಕ್ಷೆ ನನಗಿತ್ತು.

## ವಜಾ - ಒಂದು ತಿರುಗು ಬಿಂದು

೧೯೬೬ ರಲ್ಲಿ ಬಿ.ಇ.ಎಲ್. ಕಾರ್ಮಿಕರು ದಿಟ್ಟ ಹೋರಾಟಗಳಲ್ಲಿ ತೊಡಗಿದ್ದರು. ಅದುವರೆಗೆ ೬೦ಕ್ಕೂ ಹೆಚ್ಚು ಮುಷ್ಕರ ಕಾರ್ಯಾಚರಣೆ ನಡೆಸಿದ್ದವು. ಇವನ್ನೆಲ್ಲಾ ಹೇಗಾದರೂ ನಿಲ್ಲಿಸಿಯೇ ಬಿಡಬೇಕು ಎಂದು ಮ್ಯಾನೇಜ್‌ಮೆಂಟ್ ಕೂಡಾ ನಿರ್ಧರಿಸಿಬಿಟ್ಟಿರಬೇಕು. ಕಾಮ್ರೇಡ್ ಎಂ.ಎಸ್.ಸಿ.ರಾವ್ ಆಗ ನಮ್ಮ ಉಪಾಧ್ಯಕ್ಷರಾಗಿದ್ದರು. ೧೯೬೭ ರಲ್ಲಿ, ಅವರು ಫ್ಯಾಕ್ಟರಿಯಲ್ಲಿ ಭರ್ತಿ ಪಡೆದು ಆಫೀಸರ್ ಆಗಿ ಖಾಯಂ ಆಗುವ ಮೊದಲು ಅವರು ಯೂನಿಯನ್ ಬಿಡಬೇಕೆಂದು ಒತ್ತಾಯಿಸಿತು. ಯೂನಿಯನ್ ಅವರನ್ನು ಮುಕ್ತ ಮಾಡಲು ನಿರಾಕರಿಸಿತು. ಮ್ಯಾನೇಜ್‌ಮೆಂಟ್ ಆಕ್ರಮ, ೧೯೬೬ ರಲ್ಲಿ, ಅವರನ್ನು ಅವರ ಮೊದಲ ಹುದ್ದೆಗೇ ವಾಪಸು ಕಳಿಸಿತು. ಇಲೆಕ್ಟ್ರಿಕಲ್ ವಿಭಾಗದ ಮತ್ತು ಮೆಶಿನ್ ಶಾಪ್‌ನ ಕಾರ್ಮಿಕರು ಮುಷ್ಕರದಲ್ಲಿದ್ದರು. ಯೂನಿಯನ್ ನಿರ್ಧರಿಸಿದಂತೆ ಸ್ವಯಂ ಸ್ಫೂರ್ತಿಯಿಂದ ಜೂನ್ ೨೩ ರಂದು ಮುಷ್ಕರ ನಡೆಯಿತು. ಅದು ಫ್ಯಾಕ್ಟರಿ ಒಳಗೇ ಕೂತಿರುವ, ಹೊರಗೆ ಹೋಗಲು ನಿರಾಕರಿಸುವ ಮುಷ್ಕರ. ಎಂ.ಎಸ್.ಸಿ. ರಾವ್‌ರವರಿಗೆ ಅವರ ಬಡ್ತಿಯ ಹುದ್ದೆ ಮತ್ತೆ ಸಿಗುವವರೆಗೆ ಅದು ಮುಗಿಯುವಂತಿರಲಿಲ್ಲ.

ಜೂನ್ ೨೩ ರ ಮೊದಲೂ ಈ ಎರಡು ವಿಭಾಗಗಳಲ್ಲಿ ಕಾರ್ಮಿಕರು ಮುಷ್ಕರದಲ್ಲಿದ್ದರು. ಜೂನ್ ೨೩ ರ ಮುಷ್ಕರ ಸರಿಯಾಗಿ ಸಂಘಟಿಸಿರಲಿಲ್ಲವಾದ್ದರಿಂದ ಎಲ್ಲಾ ಕಡೆ ಒಂದೇ ರೀತಿಯಲ್ಲಿರಲಿಲ್ಲ. ನಮ್ಮ ವಿಭಾಗದ ಹೆಚ್ಚಿನ ಕಾರ್ಮಿಕರು ಮುಷ್ಕರ ನಡೆಸಿದರು. ಆದರೆ ನಮ್ಮ ಕಟ್ಟಡದಲ್ಲಿದ್ದ ನೂರಾರು ಮಹಿಳಾ ಕಾರ್ಮಿಕರಿದ್ದ ೬.೨ ಅಸೆಂಬ್ಲಿ ವಿಭಾಗದಲ್ಲಿ ಅದು ಯಶಸ್ವಿಯಾಗಲಿಲ್ಲ.. ಪಕ್ಕದ ಕಸ್ಟಮರ್ ಟೆಸ್ಟ್ ಕಟ್ಟಡದಲ್ಲಿ ಕೆಲಸ ನಡೆಯುತ್ತಿತ್ತು. ಕಾರ್ಮಿಕರು ತಕ್ಷಣ ಮೆರವಣಿಗೆ ಸಂಘಟಿಸಿ ಪ್ರತಿಯೊಂದು ಅಸೆಂಬ್ಲಿ ಲೈನಿನಲ್ಲೂ ಸಂಚರಿಸಿ ಮುಷ್ಕರಕ್ಕೆ ಸೇರುವಂತೆ ಅಲ್ಲಿಯ ಕಾರ್ಮಿಕರನ್ನು ಕೇಳಿಕೊಂಡರು. ಮಧ್ಯಾಹ್ನದ ಹೊತ್ತಿಗೆ ಮುಷ್ಕರ ಸಂಪೂರ್ಣ ಯಶಸ್ವಿಯಾಗಿತ್ತು. ಜೂನ್ ೨೪ ರಂದು ಮ್ಯಾನೇಜ್‌ಮೆಂಟ್ ಲಾಕೌಟ್ ಸಾರಿತು. ಕಾರ್ಮಿಕರಿಗೆ ಹೊರಟು ಹೋಗುವಂತೆ ಹೇಳಿತು. ರಾತ್ರಿ ಬಹಳ ಕಾರ್ಮಿಕರು ನಿಲ್ಲಲಿಲ್ಲ. ಲಾಕೌಟನ ನಂತರವೂ ಅಲ್ಲಿಂದ ಕದಲದವರಲ್ಲಿ ನಾನೂ ಒಬ್ಬ. ಸತತವಾಗಿ ನಾಲ್ಕು ದಿನಗಳವರೆಗೂ ಹೊರಗೆ ಕಾಲಿಡಲಿಲ್ಲ. ಕೊನೆಗೆ ಬಂಧಿಸಿ ಸೆಂಟ್ರಲ್ ಜೈಲಿನಲ್ಲಿ ಇಡುವವರೆಗೂ. ಜುಲೈ ಮೊದಲವಾರದಲ್ಲಷ್ಟೇ ನಮ್ಮನ್ನು ಜೈಲಿನಿಂದ ಬಿಡುಗಡೆ ಮಾಡಿದರು.

ಲಾಕೌಟ್‌ನ್ನು ೧೮ ನೇ ಜುಲೈಗೆ ತೆರವು ಮಾಡಲಾಯಿತು. ಆದರೆ ನಾನು ಮತ್ತೆಂದೂ ಕೆಲಸಕ್ಕೆ ಹಿಂದಿರುಗಲು ಸಾಧ್ಯವಾಗಲಿಲ್ಲ. ನಾನೇನೂ ತಪ್ಪು ಮಾಡದಿದ್ದರೂ ನನ್ನನ್ನು ಸಸ್ಪೆಂಡ್ ಮಾಡಲಾಯಿತು. ನಂತರ ಕೆಲಸದಿಂದ ವಜಾ ಮಾಡಲಾಯಿತು.

## ನೀರಿನಿಂದ ಹೊರಬಂದ ಮೀನು

ಈ ಹಿಂದೆ ವರ್ಣಿಸಿದಂತೆ ಬಹಳ ಕಷ್ಟನಷ್ಟಗಳನ್ನು ಎದುರಿಸಿ ಜೀವನದಲ್ಲಿ ನಾನು ಸಾಧಿಸಿದ ಮುನ್ನಡೆ, ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ರಂಗದಲ್ಲಿ ಮುನ್ನಡೆಯಬೇಕೆಂಬ ನನ್ನ ದೊಡ್ಡ ಆಕಾಂಕ್ಷೆ ಎಲ್ಲವೂ ಮ್ಯಾನೇಜ್‌ಮೆಂಟಿನ ಈ ಕಠಿಣ ವರ್ತನೆ ಮುರಿದು ಹಾಕಿತ್ತು; ಯಾವ ಸಾರ್ವಜನಿಕ ವಲಯದ ಪರವಾಗಿ ನಾನು ನನ್ನ ಸಹೋದ್ಯೋಗಿಗಳೊಡನೆ ಜಗಳ ಕೂಡಾ ಮಾಡಿದ್ದೆನೋ ಅಂತಹ ಒಂದು ಸಾರ್ವಜನಿಕ ವಲಯದ ಕಾರ್ಖಾನೆಯ ಮ್ಯಾನೇಜ್‌ಮೆಂಟಿನ ಕಠಿಣ ವರ್ತನೆಯಿಂದಾಗಿ ಮುರಿದುಬಿದ್ದಿತ್ತು.

ವಜಾಮಾಡುವ ಮೊದಲು ನನ್ನ ಇಲಾಖೆಯ ಮುಖ್ಯಸ್ಥರು ನನ್ನನ್ನು ಕರೆಸಿ ತಪ್ಪೊಪ್ಪಿಗೆ ಪತ್ರ ಕೊಡುವಂತೆ ಕೇಳಿದರು. ಇನ್ನೊಬ್ಬ ನನ್ನ ಸಹೋದ್ಯೋಗಿ ಶ್ರೀ ಸಂಪತ್ ಕುಮಾರ್ ಎಂಬವರನ್ನು ನನ್ನ ಜತೆಗೆ ಕರೆಸಿದರು. ಅವರು ತಕ್ಷಣ ಪತ್ರಬರೆದು ಕೊಟ್ಟರು. ಅವರ ಅಮಾನತು ರದ್ದಾಯಿತು. ಅವರೀಗ ಬಿ.ಇ.ಎಲ್.ನಲ್ಲಿ ಸೀನಿಯರ್ ಇಂಜಿನಿಯರ್. ನಾನು ಕ್ಷಮೆಯಾಚಿಸುವಂತಹ ಯಾವುದೇ ತಪ್ಪು ಮಾಡಿರಲಿಲ್ಲವಾದ್ದರಿಂದ ತಪ್ಪೊಪ್ಪಿಗೆ ಬರೆದುಕೊಡಬೇಕೆಂಬ ಮ್ಯಾನೇಜ್‌ಮೆಂಟಿನ ಒತ್ತಡವನ್ನು ವಿರೋಧಿಸಿದೆ. ಬದಲಿಗೆ ಜರ್ಮನ್ ಇಂಜಿನಿಯರ್‌ಗಳೂ ಪರಿಹರಿಸಲಾಗದ ಉತ್ಪಾದನಾ ಸಮಸ್ಯೆಗಳನ್ನು ಪರಿಹರಿಸಲು ನಾನು ಪಟ್ಟ ಶ್ರಮವನ್ನು ನೆನಪಿಸಿ ಇಂತಹ ಒಳ್ಳೆಯ ಕೆಲಸಗಾರನನ್ನು ಕಳಕೊಳ್ಳುತ್ತೀರಾ ಎಂದು ನಮ್ಮ ವಿಭಾಗದ ಮುಖ್ಯಸ್ಥರನ್ನೇ ಕೇಳಿದೆ. ಆಗ ನನ್ನನ್ನು ವಜಾಮಾಡಲು ಸಾಧ್ಯವಿಲ್ಲ. ಮ್ಯಾನೇಜ್‌ವೆಂಟ್ ಇಂತಹ ಅನ್ಯಾಯ ಮಾಡಲಿಕ್ಕಿಲ್ಲ ಎಂಬ ಪೂರ್ಣ ನಂಬಿಕೆ ನನ್ನದು. ಆದರೆ ಅದು ತಪ್ಪಾಗಿತ್ತು. ನಂತರವೇ ನನಗೆ ಆಳುವ ವರ್ಗದ ಅವೈಯಕ್ತಿಕ, ಅನ್ಯಾಯಪೂರ್ಣ ಹಾಗೂ ನಿರ್ದಯ ಸ್ವಭಾವ ಅರ್ಥವಾದದ್ದು.

ನನಗಿದ್ದ ಭ್ರಮೆಗೆ ಕಾರಣ ಹಿಂದೊಂದು ಘಟನೆಯಲ್ಲಿ ಆಗಿನ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀಬಿ.ವಿ.ಬಾಳಿಗಾ ನನ್ನ ಪರವಾಗಿ ಒಂದು ನ್ಯಾಯಪೂರ್ಣ ನಿರ್ಣಯ ಕೈಗೊಂಡದ್ದು. ನಾನು ಮೊದಲು ಟೈಪಿಸ್ಟ್ ಆಗಿದ್ದೆ. ಜೀವನದಲ್ಲಿ ಮುನ್ನಡೆಯಲು ಅಕೌಂಟೆನ್ಸಿ ಕಲಿತು ಬಿ.ಇ.ಎಲ್.ನ ಬಜೆಟ್ ಹಣಕಾಸು ವಿಭಾಗದಲ್ಲಿ ಹೈಗ್ರೇಡ್ ಕ್ಲರ್ಕ್ ಆಗಿ ಬಡ್ತಿ ಪಡೆದೆ.. ಆದರೆ ನನ್ನ ಮ್ಯಾನೇಜರ್ ನನ್ನನ್ನು ಅವರ ವಿಭಾಗದಿಂದ ಕಳಕೊಳ್ಳಲು ಸಿದ್ಧರಿರಲಿಲ್ಲ. ವಿಶೇಷ ಮಂಜೂರಾತಿ ಪಡೆದು ನನ್ನನ್ನು ಅಲ್ಲೇ ಇರಿಸಿಕೊಂಡು ಇಲೆಕ್ಟ್ರಾನಿಕ್ಸ್ ಕಲಿಯಲು ಸಲಹೆ ಮಾಡಿದರು. ನಾನು ಹಾಗೇ ಮಾಡಿದೆ. ನಂತರ ಪ್ಲಾನರ್ ಆಗಿ ತಾಂತ್ರಿಕ ಹುದ್ದೆಗೆ ಬದಲಿಸಿದೆ. ಮತ್ತೆ ನನ್ನನ್ನು ಅದೇ ಕಚೇರಿಯಲ್ಲಿ ಇರಿಸಿಕೊಂಡರು. ನಂತರ ಇನ್ಸ್‌ಪೆಕ್ಷನ್ ವಿಭಾಗದಲ್ಲಿ ಟೆಕ್ನಿಕಲ್ ಅಸಿಸ್ಟೆಂಟ್ II ನೇ ಹುದ್ದೆಗೆ ಬಡ್ತಿಗೆ ಅರ್ಜಿ ಹಾಕಿದೆ. ಈ ಹುದ್ದೆಗೆ ಸಾಮಾನ್ಯವಾಗಿ ಟ್ರೇಡ್ ಪರೀಕ್ಷೆ ಪಾಸಾದರೆ ಸಾಕು! ಅದನ್ನು ನಾನು ಟೆಸ್ಟ್ ಇಂಜಿನಿಯರ್ ಅತ್ಯಂತ ತೃಪ್ತಿಗೊಳ್ಳುವ ರೀತಿಯಲ್ಲಿ ಮಾಡಿದ್ದೆ. ನಿಯಮಿತ ಕಾರ್ಮಿಕ ತಗೊಳ್ಳಬಹುದಾದ 1/3 ಕ್ಕಿಂತ ಕಡಿಮೆ ಸಮಯದಲ್ಲಿ ಅದನ್ನು ಪೂರೈಸಿದ್ದೆ. ಒಂದು ಲಿಖಿತ ಪರೀಕ್ಷೆಯನ್ನೂ ಕೊಡಲಾಯಿತು. ಅದರಲ್ಲೂ ಪಾಸಾದೆ. ನಂತರ ಇಂಟರ್‌ವ್ಯೂ ಸಮಿತಿ ನನ್ನನ್ನು ಮೌಖಿಕ ಪರೀಕ್ಷೆಗೆ ಕರೆಯಿತು. ಅಲ್ಲಿ ಎಲ್ಲ ಪ್ರಶ್ನೆಗಳಿಗೂ ಉತ್ತರಿಸಿದ್ದರೂ ನನ್ನನ್ನು ಫೇಲ್ ಮಾಡಲಾಯಿತು. ನಾನು ಎಂ.ಡಿ.ಗೆ ದೂರು ನೀಡಿದೆ. ಅವರು ವಿಚಾರಣೆಗೆ ಆಜ್ಞೆ ಮಾಡಿದರು. ನನಗೆ ಕೇಳಿದ ಪ್ರಶ್ನೆಗಳನ್ನೂ, ಅದಕ್ಕೆ ನೀಡಿದ ಉತ್ತರಗಳನ್ನೂ ನಾನು ದೂರಿನಲ್ಲಿ ಬರೆದಿದ್ದೆ. ಇಂಟರ್‌ವ್ಯೂ ಸಮಿತಿಯ ಒಬ್ಬ ಸದಸ್ಯ ಆರ್.ಎಸ್. ಮುಂಡ್ಕೂರು ಇಂಟರ್‌ವ್ಯೂನಲ್ಲಿ ಕೇಳಿದ ಪ್ರಶ್ನೆಗಳ ಹಾಗೂ ನನ್ನ ಉತ್ತರಗಳ ಬಗ್ಗೆ ಬರೆದದ್ದು ಸರಿ ಎಂದು ಪ್ರಮಾಣಿಸಿದರು.

ಎಂ.ಡಿ. ನನ್ನ ಭಡ್ತಿಯ ಆಜ್ಞೆ ನೀಡಿದರು. ನಾನು ಆರು ವರ್ಷ ಕಚೇರಿಯಲ್ಲಿ ದುಡಿದ ನಂತರ ವರ್ಕ್‌ಶಾಪ್‌ಗೆ ಬಂದದ್ದು ಹೀಗೆ. ಎಂ.ಡಿ.ಯವರ ನ್ಯಾಯ ಶೀಲತೆಯ ಬಗ್ಗೆ ನನಗೆ ನಂಬಿಕೆ ಇದ್ದದ್ದು ಇದರಿಂದಾಗಿ. ನನ್ನ ದೂರನ್ನು ಎಂ.ಡಿ.ಗೆ ಕಳಿಸಬೇಕೆಂದು ಹೇಳಿದಾಗ ಅದು ನನ್ನ ದಾಖಲೆಯಲ್ಲಿ ಒಂದು ಕಪ್ಪು ಚುಕ್ಕೆಯಾಗುತ್ತದೆ ಎಂದರು ನನ್ನ

ಪುಟ ೬ಕ್ಕೆ

# ರಾಜಾಸ್ಥಾನ: ಜನತಂತ್ರದ ಬಗ್ಗೆ ಬಿ.ಜೆ.ಪಿ. ಮೊಸಳೆ ಕಣ್ಣೀರು

ರಾಜಾಸ್ಥಾನದಲ್ಲಿ ಭಾರತೀಯ ಜನತಾ ಪಕ್ಷ-ಜನತಾದಳದ ಸಮ್ಮಿಶ್ರ ಸರಕಾರ ಅಸ್ತಿತ್ವಕ್ಕೆ ಬಂದ ಮೇಲೆ ಹರಿಜನರ ಮೇಲಿನ ದೌರ್ಜನ್ಯ ಹೆಚ್ಚಿದೆ ಎಂದು ಪಕ್ಷದ ರಾಜ್ಯ ಸಮಿತಿ ಕಳವಳ ವ್ಯಕ್ತಪಡಿಸಿದೆ.

ಮುಂಡಾವರಿಯಲ್ಲಿ ಕಂಜೋಲಿ ಬಸ್ತಿಯಲ್ಲಿ ನಡೆದ ಪೂರ್ವಯೋಜಿತ ಆಕ್ರಮಣ ರಾಜ್ಯದ ಇತಿಹಾಸದಲ್ಲೇ ಅತ್ಯಂತ ಕ್ರೂರವಾದುದು ಎಂದು ಪಕ್ಷ ಹೇಳಿದೆ. ಆ ದಾಳಿ ನಡೆಸಿದ ದುಷ್ಕರ್ಮಿಗಳನ್ನು ಬಂಧಿಸಬೇಕು ಮತ್ತು ತಪ್ಪಿತಸ್ಥ ಪೋಲೀಸ್ ಸಿಬ್ಬಂದಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸಿದೆ.

ತಾನು ಪ್ರಜಾಪ್ರಭುತ್ವದ ಸಂರಕ್ಷಕ ಎಂದು ಕೊಚ್ಚಿಕೊಳ್ಳುವ ಬಿ.ಜೆ.ಪಿ., ಪೋಲೀಸ್ ಬಲದ ಆಧಾರದಲ್ಲಿಯೇ ಇಲ್ಲಿ ಸ್ಪಷ್ಟವಾಗಿದೆ. ಪೋಲೀಸರ ದಬ್ಬಾಳಿಕೆ ಮತ್ತು ದಾಳಿಗೆ ಬಲಿಯಾಗುವವರ ಸಂಖ್ಯೆ ರಾಜ್ಯದಲ್ಲಿ ಹೆಚ್ಚಾಗಿದೆ. ತಪ್ಪಿತಸ್ಥ ಪೋಲೀಸರನ್ನು ರಕ್ಷಿಸಲೂ ಸರಕಾರ ಪ್ರಯತ್ನಿಸುತ್ತಿದೆ.

ರೈತರಿಗೆ ತಾನಲ್ಲದೆ ಬೇರೆ ಯಾರೂ ಗತಿಯಿಲ್ಲ ಎಂದೂ ಬಿ.ಜೆ.ಪಿ. ಹೇಳುತ್ತಿರುವುದನ್ನು ನಾವು ಗಮನಿಸಿದ್ದೇವೆ. ಅದುವೇ ಸರಕಾರದಲ್ಲಿ ಪ್ರಮುಖವಾಗಿರುವ ರಾಜಾಸ್ಥಾನದಲ್ಲಿ ಅದರ ಈ ಕುರಿತು ಬಣ್ಣವೂ ಬಯಲಾಗಿದೆ. 10000ರೂ ವರೆಗಿನ ರೈತರ ಸಾಲ ಮನ್ನಾ ಮಾಡಲು ಅದು ಕ್ರಮ ಕೈಗೊಂಡಿಲ್ಲ. ವೃದ್ಧಾಪ್ಯ ವೇತನ ನಿಲ್ಲಿಸಲಿದೆ. ಶಿಕ್ಷಣ, ಕುಡಿಯುವ ನೀರು, ಆರೋಗ್ಯ ಮತ್ತಿತರ ಬಾಬ್ತುಗಳಿಗೆ ಬಜೆಟ್‌ನಲ್ಲಿ ಹೆಚ್ಚಿನ ಹಣ ಒದಗಿಸಿಲ್ಲ ಎಂದು ಸಿ.ಪಿ.ಐ.(ಎಂ) ಟೀಕಿಸಿದೆ.

## ತ್ರಿಪುರಾ ವೀರರಿಗೆ ದಿಲ್ಲಿ ಜನರ ಬೆಂಬಲ

ತ್ರಿಪುರಾದ ಕಾಂಗ್ರೆಸ್(ಐ)-ಟಿ.ಯು.ಜೆ.-ಎಸ್. ಮೈತ್ರಿಕೂಟದ ಸರಕಾರ ರಾಜ್ಯದಲ್ಲಿ ನಾಗರೀಕ ಜೀವನದ ನೆಲೆಗಟ್ಟನ್ನೇ ಹಾಳುಗೆಡವುತ್ತಿದೆ- ಇದು ತ್ರಿಪುರಾದ ಕಮ್ಯುನಿಸ್ಟ್ ಚಳುವಳಿಯ ನೇತಾರ, ಮಾಜಿ ಮುಖ್ಯಮಂತ್ರಿ ಹಾಗೂ ಸಿ.ಪಿ.ಐ(ಎಂ) ಪಾಲಿಟ್ ಬ್ಯುರೋ ಸದಸ್ಯ ಕಾಂ.ನೃಪೇನ್ ಚಕ್ರವರ್ತಿ ಅವರ ಅಭಿಪ್ರಾಯ.

ಆ ರಾಜ್ಯದಲ್ಲಿ ದುಷ್ಟ ಮೈತ್ರಿಕೂಟದ ಆಶ್ರಯದಲ್ಲಿ 2-2 1/2 ವರ್ಷಗಳಿಂದ ನಡೆಯುತ್ತಿರುವ ವ್ಯಾಪಕ ದಾಳಿ ದಬ್ಬಾಳಿಕೆಗಳನ್ನು ವಿರೋಧಿಸಿ, ಅಲ್ಲಿನ ಜನರ ಹೋರಾಟಕ್ಕೆ ನೈತಿಕ ಬೆಂಬಲ ನೀಡಲು ಪಕ್ಷದ ದಿಲ್ಲಿ ರಾಜ್ಯ ಸಮಿತಿ ಆಗಸ್ಟ್ 2 ರಂದು ಏರ್ಪಡಿಸಿದ್ದ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿ ನೃಪೇನ್ ಮಾತನಾಡುತ್ತಿದ್ದರು.

ಅಧಿಕಾರದಿಂದ ಹೊರಬಿದ್ದ ಕೂಡಲೇ ರಾಜೀವಗಾಂಧಿಯವರು ತಾವೊಬ್ಬ ಪ್ರಜಾಪ್ರಭುತ್ವದ ಭಾರೀ ದೊಡ್ಡ ರಕ್ಷಕನೆಂದು ಬೊಗಳೆ ಕೊಚ್ಚುತ್ತಿದ್ದಾರೆ. ಆದರೆ ಅವರದೇ ಪಕ್ಷದ ಸರಕಾರ ತ್ರಿಪುರಾದಲ್ಲಿ ಮುಗ್ಧ ಜನರನ್ನು ಕೊಲ್ಲುವಲ್ಲಿ ನಿರತವಾಗಿದೆ. ಮತ್ತು ಎಲ್ಲಾ ಜನತಾಂತ್ರಿಕ ನೀತಿ ನಿಯಮ ಹಕ್ಕುಗಳನ್ನು ಹೊಸಕಿ ಹಾಕುತ್ತಿದೆ. ಎಂದು ವಯೋವೃದ್ಧ ನಾಯಕ ರಾಜೀವ್ ಗಾಂಧಿಯವರನ್ನು ಕಟುವಾಗಿ ಟೀಕಿಸಿದರು.

## ಬಸ್ ಪ್ರಯಾಣವೂ ಅಸಾಧ್ಯ

ರಾಜ್ಯದಲ್ಲಿ ಪರಿಸ್ಥಿತಿ ಎಷ್ಟು ಹದಗೆಟ್ಟಿದೆಯೆಂದರೆ, ಸಿ.ಪಿ.ಐ(ಎಂ) ಬೆಂಬಲಿಗರು ಬಸ್‌ನಲ್ಲಿ ಪ್ರಯಾಣಿಸುವುದೂ ಕೂಡ ಕಷ್ಟಕರವಾಗಿದೆ.

ತ್ರಿಪುರಾದ ಹೋರಾಟ ನಿರತ ಜನರಿಗೆ ಸಂಪೂರ್ಣ ಬೆಂಬಲ ಸಾರಿದ ದಿಲ್ಲಿ ರಾಜ್ಯ ಸಮಿತಿಯ ಕಾರ್ಯದರ್ಶಿ ಕಾಂ.ಜೊಗಿಂದರ್ ಶರ್ಮಾ ಅವರು ರಾಜ್ಯಸಮಿತಿಯ ಪರವಾಗಿ ನೆರವಿನ ಮೊದಲ ಕಂತಾಗಿ 10000 ರೂ.ಗಳ ಚೆಕ್ಕನ್ನು ನೃಪೇನ್ ಚಕ್ರವರ್ತಿಯವರಿಗೆ ಅರ್ಪಿಸಿದರು.

ವಾಜಿರ್‌ಪುರದ ಜೆ.ಜೆ.ಕಾಲನಿಯ ಓರ್ವ ಕಾರ್ಮಿಕ ಸಂಗಾತಿ ನಾಥುರಾಮ್ ಕೂಡ 1000 ರೂ.ಗಳನ್ನು ಅರ್ಪಿಸಿದರು.

## ಒರಿಸ್ಸಾ: ಕೊಲೆಗಡುಕ ಬಿ.ಜೆ.ಪಿ.-ಆರೆಸ್ಸೆಸ್ ಕೂಟ

ಒರಿಸ್ಸಾದಲ್ಲಿ ಬಿ.ಜೆ.ಪಿ-ಆರೆಸ್ಸೆಸ್-ಬಿ.ಎಂ.ಎಸ್ ದುಷ್ಕರ್ಮಿಗಳು ಎಡ- ಪ್ರಜಾಸತ್ತಾತ್ಮಕ ಶಕ್ತಿಗಳ ಮೇಲೆ ಭಾರಿ ದಾಳಿ ನಡೆಸಿತ್ತಿದ್ದಾರೆ. ಇತ್ತೀಚೆಗಷ್ಟೆ ಸುಂದರಗಢ ಜಿಲ್ಲೆಯ ಬರಸುವಾನ್‌ನಲ್ಲಿ ಸಿ.ಐ.ಟಿ.ಯು ನಾಯಕ ಅಭಯ ಚೌಧರಿಯವರ ಮಗ ಅನಿಲ್‌ನನ್ನು(18 ವರ್ಷ) ಅವರು ಕೊಂದು ಹಾಕಿದರು. ಬಿ.ಜೆ. ಪಿ. ಮತ್ತು ಕಾಂಗ್ರೆ ಗೂಂಡಾಗಳು ಸಿ.ಪಿ.ಐ(ಎಂ) ಹಾಗೂ ಜನತಾದಳ ಕಾರ್ಯಕರ್ತರ ಮೇಲೆ ಜಂಟಿಯಾಗಿ ದಾಳಿ ನಡೆಸಿದ ಕೇವಲ ಒಂದು ವಾರದ ನಂತರ ಈ ಕೊಲೆ ಸಂಭವಿಸಿತು.

ಇತ್ತೀಚಿನ ದಿನಗಳಲ್ಲಿ ಸಿ.ಪಿ.ಐ(ಎಂ) ಮೇಲೆ ನಡೆಸುತ್ತಿರುವ ದಾಳಿಗಳ ಸರಣಿಯಲ್ಲಿ ಇದೂ ಒಂದಾಗಿದೆ. ಇಂಥ ದಾಳಿಗಳಲ್ಲಿ ಸಿ.ಐ.ಟಿ.ಯು.ನ ಇನ್ನೋರ್ವ ನಾಯಕ ಅನಂತ ರೌತ್ ಅವರ 9 ವರ್ಷದ ಮಗನ ಸಾವು ಕೂಡ ಸಂಭವಿಸಿತ್ತು.

ಬಿ.ಎಂ.ಎಸ್. ನ ಕುಖ್ಯಾತ ನಾಯಕ ಆರ್.ಪಿ.ಸಿಂಗ್ ನಾಯಕತ್ವದ ಕೊಲೆಗಡುಕರ ತಂಡಕ್ಕೆ ಪೋಲೀಸರೂ ಬೆಂಬಲ ನೀಡುತ್ತಿದ್ದಾರೆ. ಡಿ.ಎಸ್.ಪಿ ಮತ್ತು ಎ.ಎಸ್.ಐ ಕೂಡ ಈ ಗ್ಯಾಂಗನ್ನ ಪೋಷಿಸುತ್ತಿದ್ದಾರೆ.

ಈ ಕ್ಷೇತ್ರದಲ್ಲಿ ಬಿ.ಜೆ.ಪಿ. ಅಭ್ಯರ್ಥಿ ಕಳೆದ ಚುನಾವಣೆಗಳಲ್ಲಿ ಗೆದ್ದಿರುವುದೇ ಈ ಗ್ಯಾಂಗಿಗೆ ನೈತಿಕ ಬೆಂಬಲವಾಗಿ ಪರಿಣಮಿಸಿದೆ. ಸ್ವತ: ಬಿ.ಜೆ.ಪಿ. ಶಾಸಕನೇ ಅಲ್ಲಿ ಹಿಂಸಾಚಾರ ಪ್ರಚೋದಿಸಲು ಯತ್ನಿಸುತ್ತಿದ್ದಾರೆ.

ಸಿ.ಪಿ.ಐ(ಎಂ) ಲೋಕಸಭಾ ಸದಸ್ಯ ಶಿವಾಜಿ ಪಟ್ನಾಯಕ್ ನೇತೃತ್ವದ ನಿಯೋಗವೊಂದು ದುರ್ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಿತ್ತು. ಇತ್ತೀಚೆಗೆ ಘಟನೆಗಳ ಬಗ್ಗೆ ಸಿ.ಬಿ.ಐ ತನಿಖೆ ನಡೆಸಬೇಕು ಮತ್ತು ಡಿ.ಎಸ್.ಪಿ., ಎ.ಎಸ್.ಐ. ಯನ್ನು ಅಮಾ[illegible] ಮಾಡಬೇಕೆಂದು ನಿಯೋಗ ಆಗ್ರಹಿಸಿದೆ.

## ಉತ್ತರ ಪ್ರದೇಶ : ಕೋಮುವಾದ ವಿರೋಧಕ್ಕೆ ವ್ಯಾಪಕ ಸಿದ್ಧತೆ

ವಿಶ್ವ ಹಿಂದೂ ಪರಿಷತ್(ವಿ.ಎಚ್.ಪಿ.) ಅಯೋಧ್ಯೆಯಲ್ಲಿ ದೇವಸ್ಥಾನ ಕಟ್ಟಲು ಯೋಜಿಸಿರುವುದನ್ನು ಎದುರಿಸಲು ಹಾಗೂ ರಾಜ್ಯದಲ್ಲಿ ಕೋಮು ವಾತಾವರಣ ಶೀಘ್ರವಾಗಿ ಹದಗೆಡುತ್ತಿರುವುದನ್ನು ತಡೆಯಲು ಉತ್ತರ ಪ್ರದೇಶ ಮುಖ್ಯಮಂತ್ರಿ ಮುಲಾಯಂ ಸಿಂಗ್ ಯಾದವ್ ಅವರು ವ್ಯಾಪಕವಾದ ಕೋಮುವಾದ-ವಿರೋಧಿ ಆಂದೋಲನ ಕಾರ್ಯಕ್ರಮವನ್ನು ಪ್ರಕಟಿಸಿದ್ದಾರೆ.

ಜನತಾದಳ, ಸಿ.ಪಿ.ಐ(ಎಂ), ಸಿ.ಪಿ.ಐ., ಬಿ.ಎಸ್.ಪಿ., ಫಾರ್ವರ್ಡ್ ಬ್ಲಾಕ್ ಮತ್ತು ಆರ್.ಎಸ್.ಪಿ. ಗಳನ್ನೊಳಗೊಂಡ 21 ಸದಸ್ಯರ ಕೋಮುವಾದ ವಿರೋಧಿ ಸಮಿತಿಯೊಂದನ್ನು ಅವರು ರಚಿಸಿದ್ದಾರೆ. ಜನತಾದಳದ ರಾಮಶಂಕರ್ ಕೌಶಿಕ್ ಸಮಿತಿಯ ಸಂಚಾಲಕರಾಗಿದ್ದು ಸಿ.ಪಿ.ಐ(ಎಂ)ನ ರಾಮ್ ಸುರೇಸ್ ಯಾದವ್ ಮತ್ತು ಸಿಪಿಐನ ಜಗದೀಶ್ ಲಾಲ್ ತ್ರಿಪಾಠಿ ಕಾರ್ಯದರ್ಶಿಗಳು. ಇನ್ನೊರ್ವ ಕಾರ್ಯದರ್ಶಿಯನ್ನು ನೇಮಿಸಲಾಗುವುದು. ರಾಜ್ಯದ ನಾಲ್ವರು ಸಚಿವರೂ ಸಮಿತಿಯ ಸದಸ್ಯರು.

ಬಿ.ಜೆ.ಪಿ., ವಿ.ಎಚ್.ಪಿ., ಆರ್.-ಎಸ್.ಎಸ್.,ಭಜರಂಗದಳ ಇತ್ಯಾದಿ ಹಿಂದೂ ಕೋಮುವಾದಿ ಸಂಘಟನೆ-ಪಕ್ಷಗಳ; ಮುಸ್ಲಿಂ ಕೋಮುವಾದಿ ಸಂಘ ಸಂಸ್ಥೆಗಳ ಪ್ರಚಾರ, ಚಟುವಟಿಕೆಗಳ ಬಗ್ಗೆ ಜನಜಾಗೃತಿ ಬೆಳೆಸಿ ಕೋಮುಸೌಹಾರ್ದತೆ- ಶಾಂತಿ ಕಾಪಾಡಲು ಸಮಿತಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಃ ಅಯೋಧ್ಯೆಯಲ್ಲಿ ದೇವಸ್ಥಾನ ಕಟ್ಟುವುದಕ್ಕಿಂತಲೂ ಗಂಭೀರವಾದ ದೇಶದ ಹಲವಾರು ಸಮಸ್ಯೆಗಳಿಂದ ಗಮನವನ್ನು ಬೇರೆಡೆ ಸೆಳೆಯಲು ಕೆಲವು ಶಕ್ತಿಗಳು ಪ್ರಯತ್ನಿಸುತ್ತಿರುವ ಈ ಸಂದರ್ಭದಲ್ಲಿ ಸಮಿತಿಯು ವಾಸ್ತವ ಪರಿಸ್ಥಿತಿ ಬಗ್ಗೆ ವಿವರಣೆ ನೀಡಲಿದೆ.

ಃ ಸೆಪ್ಟೆಂಬರ್ 7 ರಂದು ಮಥುರಾದಲ್ಲಿ ಬೃಹತ್ ರಾಲಿ ನಡೆಸುವ ಮೂಲಕ ವ್ಯಾಪಕ ಜನಜಾಗೃತಿ ಕಾರ್ಯಕ್ರಮ ಆರಂಭಿಸಲಾಗುತ್ತದೆ.

ಃ ಅನಂತರ ವಾರಣಾಸಿ(ಸೆ.12), ಬರೇಲಿ( ಸೆ.15) , ಫೈಜಾಬಾದ್ (ಸೆ.16), ಗೋರಖ್‌ಪುರ(ಸೆ. 20), ಹರಿದ್ವಾರ (ಸೆ.25)ದಲ್ಲಿ ಮಾತ್ರವಲ್ಲದೆ ಜಿಲ್ಲಾ ಕೇಂದ್ರಗಳಲ್ಲೂ ರ್‍ಯಾಲಿಗಳ ಏರ್ಪಾಡು.

ಃ ಅನಂತರ ಅಕ್ಟೋಬರ್ 12 ರಂದು ಲಕ್ನೋದಲ್ಲಿ ಭಾರಿ ರಾಲಿ.

ಜನರ ಬೆಂಬಲ ಕ್ರೋಢೀಕರಣ ಮಾತ್ರವಲ್ಲದೆ, ವಿ.ಎಚ್.ಪಿ. ಮತ್ತು ಅದರ ಮಿತ್ರರು ಒಡ್ಡಿರುವ ಅಪಾಯದ ಬಗ್ಗೆ ಜನರನ್ನು ಎಚ್ಚರಿಸುವುದು ರಾಲಿಗಳ ಗುರಿ.



ಸ್ವಾತಂತ್ರ್ಯ ದಿನದಂದು ಕೇರಳ ರಾಜ್ಯಾದ್ಯಂತ ಸಾವಿರಾರು ಡಿ.ವೈ.ಎಫ್.ಐ. ಕಾರ್ಯಕರ್ತರು ' ನಾವು ದೇಶದ ಐಕ್ಯತೆಯನ್ನು ರಕ್ಷಿಸುತ್ತೇವೆ' ಎಂದು ಪ್ರತಿಜ್ಞೆಗೈದರು. ' ಒಂದೇ ಒಂದು ಭಾರತ- ಹೊಸ ಭಾರತ ' ಎನ್ನುವುದು ಪ್ರಧಾನ ಘೋಷಣೆಯಾಗಿತ್ತು.

# ಕೋಮುವಾದದ ವಿರುದ್ಧ ಯುವಜನರ ಸಮಾವೇಶ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ ಕರೆಯಂತೆ ರಾಜ್ಯದ ಹಲವೆಡೆ ಡಿ.ವೈ.ಎಫ್.ಐ. ಘಟನೆಗಳು ಆಗಸ್ಟ್ 12 ರಂದು ಕೋಮುವಾದ ವಿರೋಧಿ ಸಮಾವೇಶಗಳನ್ನು ನಡೆಸಿದ, ಆಗಸ್ಟ್ ೧೫ ರಂದು ಈ ಬಗ್ಗೆ ಇತರ ಕಾರ್ಯಕ್ರಮಗಳನ್ನು ನಡೆಸಿದ ವರದಿಗಳು ಬರುತ್ತಿವೆ.

### ಭದ್ರಾವತಿ:

ಮುನಿಸಿಪಲ್ . ಹಾಲ್‌ನಲ್ಲಿ ನಡೆದ ಸಮಾವೇಶವನ್ನು ಡಿ.ವೈ.ಎಫ್.ಐ. ರಾಜ್ಯ ಕಾರ್ಯದರ್ಶಿ ಉದ್ಘಾಟಿಸುತ್ತಾ ಪ್ರಜಾಸತ್ತಾತ್ಮಕ ಯುವಜನ ಚಳುವಳಿ ಬೆಳೆದಂತೆಲ್ಲಾ ಮತೀಯ ಶಕ್ತಿಗಳು ಮೂಲೆಗುಂಪಾಗುತ್ತವೆ ಎಂದು ವಿವರಿಸಿದರು. ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ವಿಮಲ, ಜನತಾದಳದ ತಾಲ್ಲೂಕು ಅಧ್ಯಕ್ಷ ಬಿ.ನಾಗೇಂದ್ರರಾವ್, ಸಿ.ಪಿ.ಐ(ಎಂ) ಮುಖಂಡರಾದ ಎಸ್.ಬಿ.ಶಿವಶಂಕರ್, ಎಲ್.ರಂಗೇಗೌಡ ಸಮಾವೇಶವನ್ನುದ್ದೇಶಿಸಿ ಮಾತನಾಡಿದರು. ಬಿ.ಎಸ್. ದಾಸ್ ಅಧ್ಯಕ್ಷತೆಯಲ್ಲಿ ನಡೆದ ಸಮಾವೇಶಕ್ಕೆ ತಾಲ್ಲೂಕು ಸಂಚಾಲಕ ಸುಂದರ್ ಸ್ವಾಗತಿಸಿದರು. ಕೊನೆಯಲ್ಲಿ ಮಂಚಣ್ಣ ವಂದಿಸಿದರು.

ಈ ಸಂದರ್ಭದಲ್ಲಿ ಡಿ.ವೈ.ಎಫ್.ಐ. ವತಿಯಿಂದ ನಿರ್ಮಿಸಿದ ಕೆ.ಎಸ್. ಆರ್.ಟಿ.ಸಿ. ವೇಳಾಪಟ್ಟಿಯನ್ನು ಭದ್ರಾವತಿ ಬಸ್ ನಿಲ್ದಾಣದಲ್ಲಿ ಸ್ಥಾಪಿಸಲಾಯಿತು. ಜನತಾದಳದ ತಾಲೂಕು ಅಧ್ಯಕ್ಷ ಬಿ.ನಾಗೇಂದ್ರರಾವ್ ಅದರ ಅನಾವರಣ ಮಾಡಿದರು.

### ಭಟ್ಕಳ:

ಎಸ್.ಎಫ್.ಐ. ಜಿಲ್ಲಾಧ್ಯಕ್ಷ ಹಾಗೂ ಡಿ.ವೈ.ಎಫ್.ಐ. ಸ್ಥಳೀಯ ಮುಖಂಡರಾದ ಸುಭಾಷ ಕೊಪ್ಪೀಕರರವರ ಅಧ್ಯಕ್ಷತೆಯಲ್ಲಿ ನಡೆದ ಸಮಾವೇಶದಲ್ಲಿ ಯುವ ಬರಹಗಾರ ಶ್ರಿಧರ ಕೇಲ್, ಹೊನ್ನಾವರ ತಾಲ್ಲೂಕು ಎಸ್.ಎಫ್.ಐ. ಮುಖಂಡ ಈಶ್ವರ ನಾಯ್ಕ, ವಸಿವುಲ್ಲಾ ಶೇಟ್ ಸಮಾವೇಶದಲ್ಲಿ ಭಾಗವಹಿಸಿದರು. ಉಲ್ಲಾಸ್ ಕುಮಾರ್ ಸ್ವಾಗತಿಸಿದರು. ಕೃಷ್ಣಾನಂದ ವಂದಿಸಿದರು.

### ಹೊಸಪೇಟೆ:

ದೇಶದ ಐಕ್ಯತೆಗೆ, ಸಮಗ್ರತೆಗೆ ಅಪಾಯ ತಂದಿರುವ ಕೋಮುವಾದಿ, ಪ್ರತ್ಯೇಕತಾವಾದಿಗಳ ವಿರುದ್ಧ ಹೋರಾಟ ನಡೆಸುತ್ತಲೇ ಯುವ ಜನಾಂಗ ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳಾದ ನಿರುದ್ಯೋಗ ಬಡತನ, ಅನಕ್ಷರತೆ, ವರದಕ್ಷಿಣೆ, ಮೌಢ್ಯತೆ ವಿರುದ್ಧ ಹೋರಾಟ ಕಟ್ಟುವುದೇ ಡಿ.ವೈ.ಎಫ್.ಐ.ಮೂಲ ಗುರಿಯೆಂದು ಬಳ್ಳಾರಿ ಜಿಲ್ಲಾ ಡಿ.ವೈ.ಎಫ್.ಐ. ಅಧ್ಯಕ್ಷರಾದ ಎಂ. ಜಂಬಯ್ಯ ನಾಯಕ ತಿಳಿಸಿದರು. ಅವರು ನಗರದ ಚಿತ್ರವಾಡ್ಗಿಯಲ್ಲಿ ಡಿ.ವೈ.ಎಫ್.ಐ. ನೂತನ ಕಾರ್ಯಾಲಯವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಅತಿಥಿ ಭಾಷಣ ಮಾಡಿದ 'ಸಮುದಾಯ'ದ ಮುಖಂಡ ರಾಜಾಭಕ್ಷಿಯವರು ನಿರುದ್ಯೋಗ ಸಮಸ್ಯೆಗೆ ಕಾರಣವಾಗಿರುವ ಭೂಮಾಲಿಕ-ಬಂಡವಾಳಶಾಹಿ ನೀತಿಯ ವಿರುದ್ಧ ಪ್ರಜಾಸತ್ತಾತ್ಮಕ ಹೋರಾಟ ಕಟ್ಟುವುದೇ ನಮ್ಮ ಗುರಿಯಾಗಬೇಕು ಎಂದರು.

ವಿದ್ಯಾರ್ಥಿ, ಯುವಜನರ, ರೈತಕಾರ್ಮಿಕರ ಸಮಸ್ಯೆಗಳು ಶೋಷಕ ವರ್ಗದ ರಾಜಕೀಯ ಹಿತಾಸಕ್ತಿಯ ಮೇಲೆ ಅವಲಂಬಿಸಿರುವುದರಿಂದ ಇದನ್ನು ಬದಲಿಸುವ ದುಡಿಯುವ ವರ್ಗದ ರಾಜಕೀಯ ಬೇಕು ಎಂದು ಹೇಳುತ್ತಾ ವಿದ್ಯಾರ್ಥಿ, ಯುವಜನರು ರಾಜಕೀಯದಿಂದ ದೂರವಿರಬೇಕೆನ್ನುವವರು ಆಳುವ ವರ್ಗದ ಏಜೆಂಟರು ಎಂದರು.

ತಾಲ್ಲೂಕು ಡಿ.ವೈ.ಎಫ್.ಐ. ಕಾರ್ಯದರ್ಶಿ ಸೋಮಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಸಭೆಗೆ ಗೋವಿಂದರಾಜ್ ಸ್ವಾಗತ ಕೋರಿದರು. ಕೃಷ್ಣಮೂರ್ತಿ ವಂದನಾರ್ಪಣೆ ಮಾಡಿದರು. ಅಶೋಕ್ ಮತ್ತು ಸಂಗಾತಿಗಳು ಪ್ರಗತಿಪರ ಹಾಡು ಹಾಡಿದರು.

### ವಿಜಾಪುರ:

ಇಲ್ಲಿಯ ೧೨೫ ಡಿ.ವೈ.ಎಫ್.ಐ. ಕಾರ್ಯಕರ್ತರು ಆಗಸ್ಟ್ ೧೫ ರಂದು ರಾಷ್ಟ್ರೀಯ ಐಕ್ಯತೆ, ಕೋಮು ಸೌಹಾರ್ದತೆಯ ಘೋಷಣೆ ಹೊತ್ತು ಕೊಂಡು ಸೈಕಲ್ ಜಾಥಾ ನಡೆಸಿದರು. ಸಂಜೆ ನಡೆದ ಸಮಾರಂಭವೊಂದರಲ್ಲಿ ಅಣ್ಣುಗುರೂಜಿ, ಎಂ.ಎಸ್. ಟಿಪನ್ನವರ, ಬಿ.ಎಂ. ಪಾಟೀಲ, ಜಿ.ಎಸ್.ದೇಶಮುಖ್, ಎಸ್.ಎಸ್. ಕಡಪಟ್ಟಿ ಮುಂತಾದ ಇತ್ತೀಚೆಗೆ ನಿಧನಹೊಂದಿದ ಪ್ರಮುಖ ನಾಯಕರುಗಳಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಕಾನೂನು ಕಾಲೇಜು ಉಪನ್ಯಾಸಕರಾದ ಎಸ್.ಸಿ.ಪಾಟೀಲ, ಎಂ.ಎನ್. ದೇಶಪಾಂಡೆ, ವಕೀಲರಾದ ಟಿ.ಎನ್. ಪಡತಾರೆ, ರೈತಮುಖಂಡ ಭೀಮಶಿ ಕಲಾದಗಿ, ಅಪ್ಪಾಸಾಹೇಬ ಯರನಾಳ, ಬಂಡಾಯ ಸಾಹಿತ್ಯದ ಎಸ್.ಟಿ.ಬಾರಕೇರ ಯುವಜನರನ್ನುದ್ದೇಶಿಸಿ ಮಾತನಾಡುತ್ತಾ ದೇಶದ ಐಕ್ಯತೆ ಸಮಗ್ರತೆಯನ್ನು ಕಾಪಾಡಲು ಯುವಕರಿಗೆ ಕರೆ ಕೊಟ್ಟರು. ಸ್ವಾತಂತ್ರ್ಯ ಯೋಧ, ಎಸ್.ಎಂ. ಉಳ್ಳಗಡ್ಡಿಯವರನ್ನು ಸನ್ಮಾನಿಸಲಾಯಿತು. ಸ್ವಾತಂತ್ರ್ಯಕ್ಕೆ ಕೋಮುವಾದಿ, ಛಿದ್ರಕಾರಿ ಶಕ್ತಿಗಳಿಂದ ಬಂದಿರುವ ಭಂಗದ ವಿರುದ್ಧ ತ್ಯಾಗಬಲಿದಾನ ಮಾಡಿದರೂ ಅದನ್ನು ರಕ್ಷಿಸಬೇಕೆಂದು ಕಳಕಳಿಯಿಂದ ನುಡಿದರು.

ಸ್ವಾಗತಮಾಡಿದ ಶ್ರೀಧರ ಕುಲಕರ್ಣಿ ಸ್ವಾತಂತ್ರ್ಯಯೋಧರ ಸಮ್ಮುಖ ಪ್ರತಿಜ್ಞಾವಿಧಿ ಬೋಧಿಸಿದರು. ಸಭೆ ಮನ್ನೂಸಾಬ ಕಾಲಾದಗಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಸದಾನಂದ ಪ್ರಸ್ತಾವನೆ ಮಾಡಿದರು. ಶಿವಶರಣ ಶಿಂಗಾಡೆ ವಂದನಾರ್ಪಣೆ ಮಾಡಿದರು.

ಸುನೀಲ ಬೀತ. ಶಂಕರ ಭಾರತಿ, ಪ್ರಭು ಹಿರೇಮಠ , ಅಧ್ಯರ ಅಲಮೇಲ, ಗುಲಾಬಿ ಮುಕಾಸಿ, ಶಂಕರ ಹೂಗಾರ, ಸದಾನಂದ ದಾಸ್ಯಾಳ, ಶಿವಾಜಿ ನಡುವಿನಮನಿ ಮುಂತಾದ ಯುವಕರು ಸೈಕಲ್ ಜಾಥಾದ ನೇತೃತ್ವ ವಹಿಸಿದರು.

## ರಸ್ತೆ ಬದಿ ವ್ಯಾಪಾರಿಗಳ ಸಂಘ

ಆಗಸ್ಟ್ ೮ ರಂದು ಹಗರಿಬೊಮ್ಮನ ಹಳ್ಳಿ ರಸ್ತೆಬದಿ ವ್ಯಾಪಾರ ಮಾಡುವವರ ಸಂಘದ ಸಭೆ ನಡೆದು ತರಕಾರಿ ಮಾರುಕಟ್ಟೆ ಸ್ಥಾಪನೆ, ಸಂಘದ ಬೆಳವಣಿಗೆ ಮುಂತಾದ ವಿಷಯಗಳನ್ನು ಚರ್ಚಿಸಿತು. ಸಂಘದ ಅಧ್ಯಕ್ಷ ಭೀಮಪ್ಪ, ಮುಖಂಡರಾದ ಮಲ್ಲಪ್ಪ, ಖಾದರ್ ಸಾಹೇಬ್ ಮಾತನಾಡಿದರು.

# ಇಬ್ಬರು 'ಸುಳ್ಳರ' ನಡುವೆ ಶೀತ ಸಮರ

ಕೊಲ್ಲಿ ಬಿಕ್ಕಟ್ಟು ಇನ್ನಷ್ಟು ತೀವ್ರಗೊಂಡಿದ್ದು ಅಂತರಾಷ್ಟ್ರೀಯ ಆತಂಕಕ್ಕೆ ಎಡೆಕೊಟ್ಟಿದೆ. ಅಮೆರಿಕಾ ಇರಾಕ್ - ಕುವೈತ್‌ನ ವಿರುದ್ಧ ಪೂರ್ಣ ನೌಕಾ ದಿಗ್ಬಂಧನ ಹಾಕಿ, ವಿಶ್ವ ಸಂಸ್ಥೆ ವಿಧಿಸಿರುವ ಆರ್ಥಿಕ ದಿಗ್ಬಂಧನ ಜಾರಿಗೊಳಿಸುವ ಗುತ್ತಿಗೆ ತಾನೇ ತೆಗೆದುಕೊಂಡಿದೆ. ವಿಶ್ವ ಸಂಸ್ಥೆ ವಿಧಿಸಿರುವ ಆರ್ಥಿಕ ದಿಗ್ಬಂಧನೆಗಳನ್ನು ಬಹು -ರಾಷ್ಟ್ರೀಯ ಸೈನ್ಯ ಜಾರಿಗೊಳಿಸಬೇಕು. ಅದನ್ನು ಯಾವುದೇ ದೇಶ ಜಾರಿಗೊಳಿಸಲು ಯತ್ನಿಸುವುದು ಅಕ್ರಮ, ಪಾಶ್ಚಿಮಾತ್ಯ ದೇಶಗಳನ್ನು ಬಿಟ್ಟು ಜಗತ್ತಿನ ಹೆಚ್ಚಿನ ದೇಶಗಳು ಅಭಿಪ್ರಾಯ ಪಟ್ಟಿವೆ. ಇರಾಕ್ ಸುಮಾರು 14 ಸಾವಿರ ಪಾಶ್ಚಿಮಾತ್ಯರನ್ನು ಯುದ್ಧದ ಬೆದರಿಕೆ ನೀಗುವವರೆಗೆ 'ಒತ್ತೆಯಾಳು'ಗಳಾಗಿ ಇಟ್ಟುಕೊಳ್ಳುವ ಬೆದರಿಕೆ ಹಾಕಿದೆ. ಕೊಲ್ಲಿ ಬಿಕ್ಕಟ್ಟು ತೀವ್ರವಾದರೆ, ಮೂರನೆಯ ಜಗತ್ತಿನ ದೇಶಗಳ ಆರ್ಥಿಕತೆ ಅಲ್ಲೋಲಕಲ್ಲೋಲವಾಗುವ ಸಾಧ್ಯತೆ ಇದೆ. ಇಡೀ ಜಗತ್ತೇ ಕೊಲ್ಲಿಯಲ್ಲಿ ಮುಂದೇನಾಗತ್ತೋ ಎಂದು ಉಸಿರು ಬಿಗಿ ಹಿಡಿದು ಕಾಯುತ್ತಿದೆ. ಈ ನುಡುವೆ ಕೊರಿಯಾ ಸ್ವಾತಂತ್ರ್ಯದಿನದಂದು 'ಐಕ್ಯತಾ ರ‍್ಯಾಲಿ'ಯಲ್ಲಿ ಭಾಗವಹಿಸಲು ತಡೆದುದರ ವಿರುದ್ಧ ದ.ಕೊರಿಯಾದಲ್ಲಿ ಭಾರಿ ಪ್ರದರ್ಶನಗಳು ನಡೆದಿವೆ. ಜರ್ಮನ್ ಐಕ್ಯತೆಯ ಬಗ್ಗೆ ಭಿನ್ನಾಭಿಪ್ರಾಯದಿಂದಾಗಿ ಪೂ.ಜರ್ಮನಿಯ ಸರಕಾರ ಬಿದ್ದು ಹೋಗುವ ಸಂಭವವಿದೆ ದ .ಆಫ್ರಿಕಾದಲ್ಲಿ ಹಿಂಸಾಚಾರ ನಿಲ್ಲದೆ ಮುಂದುವರಿದಿದೆ.

ಇಬ್ಬರೂ ಅಧ್ಯಕ್ಷರುಗಳು 'ನೀನು ಸುಳ್ಳ' 'ನೀನು ಸುಳ್ಳ' ಎಂದು ಆರೋಪ ಮಾಡುವ ಹಂತಕ್ಕೆ ಕೊಲ್ಲಿಬಿಕ್ಕಟ್ಟು ಬಂದಿದೆ. ಕುವೈತ್ ಮೇಲೆ ಆಕ್ರಮಣ ಮಾಡುವುದಿಲ್ಲ ಎಂದು ಇರಾಕ್ ಅಧ್ಯಕ್ಷರು ಈಜಿಪ್ಟ್ ಅಧ್ಯಕ್ಷರಿಗೆ ಸುಳ್ಳು ಹೇಳಿದ್ದಾರೆ ಎಂದು ಅಮೇರಿಕ ಅಧ್ಯಕ್ಷ ಬುಶ್ ಹೇಳಿದರು. ಬುಶ್ ಹೇಳಿಕೆ ಸುಳ್ಳು ಎಂದು ಅಧ್ಯಕ್ಷ ಸಾದಮ್ ಮಾರುತ್ತರ. ಕೊಲ್ಲಿಯಿಂದ ಅಮೇರಿಕನ್ ಸೈನ್ಯ ಹೋಗುವಂತೆ ಮಾಡಲು, ಪರಿಸ್ಥಿತಿಯನ್ನು ಬಿಗಡಾಯಿಸದಂತೆ ತಡೆಯಲು, ಕುವೈತ್‌ನಿಂದ ಕಾಲ್ತೆಗೆ ಯುವದನ್ನು ಬಿಟ್ಟು ಉಳಿದೆಲ್ಲ ಪ್ರಯತ್ನಗಳನ್ನು ಇರಾಕ್ ಮಾಡುತ್ತಿದೆ. ಇಸ್ರೇಲ್ ಆಕ್ರಮಿತದೇಶಗಳನ್ನು ಬಿಟ್ಟು ಕೊಟ್ಟರೆ ತಾನೂ ಬಿಟ್ಟು ಕೊಡುತ್ತೇನೆ ಎಂಬ ಕರೆಕೆ ಇರಾಕ್ ಮುಂದಿಟ್ಟಿತು. ಸೌದಿ ಅರೇಬಿಯಾದ ಮೇಲೆ ಆಕ್ರಮಣ ಮಾಡುವುದಿಲ್ಲ ಎಂಬ ಒಪ್ಪಂದಕ್ಕೆ ಸಹಿ ಹಾಕಲು ಸಿದ್ಧ ಎಂಬ ಕೇಳಿಕೆಯನ್ನು ಸಹ ಮುಂದಿಡಲಾಯಿತು. ಇರಾನ್ ಜತೆ ಶಾಂತಿ ಒಪ್ಪಂದ ಮಾಡಿಕೊಂಡು, ಇರಾನ್‌ನ ಆಕ್ರಮಿತ ಪ್ರದೇಶಗಳನ್ನು ಬಿಟ್ಟುಕೊಡುವುದು, ಈರಾನಿ ಯುದ್ಧ ಬಂದಿಗಳನ್ನು ಬಿಡುಗಡೆ ಮಾಡುವುದು- ಇತ್ಯಾದಿ ಕ್ರಮಗಳನ್ನು ತೆಗೆದುಕೊಂಡು ಇರಾನ್-ಇರಾಕಿ ಗಡಿ ಪ್ರದೇಶದಿಂದ ಸೈನ್ಯ ವಾಪಾಸಾತಿ ಮಾಡಲಾಗುತ್ತಿದೆ. ಇದಲ್ಲದೆ ಇರಾಕ್-ಜೋರ್ಡಾನ್ ಜಂಟಿ ಶಾಂತಿ ಪ್ರಸ್ತಾಪ ಸಹ ಮುಂದಿಡಲಾಯಿತು. ಕುವೈತ್‌ನಿಂದ ಇರಾಕ್ ಸೈನ್ಯ ಮತ್ತು ಸೌದಿ ಅರೆಬಿಯಾ-ಕೊಲ್ಲಿಯಿಂದ ಅಮೇರಿಕನ್ ಸೈನ್ಯ ಒಂದೇ ಸಮಯದಲ್ಲಿ ವಾಪಾಸಾತಿ, ಕುವೈತ್‌ನ ಕೆಲವು ವಿವಾದ ಗ್ರಸ್ತ ಪ್ರದೇಶಗಳು ಇರಾಕ್‌ಗೆ 200 ವರ್ಷ ಭೋಗ್ಯಕ್ಕೆ ಕೊಡುವುದು, ಕುವೈತ್‌ನ ಆಡಳಿತ 'ಅಮೀರ'ರ ಬದಲು ಚುನಾವಣೆ ಮೂಲಕ ಸರಕಾರದ ಚುನಾವಣೆ-ಇವು ಆ ಶಾಂತಿ ಪ್ರಸ್ತಾಪದ ಮುಖ್ಯ ಅಂಶಗಳು. ಇವೆಲ್ಲ ವನ್ನು ಅಮೇರಿಕ ತಿರಸ್ಕರಿಸಿ, ತನ್ನ ಭಾರಿ ಸೈನ್ಯ ಜಮಾವಣೆ ಮುಂದುವರಿಸಿದೆ. ನೌಕಾಸೈನ್ಯದ ಮೂಲಕ ಇರಾಕ್‌ಗೆ ನೌಕಾದಿಗ್ಬಂಧನ ಜಾರಿಗೊಳಿಸಲು ಆರಂಭಿಸಿದೆ . ಕೊಲ್ಲಿಯಲ್ಲಿ ಓಡಾಡುವ ಹಡಗುಗಳು ಇರಾಕ್‌ಗೆ ಹೋಗುವವೇ ಎಂದು 'ತಪಾಸಣೆ' ಮಾಡುವ ಸ್ವ-ನಿಯಮಿತ 'ಕೊಲ್ಲಿ' ಪೋಲೀಸು' ಕೆಲಸ ಆರಂಭಿಸಿದೆ ಜೋರ್ಡಾನ್‌ನ ಅಕಾಬಾ ಬಂದರಿಗೂ ದಿಗ್ಬಂಧನ ವಿಸ್ತರಿಸುವುದಾಗಿ ಬೆದರಿಸಿದೆ ಅಕಾಬಾ ಬಂದರು ಮೂಲಕ ಇರಾಕಿಗೆ ಕೆಲವು ವಸ್ತುಗಳ ಪೂರೈಕೆ ಆಗುತ್ತಿದ ಎಂದು ಅದರ ಆರೋಪ.

ಈ ನಡುವೆ ಇರಾಕ್ ಕ್ರಮದ ಬಗ್ಗೆ ಅಂತರ್ರಾಷ್ಟ್ರೀಯ ಟೀಕೆ ಹೆಚ್ಚುತ್ತಿದೆ. ಆದರೆ ಅಮೇರಿಕನ್ ಏಕಪಕ್ಷೀಯ ಕ್ರಮದ ಬಗೆಗೂ ಅದೇ ಟೀಕೆ ವ್ಯಕ್ತವಾಗಿದೆ. ಆರ್ಥಿಕ ದಿಗ್ಬಂಧನ ವಿಧಿಸಲು ಮಿಲಿಟರಿ ಬಲದ ಪ್ರಯೋಗ ವಿಶ್ವಸಂಸ್ಥೆ ನಿಯಂತ್ರಣದಲ್ಲಿ ಇರಬೇಕು. ಅಮೇರಿಕನ್ ಕ್ರಮ ವಿಶ್ವಸಂಸ್ಥೆಯ ನಿಯಮಗಳ ಉಲ್ಲಂಘನೆ ಎಂದು ವಿಶ್ವಸಂಸ್ಥೆಯ ಮಹಾಕಾರ್ಯದರ್ಶಿ, ಭಾರತ, ಸೋವಿಯೆತ್ ಒಕ್ಕೂಟ, ಚೀಣಾ ಮತ್ತು ಇತರ ಹಲವು ದೇಶಗಳು ವ್ಯಕ್ತಪಡಿಸಿವೆ. ಇರಾಕ್ ಕ್ರಮವನ್ನು ಖಂಡಿಸಿರುವ ಅರಬ್ ದೇಶಗಳು ಸಹ ಸೌದಿ ಅರೇಬಿಯಾದ ರಕ್ಷಣೆಯನ್ನು ಅರಬ್ ಬಹುರಾಷ್ಟ್ರೀಯ ಪಡೆಗಳು ಮಾಡಬಲ್ಲವು ಎಂದು ಅಭಿಪ್ರಾಯಪಟ್ಟಿದೆ. ಸೌದಿ ಅರೇಬಿಯಾದ ಕೇಳಿಕೆಯ ಮೇಲೆ ಈವರೆಗೆ ಈಜಿಪ್ಟ್, ಮೊರೊಕ್ಕೊ, ಪಾಕಿಸ್ತಾನ, ಬಾಂಗ್ಲಾದೇಶಗಳು ಸೈನ್ಯ ಕಳಿಸಲು ಸಿದ್ಧತೆ ನಡೆಸಿವೆ. ಹಲವು ಅರಬ್ ದೇಶಗಳಲ್ಲಿ ಅಮೇರಿಕನ್-ವಿರೋಧಿ ಪ್ರದರ್ಶನಗಳು ಮುಂದುವರಿದಿದೆ. ಆಕ್ರಮಿತ ಪ್ಯಾಲಸ್ಟೀನ್‌ನಲ್ಲಿ ಹಲವು ಪ್ಯಾಲಸ್ಟೀನರು ಇರಾಕ್ ಮೇಲೆ ಅಮೇರಿಕ ಆಕ್ರಮಣ ಮಾಡಿದರೆ ತಾವು ಇರಾಕ್ ಪರ ಹೋರಾಡುವುದಾಗಿ ಪಣ ತೊಟ್ಟಿದ್ದಾರೆ.

ಕೊಲ್ಲಿಯಲ್ಲಿ ಯುದ್ಧವಾದರೆ, ಅಥವಾ ಈ ಬಿಕ್ಕಟ್ಟು ಹೇಗೆ ಮುಂದುವರಿದರೂ ಇಡೀ ಜಗತ್ತಿನಲ್ಲಿ ತೈಲ ಬಿಕ್ಕಟ್ಟು ತೀವ್ರವಾಗುವ ಸೂಚನೆಗಳು ಇವೆ. ಉದಾಹರಣೆಗೆ ಭಾರತದ ತೈಲ ಆಮದಿನ ಶೇಕಡಾ 50 ಕ್ಕಿಂತ ಸ್ವಲ್ಪ ಕಡಿಮೆ ಇರಾಕ್, ಕುವೈತ್ ಮತ್ತು ಕೊಲ್ಲಿದೇಶಗಳಿಂದ ಬರುತ್ತದೆ ಮತ್ತು ಕೇವಲ ಒಂದು ತಿಂಗಳ ದಾಸ್ತಾನು ಭಾರತದಲ್ಲಿದೆ. ಅಮೇರಿಕ ತೈಲ ಬೇಡಿಕೆಯ ಶೇಕಡಾ 41 ರಷ್ಟು, ಜಪಾನ್‌ಗೆ ಹೆಚ್ಚು ಕಡಿಮೆ ಸಂಪೂರ್ಣವಾಗಿ, ಫ್ರಾನ್ಸ್ ಶೇಕಡಾ 35 ರಷ್ಟು ಇಟಲಿಯ ಶೇಕಡಾ 32 ರಷ್ಟು ತೈಲ ಕೊಲ್ಲಿಯಿಂದ ಬರುತ್ತದೆ. ಆದರೆ ಈ ದೇಶಗಳಲ್ಲಿ 4 ರಿಂದ 6 ತಿಂಗಳ ದಾಸ್ತಾನು ಇದೆ. ಅಲ್ಲದೆ ಬೇರೆ ದೇಶಗಳಿಂದ ಮುಕ್ತ ಮಾರುಕಟ್ಟೆಯಲ್ಲಿ ಏರಿದ ಬೆಲೆಯಲ್ಲಿ ತೈಲಕೊಳ್ಳುವ ಸಾಮರ್ಥ್ಯ ಇದೆ. ಅಲ್ಲದೆ ಬೇರೆ ದೇಶಗಳಿಂದ ಮುಕ್ತ ಮಾರುಕಟ್ಟೆಯಲ್ಲಿ ಬೆಲೆ ಎರಡರಿಂದ ಮೂರುಪಟ್ಟು ಏರುವ ಸಾಧ್ಯತೆ ಇದೆ. ಮೂರನೆಯ ಜಗತ್ತಿನ ಹೆಚ್ಚಿನ ದೇಶಗಳು ಮಾತ್ರವಲ್ಲದೆ; ಕೆಲವು ಪೂರ್ವ ಯರೋಪಿನ ದೇಶಗಳು ಕೂಡಾ ತಮ್ಮ ಹೆಚ್ಚು ಕಡಿಮೆ ಎಲ್ಲಾ ವಿದೇಶಿ ವಿನಿಮಯವನ್ನು ತೈಲ ಆಮದಿಗೆ ಖರ್ಚು ಮಾಡಬೇಕಾಗಬಹುದು.

ಕೊಲ್ಲಿ ಬಿಕ್ಕಟ್ಟನ್ನು ಅಮೇರಿಕ ಕೊಲ್ಲಿಯಲ್ಲಿ ತನ್ನ ಮಿಲಿಟರಿ ಅಸ್ತಿತ್ವ ಪುನಃ ಸ್ಥಾಪಿಸಲು, ಅಮೇರಿಕನ್-ವಿರೋಧಿಗಳಿಗೆ 'ಬುದ್ಧಿಕಲಿಸುವ' ಸಂದರ್ಭ ಸಾಧಿಸಲು ಪ್ರಯತ್ನಿಸುತ್ತಿದೆ. ಇದು ಮುಂದುವರಿಯದಂತೆ ಮಾಡಲು ಇರಾಕ್ ಕುವೈತ್‌ನಿಂದ ಕಾಲ್ತೆಗೆಯುವುದು ಅತ್ಯಗತ್ಯ . ಇದಲ್ಲದೆ ಯಾವುದೇ ವಿವಾದ ಬಗೆಹರಿಸಲು ಮಿಲಿಟರಿ ಆಕ್ರಮಣ ನಡೆಸುವುದು ಸಾಧ್ಯ ಅಥವಾ ಸರಿ ಎಂದು 'ಯಾವುದೇ ದೇಶ ಒಪ್ಪಲು ಸಾಧ್ಯವಿಲ್ಲ. ಈ ಬಿಕ್ಕಟ್ಟು ಬಗೆಹರಿಸಲು ವಿಶ್ವಸಂಸ್ಥೆ ಮಹಾಕಾರ್ಯದರ್ಶಿ ಇಬ್ಬರು ಹಿರಿಯ ಅಧಿಕಾರಿಗಳನ್ನು ಕಳಿಸಿದ್ದಾರೆ. ಈ ನಡುವೆ ಇರಾಕ್ ಕುವೈತ್‌ನಲ್ಲಿರುವ 1.7ಲಕ್ಷ ಭಾರತೀಯರನ್ನು ಆ ದೇಶದಿಂದ ಹೊರಗೆ ತರುವ ಪ್ರಯತ್ನಗಳನ್ನು ಭಾರತ ಸರ್ಕಾರ ಮಾಡುತ್ತಿದೆ.

## ಕೊರಿಯಾದಲ್ಲಿ ವಿದ್ಯಾರ್ಥಿ ಪ್ರದರ್ಶನ

ಆಗಸ್ಟ್ 15 ಕೊರಿಯಾಕ್ಕೂ ಸ್ವಾತಂತ್ರ್ಯ ದಿನ. ಈ ದಿನ ಕೊರಿಯಾ ಏಕೀಕರಣ ರ‍್ಯಾಲಿಯನ್ನು ಸಂಘಟಿಸಲಾಗಿತ್ತು. ಆದರೆ ಇದರಲ್ಲಿ ಭಾಗವಹಿಸಲಿಚ್ಛಿಸುವ ದ.ಕೊರಿಯಾದ ಜನ ಅಲ್ಲಿನ ಸರ್ಕಾರದ ಪರವಾನಗಿ ಪಡೆಯಬೇಕಾಗಿತ್ತು. ಅದು ತನ್ನ ಭಟ್ಟಂಗಿಗಳಿಗೆ ಮಾತ್ರ ಈ ಪರವಾನಗಿ ನೀಡಿದೆ. ಈ ಕ್ರಮವನ್ನು ಧಿಕ್ಕರಿಸಿ, ಏಕೀಕರಣ ರ‍್ಯಾಲಿಯಲ್ಲಿ ಭಾಗವಹಿಸಲು ಸುಮಾರು 10 ಸಾವಿರಕ್ಕೂ ಹೆಚ್ಚು ಜನ ದ.ಕೊರಿಯಾ ರಾಜಧಾನಿಯೊನ್ಸೈ ವಿಶ್ವವಿದ್ಯಾಲಯದಲ್ಲಿ ಸೇರಿದ್ದರು. ಅಲ್ಲಿಂದ 56ಕಿ.ಮೀ. ದೂರ ಇರುವ ಗಡಿ ಪ್ರದೇಶಕ್ಕೆ ಜಾಥಾ ಹೊರಟಾಗ, ದಂಗೆ ಪೋಲೀಸರು ಅವರನ್ನು ತಡೆದಾಗ ಹಿಂಸಾತ್ಮಕ ಗಲಭೆಗಳು ನಡೆದವು. ಪೋಲೀಸರು ಅತ್ಯಂತ ಭೀಕರ ಹಿಂಸೆಯನ್ನು ಬಳಸಿದರು. ಪ್ರದರ್ಶನಕಾರರನ್ನು ಹೋಗದಂತೆ ತಡೆಯಲು. ಕೆಲವು ಗಂಟೆಗಳ ಕಾಲ ಈ ಘರ್ಷಣೆ ನಡೆಯಿತು. ಪ್ರದರ್ಶನಕಾರರು ಕೊರಿಯಾದ ಏಕೀಕರಣಕ್ಕೆ ತಡೆಯಾಗಿರುವ, ದ.ಕೊರಿಯಾದಲ್ಲಿ ಬಿಡಾರ ಹೂಡಿರುವ ಸುಮಾರು 43 ಸಾವಿರ ಅಮೇರಿಕನ್ ಸೈನ್ಯ ವಾಪಾಸಾಗಬೇಕೆಂದು ಘೋಷಣೆಗಳನ್ನು ಹಾಕಿದರು.




## ಪೂ. ಜರ್ಮನ್ ಸರ್ಕಾರಿ ಬಿಕ್ಕಟ್ಟು

ಪೂರ್ವಜರ್ಮನ್ ಸಮ್ಮಿಶ್ರ ಸರ್ಕಾರದ ಸೋಶಿಯಲ್ ಡೆಮಾಕ್ರಾಟ್ ಪಕ್ಷಕ್ಕೆ ಸೇರಿದ ಎರಡು ಮಂತ್ರಿಗಳನ್ನು ಪ್ರಧಾನಮಂತ್ರಿಗಳು ವಜಾ ಮಾಡಿದ ಹಿನ್ನೆಲೆಯಲ್ಲಿ ಮಂತ್ರಿಮಂಡಲದಲ್ಲಿ ತೀವ್ರ ಬಿಕ್ಕಟ್ಟು ಆರಂಭವಾಗಿದೆ. ಈ ಹಿನ್ನೆಲೆಯಲ್ಲಿ ಸಮ್ಮಿಶ್ರ ಸರಕಾರಕ್ಕೆ ತನ್ನ ಬೆಂಬಲ ವಾಪಸು ಪಡೆಯಲು ಸೋಶಿಯಲ್ ಡೆಮಾಕ್ರಟ್ ಪಕ್ಷ ನಿರ್ಧರಿಸಿದೆ. ಇದು ಜರ್ಮನ್ ಐಕ್ಯತೆ ಬಗ್ಗೆ ಎರಡು ದೇಶಗಳ ಪಾರ್ಲಿಮೆಂಟಿನಲ್ಲಿ ಬರುವ ಸೂಚನೆ ಬಿದ್ದು ಹೋಗುವ ಸಾಧ್ಯತೆಗೆ ಎಡೆಮಾಡಿಕೊಡುತ್ತದೆ. (ಎರಡೂ ಜರ್ಮನಿಗಳಲ್ಲಿ) ಸೋಶಿಯಲ್ ಡೆಮಾಕ್ರಟ್ ಪಕ್ಷದ ಬೆಂಬಲವಿಲ್ಲದೆ ಬಹುಮತ ಪಡೆಯಲು ಸಾಧ್ಯವಿಲ್ಲ.

## ದ.ಆಫ್ರಿಕಾದಲ್ಲಿ ಹಿಂಸಾಚಾರ

ದ.ಆಫ್ರಿಕಾದ ಸರ್ಕಾರ ಮತ್ತು ANC ನಡುವೆ ಸಶಸ್ತ್ರ ಹೋರಾಟದ ಸ್ಥಗಿತ ಒಪ್ಪಂದವಾಗುತ್ತಿದಂತೆ ANC ಮತ್ತು ಅದರ ವಿರೋಧಿ ಕರಿಯ-ಬಿಳಿಯರ ಹಿಂಸಾಚಾರ ವಿಪರೀತವಾಗಿ ಹೆಚ್ಚುತ್ತಿದೆ. ವರ್ಣಭೇದ ಕೊನೆಗೊಳ್ಳುವ ಸಂವೈಧಾನಿಕ ಬದಲಾವಣೆಗಳನ್ನು ಮಾಡುವತ್ತ ಶಾಂತಿಯುತ ಪ್ರಯತ್ನಗಳು ಅವರಿಗೆ ಬೇಕಿಲ್ಲ. ಈ ಕರಿಯರ ಗುಂಪುಗಳು ದ.ಆಫ್ರಿಕಾದ ವರ್ಣಭೇದ ಸರ್ಕಾರ ANC ವಿರುದ್ಧ ಹುಟ್ಟುಹಾಕಿದ ಕರಿಯ ಬಣ್ಣದ ಮುಖ್ಯಸ್ಥರಿಗೆ ನಿಷ್ಠವಾದ ಗುಂಪುಗಳು.ಇದರಲ್ಲಿ ಮುಖ್ಯವಾದದ್ದು ಜುಲು ಬಣದ 'ಇಂಕಾತಾ' ಎನ್ನುವ ಗುಂಪು. ಈ ಹಿಂಸಾಚಾರ ಪೋಲೀಸರು ಜೊತೆ ಸೇರಿ ANC ಕಾರ್ಯಕರ್ತರನ್ನು ಮುಗಿಸಲು ಹೂಡಿರುವ 'ಇಂಕಾತಾ' ಸಂಚು ಎಂದು ನೆಲ್ಸನ್ ಮಂಡೇಲಾ ಹೇಳಿದ್ದಾರೆ. ಕಳೆದ ಆರು ತಿಂಗಳಲ್ಲಿ ಸುಮಾರು 1600 ಜನ ಈ ಗಲಭೆಯಲ್ಲಿ ಸತ್ತಿದ್ದಾರೆ. ತುರ್ತುಪರಿಸ್ಥಿತಿ ಕೊನೆಗೊಳಿಸದಿರಲು ಈ ಗಲಭೆಗಳನ್ನು ನೆವವಾಗಿ ಉಪಯೋಗಿಸುತ್ತಿತ್ತು ಸರ್ಕಾರ .ಹಿಂದೆ. ಈ ಗಲಭೆಗಳನ್ನು ಸಾಮ್ರಾಜ್ಯಶಾಹಿ ಸುದ್ದಿ ಸಂಸ್ಥೆಗಳು ಕರಿಯರು ರಾಜ್ಯವಾಳಲಾರು. ಕರಿಯ-ಕರಿಯ ವೈರುಧ್ಯಗಳು ಶಾಂತಿಯುತ ಬದಲಾವಣೆಗೆ ಅಡ್ಡಿ ಎಂದು ಬಿಂಬಿಸಲು ಉಪಯೋಗಿಸುತ್ತಿವೆ.

## ಭಿನ್ನಮತೀಯರಿಗೆ ಸೋವಿಯೆತ್ ನಾಗರಿಕತ್ವ ವಾಪಾಸ್

1966 ರಿಂದ 1988 ಅವಧಿಯಲ್ಲಿ ಸೋವಿಯೆತ್ ನಾಗರಿಕತ್ವ ಕಳೆದುಕೊಂಡ ಭಿನ್ನಮತೀಯರು ಮತ್ತು ಆ ಕಾರಣ ದೇಶಬಿಟ್ಟು ಹೋದ ಸೋವಿಯತ್ ನಾಗರಿಕರಿಗೆ, ನಾಗರಿಕತ್ವ ವಾಪಾಸು ನೀಡಲು ಸೋವಿಯೆತ್ ಸರ್ಕಾರ ನಿರ್ಧರಿಸಿದೆ. ಈ ಬಗ್ಗೆ ಸೋವಿಯೆತ್ ಅಧ್ಯಕ್ಷ ಗೊರ್ಬಚೆವ್ ಆಜ್ಞೆ ಹೊರಡಿಸಿದ್ದಾರೆ. ಈ ರೀತಿ ಸೋವಿಯೆತ್ ನಾಗರಿಕತ್ವ ವಾಪಾಸು ಪಡೆಯುವ ಭಿನ್ನಮತೀಯರಲ್ಲಿ ಅಲೆಗ್ಸಾಂಡರ್ ಸೊಲ್ಜೆನಿತ್ಸಿನ್ ಸಹ ಇದ್ದಾರೆ.

### ಅಮೆರಿಕೆಯಲ್ಲಿ ತಯಾರಾಯಿತು ಜಪಾನಿನಲ್ಲಿ ಪರೀಕ್ಷಿಸಲ್ಪಟ್ಟಿತು ಈಗ ! ಫಿಲಿಪೈನ್ಸಿನಲ್ಲಿದೆ

ಮಾನವ ಅಸ್ಥಿಪಂಜರಗಳ ವೇಷ ತೊಟ್ಟ ಪರಮಾಣು ಶಸ್ತ್ರ ವಿರೋಧಿಗಳು, ಫಿಲಿಪೈನ್ಸಿನಲ್ಲಿ ಅಮೆರಿಕನ್ ನೆಲೆಗಳನ್ನು ವಿರೋಧಿಸುವವರು ರಾಜಧಾನಿ ಮನಿಲಾದಲ್ಲಿ ಹಿರೋಶಿಮಾ ದಿನದಂದು ತಮ್ಮ ನಗರದಲ್ಲಿರುವ ಎರಡು ಅತ್ಯಂತ ದೊಡ್ಡ ಅಮೆರಿಕನ್ ನೆಲೆಗಳಲ್ಲಿ ಪರಮಾಣು ಶಸ್ತ್ರಾಸ್ತ್ರಗಳನ್ನು ಶೇಖರಿಸಿಟ್ಟಿರುವುದರ ವಿರುದ್ಧ ಮುತ್ತಿಗೆ/ಪ್ರದರ್ಶನ ನಡೆಸಿದರು. ಶಸ್ತ್ರಾಸ್ತ್ರ 'ಅಮೆರಿಕನ್ [illegible]'ದ್ದಾಗಿ [illegible] ಅದರ ಭಾರ ಅಪಾಯ ಹೊರಬೇಕಾದವರು ಫಿಲಿಪೈನ್ಸಿಗರು!

KRNM/BG 312 MAG (2) PRB DECR 319-78/79

# ಕಮ್ಯುನಿಸ್ಟ್ ಚಳುವಳಿ ನನ್ನನ್ನು ಸೆಳೆದ ಬಗೆ

ಪುಟ 5 ರಿಂದ

ಮ್ಯಾನೇಜರ್. ಅವರು ಹೇಳಿದ್ದು ನಿಜವಾಯಿತು. ನನ್ನ ವಿರುದ್ಧ ಒಂದು ಸುಳ್ಳು ದೂರು ಸೃಷ್ಟಿಸಿ ನನ್ನನ್ನು ವಜಾ ಮಾಡಲಾಯಿತು.

## ಅಮಾನತ್ತಿನಲ್ಲಿದ್ದಾಗ

ನಾನು ಸಸ್ಪೆನ್‌ಶನ್ ಅವಧಿಯನ್ನು ಪ್ರಯೋಜನಕಾರಿಯಾಗಿ ಬಳಸಿದೆ. ಆದರೆ ನಾನು ಹಲವು ದಿಕ್ಕುಗಳಲ್ಲಿ ಸೆಳೆಯಲ್ಪಟ್ಟೆ. ಇಂಜಿನಿಯರಿಂಗ್, ವಿಜ್ಞಾನ, ತಂತ್ರಜ್ಞಾನದಲ್ಲಿ ಮುನ್ನಡೆಯುವ ಆಕಾಂಕ್ಷೆ ನನಗಿನ್ನೂ ಇತ್ತು. ದಿನವೆಲ್ಲಾ ಭಾರತೀಯ ವಿಜ್ಞಾನ ಸಂಸ್ಥೆ, ವಿಶ್ವೇಶ್ವರಯ್ಯ ತಾಂತ್ರಿಕ ವಸ್ತು ಸಂಗ್ರಹಾಲಯದಲ್ಲಿ ಭಾಷಣಗಳನ್ನು ಕೇಳುವುದರಲ್ಲಿ, ಸ್ಲೈಡ್ ಶೋ ನೋಡುವುದರಲ್ಲಿ, ತಾಂತ್ರಿಕ ಸಾಹಿತ್ಯ ಓದುವುದರಲ್ಲಿ ಕಳೆಯುತ್ತಿದ್ದೆ. ಸಾಯಂಕಾಲ ನನ್ನ ಸುತ್ತ ಸೇರಿಕೊಂಡಿದ್ದ ಬಿ.ಇ.ಎಲ್. ಕಾರ್ಮಿಕರ ಒಂದು ಗುಂಪಿಗೆ ದ್ವಂದ್ವಮಾನ ಮತ್ತು ಚಾರಿತ್ರಿಕ ಭೌತವಾದದ ಶಿಕ್ಷಕ ಮತ್ತು ವಿದ್ಯಾರ್ಥಿ ಆಗಿರುತ್ತಿದ್ದೆ. ನಾನೇ ದ್ವಂದ್ವಮಾನ ಎಂದರೇನೆಂದು ಕಲಿಯುತ್ತಿದ್ದೆ. ಅದನ್ನೇ ಕಲಿಸುತ್ತಿದ್ದೆ. ಈ ಸಂಗಾತಿಗಳ ಗುಂಪು ಒಂದು ಶಾಲೆಯಾಗಿ ಬೆಳೆಯಿತು. ಅದರಲ್ಲಿ ನಾನೂ ಬೆಳೆದೆ. ಮುನ್ನಡೆದೆ.

ನನ್ನೊಂದಿಗೆ ಸಸ್ಪೆಂಡ್ ಆಗಿ ಮತ್ತೆ ತಗೊಳ್ಳಲ್ಪಟ್ಟ ಇನ್ನೊಬ್ಬ ಕಾರ್ಮಿಕ ನನ್ನ ಆಪ್ತ ಸಂಗಾತಿ. ಆತನ ಹೆಸರು ಜೇಕಬ್ ಅಬ್ರಹಾಂ. ಸಸ್ಪೆಂಡ್ ಆದ ಇನ್ನೊಬ್ಬ ಕಾರ್ಮಿಕ ಹಾಗೂ ಆಗಲೇ ಸಿ.ಪಿ.ಐ. ಮುಖಂಡನಾಗಿದ್ದ ಗೋಪಿಯೊಡನೆ ಜೇಕಬ್ ಬಿಸಿ ಬಿಸಿ ಚರ್ಚೆ ನಡೆಸುವುದನ್ನು ನಾನು ನೋಡಿದ್ದೆ. ಪಕ್ಷದ ವಿಭಜನೆ ಬಗ್ಗೆ ಅವರ ವಾದ-ವಿವಾದಗಳ ತಲೆಬುಡ ನನಗೆ ಅರ್ಥವಾಗುತ್ತಿರಲಿಲ್ಲ. ಅಸ್ಪಷ್ಟವಾಗಿ ನಾನು ಮಾರ್ಕ್ಸವಾದದತ್ತ ಆಕರ್ಷಿತನಾಗಿದ್ದೆ. ಆದರೆ ಕಾರ್ಯದಲ್ಲಿ ಕಾರ್ಮಿಕ ಸಂಘದ ಚಟುವಟಿಕೆಯೇ ನನಗೆ ಎಲ್ಲವೂ ಆಗಿತ್ತು. ಈ ಇಬ್ಬರು ಏಕೆ ಜಗಳಾಡುತ್ತಿದ್ದರು ಎಂದು ನನಗೆ 'ಅರ್ಥವಾಗುತ್ತಿರಲಿಲ್ಲ. ಜೇಕಬ್‌ಗೆ ಇದೊಂದು ಆಶ್ಚರ್ಯದ ಸಂಗತಿಯಾಗಿತ್ತು- ದ್ವಂದ್ವಮಾನ ಭೌತವಾದದ ಬಗ್ಗೆ ಚರ್ಚಿಸಬಲ್ಲವ ಹಾಗೂ ಮ್ಯಾನೇಜ್‌ಮೆಂಟಿನಿಂದ ಬಲಿಗೊಂಡಿರುವನೊಬ್ಬ ಕಮ್ಯುನಿಸ್ಟ್ ಪಕ್ಷದಲ್ಲಿ ಎಡ-ಬಲ ತಪ್ಪುಗಳನ್ನು ಏಕೆ ಅರ್ಥಮಾಡಿಕೊಳ್ಳಲಾರ ಎಂದು. ಈ ಬಗ್ಗೆ ನನಗೆ ಮನವರಿಕೆ ಮಾಡುವುದೂ ಆತನಿಗಾಗಲಿಲ್ಲ.

## ಪಿ.ಆರ್. ಭೇಟಿ

ಆಗಲೇ ಸಿ.ಪಿ.ಐ. (ಎಂ) ಜತೆಗೆ ಸಂಪರ್ಕ ಹೊಂದಿದ್ದ ಜೇಕಬ್ ನನ್ನನ್ನು ಸಾರ್ವಜನಿಕ ವಲಯದ ಕಾರ್ಮಿಕರ ಅಂತರಂಗ ಸಭೆಯೊಂದಕ್ಕೆ ಕರೆದೊಯ್ದರು. ಕಾಮ್ರೇಡ್ ಪಿ. ರಾಮಮೂರ್ತಿ ಕಾರ್ಮಿಕರನ್ನುದ್ದೇಶಿಸಿ ಮಾತನಾಡಿದರು. ಕಾರ್ಮಿಕ ರಂಗದಲ್ಲಿ ಕೆಲಸ ಮಾಡಬೇಕೆಂಬ ಪಿ.ಆರ್ ಸಲಹೆ ನನ್ನ ಮೇಲೆ ಆಳವಾದ ಪ್ರಭಾವ ಬೀರಿತು. ಆದರೆ ಆಗಲೂ ಸಿ.ಪಿ.ಐ. ಸಿ.ಪಿ.ಐ(ಎಂ) ಭಿನ್ನಾಭಿಪ್ರಾಯ ನನಗೆ ಅರ್ಥವಾಗಿರಲಿಲ್ಲ

## ಸಾಂಸ್ಕೃತಿಕ ಕೆಲಸ

ಬೆಂಗಳೂರಿನ ಮಲೆಯಾಳಿಗಳ ಒಂದು ಕೇಂದ್ರ ಸಾಂಸ್ಕೃತಿಕ ಸಂಘಟನೆಯಿತ್ತು. – ಸಿ.ಸಿ.ಐ. ಅದೊಂದು 'ಸಂಸ್ಕಾರಂ' ಎಂಬ ಹೆಸರಿನ ಮಾಸಿಕವನ್ನು ಪ್ರಕಟಿಸುತ್ತಿತ್ತು. ಅವರಿಗೆ ಪಕ್ಷದೊಡನೆ ಸಂಪರ್ಕವಿತ್ತು.ಹೆಚ್.ಎ.ಎಲ್.ನ ಉಣ್ಣಿಕೃಷ್ಣನ್ ಎಂಬಾತ ಆಗ ಬೆಂಗಳೂರು ಜಿಲ್ಲಾ ಸಮಿತಿಯಲ್ಲಿದ್ದರು. ಅವರೊಡನೆ ಕೆಲಸ ಮಾಡಲು ನನ್ನನ್ನು ಈ ಸಂಘಟನೆಯವರು ಕರೆಯಲಾರಂಭಿಸಿದರು. ಅವರ ಚಟುವಟಿಕೆಗಳಲ್ಲಿ ಭಾಗವಹಿಸಿದೆ. ಆದರೆ ಅವರು ಸದಾ ಪಕ್ಷದ, ಟ್ರೇಡ್ ಯೂನಿಯನ್ ಚಟುವಟಿಕೆಯ ಮುಖ್ಯ ಪ್ರವಾಹದಿಂದ ದೂರವಿರಲು ಪ್ರಯತ್ನಿಸುತ್ತಿದ್ದಾರೆ ಎಂದೇ ನನಗನಿಸುತ್ತಿತ್ತು. ಆದರೆ ಈ ಸಂಗಾತಿಗಳೊಂದಿಗೆ ನನ್ನ ಒಡನಾಟ ನನ್ನನ್ನು ಎ.ಕೆ.ಜಿ. ಇ.ಎಂ.ಎಸ್. ಮತ್ತು ಅಳಿಕ್ಕೋಡನ್ ರಾಘವನ್‌ರತ್ತ ಬಗೆ ಒಯ್ದಿತ್ತು. ಯಾಕೆಂದರೆ ಇವರು ಮೂವರು ಅವರ ಹೀರೋಗಳಾಗಿದ್ದರು. ಅವರಿಂದ ನನಗೆ 'ದೇಶಾಭಿಮಾನಿ' ಮತ್ತು 'ಚಿಂತಾ' ಪತ್ರಿಕೆಗಳ ಪರಿಚಯವೂ ಆಯಿತು. ಇದು ನನ್ನ ರಾಜಕೀಯ ಬೆಳವಣಿಗೆಯಲ್ಲಿ ಬಹಳ ಪ್ರಭಾವ ಬೀರಿತು. ಅವರೊಂದಿಗೆ ನನ್ನ ಒಡನಾಟದ ಅವಧಿಯ ನೆನಪುಗಳೆಲ್ಲಾ ಮುಖ್ಯವಾಗಿ ಎ.ಕೆ.ಜಿ.ಯೊಂದಿಗೆ ನಾನು ಬೆಳೆಸಿಕೊಂಡ ಆಪ್ತತೆ (ಕ್ರಮೇಣ ಅದೊಂದು ಗೀಳೇ ಆಗಿ ಬಿಟ್ಟಿತ್ತು.) ಚಿರಸ್ಮರಣೀಯ 1967 ರಲ್ಲಿ ಎ.ಕೆ. ಜಿ.ಯವರ ಭೇಟಿಯ ವೇಳೆಗೆ ನಾನು ವಜಾಗೊಂಡ ನೌಕರನಾಗಿದ್ದೆ.

## ವ್ಯಾಪಾರಿಯಾಗಿ ತುಸು ಸಮಯ

ನಾನು ವಜಾ ಆದಾಗ ನನ್ನ ಹೆಂಡತಿ, ಮಗು, ತಮ್ಮ ಪಾಲಕರನ್ನು ಕಳಕೊಂಡದ್ದರಿಂದ ಶಿಕ್ಷಣ ಕೊಡಿಸಲಿಕ್ಕಾಗಿ ಬೆಂಗಳೂರಿಗೆ ನಾವು ಕರೆತಂದಿದ್ದ ನನ್ನ ಹೆಂಡತಿಯ ಇಬ್ಬರು ತಂಗಿಯರು. ತಮ್ಮ- ಇಷ್ಟು ದೊಡ್ಡ ಸಂಸಾರದ ಪೋಷಣೆ ನಡೆಸಬೇಕಾಗಿತ್ತು. ಇನ್ನೂ ಬಿ.ಇ.ಎಲ್. ಕಾರ್ಮಿಕಳಾಗಿದ್ದ ನನ್ನ ಹೆಂಡತಿಯ ಸಂಬಳ ಬಹಳ ಕಮ್ಮಿ. ಆದ್ದರಿಂದ ಬಿ.ಇ.ಎಲ್. ಮಾರ್ಕೆಟ್‌ನಲ್ಲಿ ಒಂದು ಅಂಗಡಿ ತೆರೆದು ನನ್ನ 'ಜೀವಮಾನದ ಉಳಿತಾಯವನ್ನೆಲ್ಲಾ ಸುರಿದೆ. ವಿಶಾಲ ಮನೋಭಾವನೆಯ ವ್ಯಕ್ತಿಯೊಬ್ಬನಿಗೆ ವ್ಯಾಪಾರಚಾತುರ್ಯದಲ್ಲಿನ ಅಸಮರ್ಥತೆ ಮತ್ತು ನಮ್ಮ ದೊಡ್ಡ ಹೊರೆಗಳಿಂದಾಗಿ ವ್ಯಾಪಾರದಿಂದ ನಮಗೆ ಪ್ರಯೋಜನವಾಗುವ ಬದಲು ನಷ್ಟವೇ ಆಯಿತು. ನಂತರ ನ್ಯೂಸ್‌ಪೇಪರ್ ಏಜೆಂಟನಾಗಿ ದಿನವಿಡೀ ನೂರುಕಿಲೋ ಮೀಟರುಗಳಿಗೂ ಹೆಚ್ಚು ಸೈಕಲ್ ತುಳಿಯಲಾರಂಭಿಸಿದೆ. ತಂಗಿಯರನ್ನು ಸೇನೆಯಲ್ಲಿ ನರ್ಸಿಂಗ್ ಆಫೀಸರ್ ಆಗಿ ಜವಾಬ್ದಾರಿ ಸ್ಥಾನಗಳಲ್ಲಿ ಸೇರಿಸುವಲ್ಲಷ್ಟೇ ಯಶಸ್ವಿಯಾದೆವು. ಆ ಹೊತ್ತಿಗೆ ವ್ಯಾಪಾರ ಕುಂಠಿ ತಗೊಂಡಿತು. ಮತ್ತೆ ನಾನು ಟೈಪಿಸ್ಟ್ ಆದೆ. ಈ ಬಾರಿ ಯೂನಿಯನ್ ಆಫೀಸಿನಲ್ಲಿ ಕೇವಲ ಮಾಸಿಕ 100 ರೂ.ಗಳ ಅಲ್ಪ ಸಂಭಾವನೆಗೆ. ಆದರೆ 1969 ರಲ್ಲಿ ಈ ನೂರು ರೂಪಾಯಿ ಐದು ಜನರ ಕುಟುಂಬಕ್ಕೆ ತಿಂಗಳ ಜೀನಸು ಸಾಮಗ್ರಿಗಳಿಗೆ ಸಾಕಷ್ಟಾಗಿತ್ತು.

ಬಿ.ಇ.ಇ.ಯು. (ಭಾರತ್ ಎಲೆಕ್ಟ್ರಾನಿಕ್ ನೌಕರರ ಸಂಘ) ನ ಪೂರ್ಣಕಾಲದ ಕಾರ್ಯಕರ್ತನಾಗಿ ಮತ್ತೆ ಕಾರ್ಮಿಕ ರಂಗದಲ್ಲಿ ಸಕ್ರಿಯನಾದೆ. ಸ್ವಲ್ಪ ಸಮಯದಲ್ಲೇ ಯೂನಿಯನ್‌ನ ಮೇಲೆ ಸುಮಾರಾಗಿ ಪೂರ್ಣ ಹತೋಟಿ ಪಡೆದೆ. ಆ ವೇಳೆಗಾಗಲೇ ಪಕ್ಷದೊಡನೆ ನಿಕಟ ಸಂಪರ್ಕ ಹೊಂದಿದ್ದೆ.

## ನಕ್ಸಲ್‌ವಾದದೊಂದಿಗೆ ಒಡನಾಟ

ಜನವರಿ 1967 ರಲ್ಲಿ ವಜಾ ಆದಾಗ ನಾನು ಆಗ 'ನವಕರ್ನಾಟಕ' ದಲ್ಲಿದ್ದ ಆರ್.ವಿ.ರಾಮನ್‌ರೊಂದಿಗೆ ಸಂಪರ್ಕ ಹೊಂದಿದ-ಮೇಲೆ ಹೇಳಿದ ಕೇಂದ್ರ ಸಾಂಸ್ಕೃತಿಕ ಸಂಘದ (ಸಿ.ಸಿ.ಎ.) ಮೂಲಕ. ಅವರು ನನ್ನನ್ನು ಸಾಂಸ್ಕೃತಿಕ ಚಟುವಟಿಕೆಗಳಿಗೆ ಪಕ್ಷಕ್ಕೆ ಮತ್ತು ನಕ್ಸಲ್‌ವಾದದತ್ತ ಕೂಡಾ ಕರೆದೊಯ್ದರು. 1967 ರಲ್ಲಿ ಪಕ್ಷದೊಳಗೇ ನಕ್ಸಲ್‌ವಾದೀ ವಿಚಾರಗಳು ಬೆಳೆಯಿತು. ರಾಮನ್ ಅಂತವರಲೊಬ್ಬರು ನಕ್ಸಲೈಟ್ ಪತ್ರಿಕೆ ಲಿಬರೇಶನ್‌ನ ನಿಯಮಿತ ಚಂದಾದಾರನಾಗಿದ್ದೆ. ಅದು ಲೆನಿನ್ ಹೇಳಿರುವಂತೆ ಒಂದು ಬಾಲಗ್ರಹ ಪೀಡೆಯಾಗಿತ್ತು ಕಾಲಾದ ಅವ್ಯವಸ್ಥೆಯಾಗಿತ್ತು. ಕಮ್ಯುನಿಸ್ಟ್ ರಾಜಕಾರಣದಲ್ಲಿನ್ನೂ ಬಾಲ್ಯಾವಸ್ಥೆಯಲ್ಲಿದ್ದುದರಿಂದ ಸಹಜವಾಗಿಯೇ ಬಾಲಿಶತನ ನನಗೂ ತಗಲಿತ್ತು. ಆಗ ನಕ್ಸಲೈಟ್ ಎಂಬ ಕಾರಣಕ್ಕೆ ಸಿ.ಪಿ.ಐ. (ಎಂ) ಅಮಾನತು ಮಾಡಿದ್ದ ಎಂ.ಎಲ್.ಎ. ಕೊರಾಲಾ ರಾಮದಾಸ್ ಎಂಬವರೊಡನೆ ಸಂಪರ್ಕ ಹೊಂದುವ ಸಾಹಸಮಾಡಿದ್ದ ಒಡನಾಡಿಗಳೂ ಕೆಲವರಿದ್ದರು.

ಸಿ.ಸಿ.ಎ. ಸಂಗಾತಿಗಳು ನನ್ನನ್ನು 1968 ರಲ್ಲಿ ಆಗ ಬೆಂಗಳೂರು ಜಿಲ್ಲಾ ಕಾರ್ಯದರ್ಶಿಯಾಗಿ ನೇಮಕವಾಗಿದ್ದ ಬಿ.ಎನ್.ಕುಟ್ಟಪ್ಪರ ಬಳಿ ಒಯ್ದರು. ಅವರೊಂದಿಗೆ ನನ್ನ ಮೊದಲ ಭೇಟಿ ಇನ್ನೂ ಚೆನ್ನಾಗಿ ನೆನಪಿದೆ. ಬಿ.ಎನ್. ಎಷ್ಟೊಂದು ಶಾಂತ ವ್ಯಕ್ತಿಯೆಂದರೆ ಚಲಿಸುವಂತೆಯೇ ಕಾಣುತ್ತಿರಲಿಲ್ಲ. ಆದರೆ ಚಲಿಸಿದರೆಂದರೆ, ಅದೂ ಸಾಮಾನ್ಯವಾಗಿ ಗುಪ್ತವಾಗಿಯೇ, ನಿರ್ಣಾಯಕವಾಗಿ ಚಲಿಸುತ್ತಿದ್ದರು. ಆಗ ನನ್ನ ತಿಳುವಳಿಕೆಯ ಪ್ರಕಾರ "ನವ-ಪರಿಷ್ಕರಣವಾದಿಗಳಾಗಿದ್ದ" ಸಿ.ಪಿ.ಐ.(ಎಂ) ವಿರುದ್ಧ ನಾನು ಬಹಳ ಧಿಮಾಕಿನಿಂದ ಮಾತಾಡುತ್ತಿದ್ದೆ. ಆದರೆ ಇದು ಮುಕ್ತ ಚರ್ಚೆ ನಡೆಸೋಣ ಎಂಬ ಬಿ.ಎನ್.ರವರ ಆಹ್ವಾನ ಸ್ವೀಕರಿಸುವಲ್ಲಿ ಅಥವಾ ಪರಸ್ಪರ ನಿಲುವನ್ನು ಸ್ವೀಕರಿಸುವಲ್ಲಿ ಅಡ್ಡಿಯಾಗಲಿಲ್ಲ. ಬಿ.ಇ.ಇ.ಯು. ನಲ್ಲಿ ಅವರೊಡನೆ ಸಂಪರ್ಕ ಇರುವವರೊಡನೆ ಕಾರ್ಮಿಕರಿಗೆ ಪ್ರಯೋಜನವಾಗುವ ಮಟ್ಟದವರೆಗೆ ಕೆಲಸ ಮಾಡುವ ಅವರ ಆಹ್ವಾನವನ್ನು ನಾನು ಸ್ವೀಕರಿಸಿದೆ. ಅವರೊಡನೆ ನನ್ನ ಸಹಯೋಗ ಕ್ರಮೇಣ ನನ್ನನ್ನು ಪಕ್ಷದತ್ತ ಸೆಳೆಯಿತು-ಕಬ್ಬಿಣದ ತುಂಡನ್ನು ಆಯಸ್ಕಾಂತ ಸೆಳೆಯುವಂತೆ. ನನ್ನನ್ನು ಒಬ್ಬ ಕಮ್ಯುನಿಸ್ಟನಾಗಿ ರೂಪಿಸಿದ ಯಶಸ್ಸು ಯಾರಾದರೂ ಒಬ್ಬ ವ್ಯಕ್ತಿಗೆ ಸಲ್ಲುವುದಾದರೆ ಅದು ಬಿ.ಎನ್.ಕುಟ್ಟಪ್ಪರಿಗಲ್ಲದೆ ಬೇರೆಯವರಿಗಲ್ಲ. ಅವರನ್ನು ನಂತರ ತೀವ್ರಗಾಮಿಯೆಂಬುದಕ್ಕೆ ಪಕ್ಷದಿಂದ ಉಚ್ಚಾಟಿಸಿದರೂ, ಅದರಲ್ಲಿ ನಾನೂ ಒಂದು ಮಹತ್ವದ, ಆದರೆ ನೋವಿನ ಪಾತ್ರ ವಹಿಸಿದ್ದರೂ ಅವರನ್ನು ನಾನಿನ್ನೂ ಗೌರವಿಸುತ್ತೇನೆ. ಪರಸ್ಪರರ ಅಭಿಪ್ರಾಯಗಳನ್ನು ಸ್ವೀಕರಿಸಿದ ಈ ರೀತಿ ಎಂತಹ ವಿಪರ್ಯಾಸ!

## ಪಕ್ಷದತ್ತ

ಎ.ಐ.ಟಿ.ಯು.ಸಿ. ನಿಯಂತ್ರಣದ ಸಂಘದಲ್ಲಿ ಕೆಲಸ ಮಾಡುತ್ತಿದಂತೆಯೇ ನಾನು ಅವರ ಪ್ರಜಾಪ್ರಭುತ್ವ ವಿರೋಧಿ ನಿರ್ವಹಣೆಯ ಬಗ್ಗೆ ಬಹಳ ವಿಮರ್ಶಾತ್ಮಕ ನಿಲುವು ತಳೆದೆ. ಇದು ನನ್ನನ್ನು ಬಿ.ಎನ್.ಕುಟ್ಟಪ್ಪನ್ನರ ಮತ್ತು ಸಿ.ಪಿ.ಐ. (ಎಂ) ನ ಸಮೀಪ ಒಯ್ದಿತು. ಅವರು ಅತ್ಯಂತ ಸಂಯಮದಿಂದ ಪರಿಸ್ಥಿತಿಯನ್ನು ನಿರ್ವಹಿಸಿದರು. ಪಕ್ಷದ, ಕಾರ್ಮಿಕ ಸಂಘ ಚಟುವಟಿಕೆಯ ಪ್ರತಿಯೊಂದು ಆಯಾಮವನ್ನು ಕಲಿಸಿದರು. ನನಗೆ ಪುಸ್ತಕಗಳನ್ನು, ದಸ್ತಾವೇಜುಗಳನ್ನು ನೀಡಿ ಅಧ್ಯಯನ ಮಾಡಲು ಹೇಳಿದರು. ಪ್ರಶ್ನೆ ಕೇಳಿ ನನ್ನ ತಿಳುವಳಿಕೆಯನ್ನೂ ಪರೀಕ್ಷಿಸಿದರು. ಆಗ ಅವರ ಮಾರ್ಗದರ್ಶನದಲ್ಲಿ ನಾನು ಸಂಘಟಿಸಿದ ಮೊದಲ ಯೂನಿಯನ್, ಬೆಂಗಳೂರು ಜಿಲ್ಲಾ ಇಂಜಿನಿಯರಿಂಗ್ ಮತ್ತು ಜನರಲ್ ವರ್ಕರ್ಸ್ ಯೂನಿಯನ್‌ನ ಕೆಲಸದಲ್ಲಿ ಓಡಾಡುತ್ತಿದ್ದಾಗ ನನ್ನ ಹೆಣ್ಣು ಮಗುವನ್ನು ಅವರೇ ನೋಡಿಕೊಳ್ಳುತ್ತಿದ್ದರು. ಪಕ್ಷದ ಧೋರಣೆಯ ಬಗ್ಗೆ ಅವರೊಡನೆ ವಾದ ಮಾಡುತ್ತಿದ್ದೆ. ಅವರು ನನ್ನನ್ನು ಇನ್ನಷ್ಟು ಓದುವಂತೆ ಮಾಡಿ ಸಂಶಯ ಪರಿಹರಿಸುತ್ತಿದ್ದರು. ಒಂದು ರೀತಿಯಲ್ಲಿ ಸಂಶಯಗಳನ್ನು ಸ್ವತಃ ಪರಿಹರಿಸಿಕೊಳ್ಳುವುದು ಹೇಗೆ ಎಂದು ಕಲ್ಪಿಸಿಕೊಟ್ಟವರು. ಅವರೇ 1969 ರ ಅಂತ್ಯದ ವೇಳೆಗೆ ಸಿ.ಪಿ.ಐ(ಎಂ) ಬಗ್ಗೆ ನನಗೇನೂ ಸಂಶಯ ಉಳಿದಿರಲಿಲ್ಲ. ಕೊನೆಗೆ ನಾನು ಮಮತೆಯಿಂದ ಇಟ್ಟುಕೊಂಡಿದ್ದ ನಕ್ಸಲ್‌ವಾದೀ ಪತ್ರಿಕೆ 'ಲಿಬರೇಶನ್' ನ ಪ್ರತಿಗಳನ್ನೆಲ್ಲಾ ತರಲು ಹೇಳಿ ಕುಟ್ಟಪ್ಪನವರು ತನ್ನೆದುರಲ್ಲೇ ಅದಕ್ಕೆ ಬೆಂಕಿ ಹಚ್ಚಲು ಹೇಳಿದರು. ದೃಢ ವಿಶ್ವಾಸದಿಂದ ಅವರ ನಿರ್ದೇಶನವನ್ನು ಪಾಲಿಸಿದೆ. ಈ ಬಗ್ಗೆ ನಾನೆಂದೂ ಪಶ್ಚಾತ್ತಾಪ ಪಟ್ಟಿಲ್ಲ.

1967 ರ ಅಂತ್ಯದ ಹೊತ್ತಿಗೆ ನನ್ನನ್ನು, ವಿ.ಎನ್. ಸುಬ್ರಮಣ್ಯನ್ ಮತ್ತು ಪಿ.ಆರ್.ಜಯರಾಜ್ (ಮೂವರೂ ಬಿ.ಇ.ಎಲ್.ನವರು) ರವರನ್ನು ಪಕ್ಷದ ಸದಸ್ಯರಾಗಿ ಸೇರಿಸಿ ಕೊಳ್ಳಲು ಪಕ್ಷದ ರಾಜ್ಯಸಮಿತಿ ನಿರ್ಧರಿಸಿರುವುದಾಗಿ ಕುಟ್ಟಪ್ಪ ತಿಳಿಸಿದರು. ನಮ್ಮ ಆಂದೋಲನದ ಅಭಿನ್ನ ಭಾಗವಾಗಿದ್ದ ಬಿ.ಇ.ಎಲ್. ನ 28 ಕಾರ್ಮಿಕರನ್ನು ಅಭ್ಯರ್ಥಿಗಳನ್ನಾಗಿ ಶಿಫಾರಸು ಮಾಡಲು ನಮಗೆ ಸಾಧ್ಯವಾಗುವಂತೆ ನಮ್ಮನ್ನು ನೇರವಾಗಿ ಪೂರ್ಣಸದಸ್ಯರಾಗಿ ಸೇರಿಸಲಾಯಿತು.

ಈ ಎಲ್ಲಾ ಚಟುವಟಿಕೆಗಳನ್ನು ನಾನು ಬಿ.ಇ.ಎಲ್. ಕಾಲೋನಿಯ ಕ್ವಾರ್ಟರ್ ನಂ. ಎನ್.ಎ. 266 ರಿಂದಲೇ ನಡೆಸುತ್ತಿದ್ದೆ. ನನ್ನನ್ನು ವಜಾ ಮಾಡಿದ ನಂತರವೂ ನಾನು ಈ ಕ್ವಾರ್ಟರ್‌ನಲ್ಲಿ ಬಲವಂತದಿಂದ ಮುಂದುವರಿದಿದ್ದೆ.

ಅಲ್ಲೇ ವಾಸಿಸುತ್ತಾ ಪಕ್ಷವನ್ನು ವಿಕಾಸಗೊಳಿಸಿದೆ. ಎ.ಐ.ಟಿ.ಯು.ಸಿ ನಿಂದ ಒಡೆದು ಪ್ರತ್ಯೇಕವಾದಾಗ, ಸಿ.ಐ.ಟಿ.ಯು ಸ್ಥಾಪನೆಯ ಮುನ್ನ ಜನವರಿ 1970 ರಲ್ಲಿ ಎ.ಐ.ಟಿ.ಯು.ಸಿ. ಕಾರ್ಯಕರ್ತರು ಹಲವು ಬಾರಿ ಈ ಮನೆಯ ಮೇಲೆ ಹಲ್ಲೆ ನಡೆಸಿದರು.

## ಈ ವಾರ

★ .......ಬಂದ್ ಬೆಂಬಲಿಗರು ದುಂಡಾವರ್ತಿಯಲ್ಲಿ ತೊಡಗಿದ್ದು ಗಂಭೀರ ಕಳವಳಕ್ಕೆ ಕಾರಣವಾಗಿದೆ. ಸಾರ್ವಜನಿಕ ಮತ್ತು ಖಾಸಗಿ ಆಸ್ತಿ ಪಾಸ್ತಿಗೆ ವ್ಯಾಪಕ ಹಾನಿ ಎಸಗಲಾಯಿತು. ಸಾರ್ವಜನಿಕ ಸೊತ್ತಿನ ಮೇಲೆ ಸಂಪೂರ್ಣ ಅಪ್ರಚೋದಿತವಾಗಿ ದಾಳಿ ಮಾಡಿದ್ದು ಇನೂ ಕೆಟ್ಟದ್ದು. ಬ್ಯಾಂಕ್ ಮತ್ತು ಸರಕಾರಿ ಕಚೇರಿಗಳನ್ನು ತೆರೆಯಲು ಪ್ರಯತ್ನಿಸಲಿಲವಾದರೂ ಅವುಗಳ ಮೇಲೆ ದುಷ್ಕರ್ಮಿಗಳು ಆಕ್ರಮಣ ಮಾಡಿದರು. ಇಬ್ಬರು ಜೀವ ಕಳೆದುಕೊಂಡರು.

ಕಾಂಗ್ರೆಸ್(ಐ) ನೇತೃತ್ವದ ಪ್ರತಿಪಕ್ಷ ಇತ್ತೀಚೆಗೆ ವ್ಯವಸ್ಥೆಗೊಳಿಸಿದ 'ಕೇರಳ ಬಂದ್' ಅದರ ರಾಜಕೀಯ ಉದ್ದೇಶ ಸಾಧನೆಗಾಗಿ ನಡೆಸಿದ್ದು ಎನ್ನುವುದಕ್ಕೆ ಯಾವುದೇ ಸಾಕ್ಷಿ ಬೇಕಾಗಿಲ್ಲ.

ಕೇರಳ ಇದುವರೆಗೆ ಹಿಂಸಾಚಾರದಿಂದ ಮುಕ್ತವಾಗಿದ್ದು ದೇಶಾದ್ಯಂತ ಹೆಚ್ಚುತ್ತಿರುವ ಹಿಂಸೆಯ ಹಿನ್ನೆಲೆಯಲ್ಲಿ ಸೋಮವಾರದ (ಬಂದ್‌ದಿನ)ಹಿಂಸಾಚಾರಗಳನ್ನು ನೋಡಬೇಕಾಗಿದೆ.

'ಇಂಡಿಯನ್ ಎಕ್ಸ್‌ಪ್ರೆಸ್' ಸಂಪಾದಕೀಯ
ಆಗಸ್ಟ್ 16 (13ರ ಕೇರಳ ಬಂದ್ ಬಗ್ಗೆ)

★ ಅಖಿಲ ಅಸ್ಸಾಮ್ ವಿದ್ಯಾರ್ಥಿ ಸಂಘ (ಎ.ಎ.ಎಸ್.ಯು) ರಾಜ್ಯದ ಸಂಪನ್ಮೂಲಗಳ ಲಾಭ ಅಸ್ಸಾಮ್‌ಗೆ ಮಾತ್ರವೇ ದೊರೆಯಬೇಕೆಂದು ಹೇಳುವುದು ಅತಿರೇಕವಾಗುತ್ತದೆ. ಅದು ಕಾರ್ಯಸಾಧ್ಯವೂ ಅಲ್ಲ. ಅಪೇಕ್ಷಣೀಯವೂ ಅಲ್ಲ. ದೇಶದ ಎಲ್ಲಾ ರಾಜ್ಯಗಳು ಇದೇ ರೀತಿಯ ಬೇಡಿಕೆ ಮಂದಿಟ್ಟರೆ ದೇಶ ಒಟ್ಟಾರೆಯಾಗಿ ಪ್ರಗತಿ ಸಾಧಿಸುವುದು ಸಾಧ್ಯವಿಲ್ಲ.

'ದಿ ಹಿಂದೂಸ್ತಾನ್ ಟೈಮ್ಸ್' ಸಂಪಾದಕೀಯದಲ್ಲಿ
ಆಗಸ್ಟ್ 17.

★ 1990 ಮಾರ್ಚ್ 31 ರ ವೇಳೆಗ ಭಾರತದ ಒಟ್ಟು ವಿದೇಶಿ ಸಾಲ ಪ್ರಸಕ್ತ ವಿನಿಮಯ ದರದನ್ವಯ 80132 ರಿಂದ 132 ಕೋಟಿ ರೂ.ಗಳಾಗಿದ್ದವು.

1989-90 ರಲ್ಲಿ ಸಾಲ ಮರುಪಾವತಿ ಮೊತ್ತ 4808 ಕೋಟಿ ರೂ. ಮತ್ತು ಅದರ ಬಡ್ಡಿ ಪಾವತಿ 3559 ಕೋಟಿ ರೂ. ಗಳಾಗಿದ್ದವು.

ಆಗಸ್ಟ್ 17 ರಂದು ಲೋಕಸಭೆಗೆ ಸಚಿವರ ಮಾಹಿತಿ.

★ ಆಫ್ರಿಕದ 49 ಅಭಿವೃದ್ಧಿಶೀಲ ದೇಶಗಳ ಪ್ರತಿ ಮಗುವಿನ ತಲೆ ಮೇಲೆ *440* ಡಾಲರ್ ವಿದೇಶಿ ಸಾಲದ ಹೊರೆಯಿದೆ. ಇದು ಸರಿಸುಮಾರು ಈ ಖಂಡದ ಸರಾಸರಿ ವಾರ್ಷಿಕ ತಲಾ ಆದಾಯದಷ್ಟಾಗುತ್ತದೆ.

ಆಫ್ರಿಕದ ಒಟ್ಟು ಸಾಲ *1995* ರ ವೇಳೆಗೆ *313* ಬಿಲಿಯ ಡಾಲರ್ ಆಗಬಹುದೆಂಬ ನಿರೀಕ್ಷೆಯಿರುವುದಾಗಿ ಅಂತರ್ ಸರಕಾರಿ ತಜ್ಞರ ತಂಡವೊಂದು ಅಂದಾಜು ಮಾಡಿದೆ.

ಅಂತರರಾಷ್ಟ್ರೀಯ ಅಭಿವೃದ್ಧಿಗಾಗಿನ ಒಪೆಕ್ ನಿಧಿಯ
ಮಹಾನಿರ್ದೇಶಕರ ಲೇಖನದಲ್ಲಿ.

★ 'ಅಪ್ರತಿಮ ರಾಜಕಾರಣಿ ಜ್ಯೋತಿಬಸು'(ಸಾಪ್ತಾಹಿಕ ಪುರವಣಿ ಪ್ರಜಾವಾಣಿ)
ಉದಯನ್ ನಂಬೂದಿರಿ ಅವರ ಲೇಖನ ಉಪಯುಕ್ತವಾಗಿತ್ತು. ಪ್ರತಿಯೊಂದು ರಾಜ್ಯದಲ್ಲಿಯೂ ಒಬ್ಬೊಬ್ಬ ಜ್ಯೋತಿಬಸು ಇದ್ದಿದ್ದರೆ ಪ್ರಜಾಪ್ರಭುತ್ವಕ್ಕೆ ಈಗತಿ ಬರುತ್ತಿರಲಿಲ್ಲವೇನೋ?

ಎನ್.ವಿ.ಶ್ರೀಧರ.
ವೆಂಕಟಾಪುರ.

★ 'ಅಧಿಕಾರ ಪಡೆದ ಕೆಲವೇ ವರ್ಷಗಳಲ್ಲಿ ಹಲವು ಹಗರಣಗಳಿಗೆ ಒಳಗಾಗುವ ಮುಖ್ಯಮಂತ್ರಿಗಳನ್ನು ಜ್ಯೋತಿಬಸು ಅವರಂತಹ ರಾಜಕಾರಣಿಗಳಿಂದ ಕಲಿಯುವುದು ಸಾಕಷ್ಟಿದೆ. ಜ್ಯೋತಿಬಸುರವರ ಜನಪ್ರಿಯತೆ ಪ್ರತಿಯೊಬ್ಬರೂ ಮೆಚ್ಚುವಂತಹದು'.

ಕೆಂಪರಾಜ್ ಕಣಸೂರು.

★ 'ದೇಶದ ಪ್ರಸಕ್ತ ರಾಜಕೀಯ ಸ್ಥಿತಿಯ ಬಗ್ಗೆ ಹೇಳುವುದಾದರೆ, ಅದರಲ್ಲಿ ಪ್ರತಿಯೊಬ್ಬ ರಾಜಕಾರಣಿಯೂ ಒಂದಲ್ಲ ಒಂದು ಸಮಸ್ಯೆಯ ಸುಳಿಯಲ್ಲಿ ಸಿಲುಕಿಕೊಂಡಿರುವುದನ್ನು ಕಾಣುತ್ತೇವೆ. ಆದರೆ ಜ್ಯೋತಿಬಸು ಇದಕ್ಕೆ ಹೊರತಾಗಿ ತಮ್ಮದೇ ಆದ ರಾಜಕೀಯ ಚತುರತೆಗೆ ಒಂದು ಸ್ಪಷ್ಟ ನಿದರ್ಶನ.

ಪಿ.ಎಚ್.ಪ್ರಭಾಕರ್
ಚಿತ್ರದುರ್ಗ.

★ 'ಭಾರತ ದೇಶ ಕಂಡ ಮಹಾನ್ ರಾಜಕಾರಣಿ ಜ್ಯೋತಿಬಸು. ನಿಜಕ್ಕೂ ಹಲವು ವಿಶಿಷ್ಟಗಳನ್ನೊಳಗೊಂಡ ಹುಟ್ಟು ಹೋರಾಟಗಾರರ ಹಾಗೂ ಯಾರೊಂದಿಗೂ ಹೋಲಿಸಲಾಗದ ಯಶಸ್ವಿ ರಾಜಕಾರಣಿ. ಲೇಖನ ಸತ್ವಯುತವಾಗಿದ್ದು ಬಹಳ ಮೆಚ್ಚುಗೆಯಾಯಿತು.

Printed and Published by P.Ramachandra Rao on behalf of the Communist Party of India (Marxist) Karnataka State